
# ಕಾರ್ಮಿಕ ದೃಷ್ಟಿಕೋನ

**ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ | SUCI(C)**
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಸಂಪುಟ: 37 ಸಂಚಿಕೆ: 08
ಅಕ್ಟೋಬರ್ 2024
ಬೆಲೆ: ರೂ. 7/-




**ಒಳ ಪುಟಗಳಲ್ಲಿ.............**

ಅಭಯಾಳಿಗೆ, ದೇಶದ ಜನರಿಗೆ ನ್ಯಾಯಕೊಡಿ.............3
ಬಾಂಗ್ಲಾದಲ್ಲಿ ಕೋಲಾಹಲ : ಸತ್ಯಸಂಗತಿ ಏನು?.........5
ದಾವಣಗೆರೆ : ಯುಬಿಡಿಟಿ ಉಳಿಸಿ ಸಮಾವೇಶ.............6
ವಲಯ ಮಟ್ಟದ ಯುವಜನರ ಸಂಕಲ್ಪ ಸಮಾವೇಶ ....7
ವೆಬಿನಾರ್ : ಬಿಕ್ಕಟ್ಟಿನ ಘಟ್ಟದಲ್ಲಿ ಪಶ್ಚಿಮ ಘಟ್ಟ...............9

**ಕಿಸಾನ್ ಮಹಾಪಂಚಾಯತ್ : ನವ ದೆಹಲಿ : 23.09.2024**

# ರೈತ ಹೋರಾಟಗಾರರಿಂದ ಉಕ್ಕಿ ಹರಿದ ತಾಲ್‌ಕಟೋರಾ ಸ್ಟೇಡಿಯಂ




ದೇಶದ ಹತ್ತಾರು ರಾಜ್ಯಗಳಿಂದ ರೈತರ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಹರಿದು ಬಂದ ಸಮರಶೀಲ ರೈತ ಹೋರಾಟಗಾರರು ತಾಲ್‌ಕಟೋರಾ ಸ್ಟೇಡಿಯಂನಲ್ಲಿ ಕಿಕ್ಕಿರಿದು ತುಂಬಿದ್ದರು. ಕೇಂದ್ರ ಸರ್ಕಾರದ ಪೀಠಸ್ಥಾನವಾದ ದೇಶದ ರಾಜಧಾನಿಯಲ್ಲಿ ತಮ್ಮ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಹಸ್ರಾರು ರೈತ ಹೋರಾಟಗಾರರು ಎಲ್ಲಾ ಕಷ್ಟ ಕೋಟಲೆಗಳನ್ನು ಮೀರಿ ಬಂದು ಸೇರಿದ್ದರು. ತಾವು ಮತ್ತು ತಮ್ಮ ಕುಟುಂಬ ಬೆವರು ಸುರಿಸಿ ದುಡಿದು ಬೆಳೆದ ಬೆಳೆಗಳಿಗೆ ನ್ಯಾಯಯುತವಾದ ಮತ್ತು ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ ಮಾಡುವಂತಹ ಬೆಲೆಯನ್ನು ಸಿ2+ಶೇ.50 ಸೂತ್ರದಡಿ ನಿಗದಿಪಡಿಸಬೇಕು; ರೈತರನ್ನು ದಿವಾಳಿಯೆಬ್ಬಿಸುವ ವಿದ್ಯುತ್ ತಿದ್ದುಪಡಿ ಮಸೂದೆ–2023 ಕೂಡಲೇ ವಾಪಾಸಾಗಬೇಕು; ರೈತರ ಸಾಲ ಮನ್ನಾ ಆಗಬೇಕು ಮತ್ತು ರೈತರಿಗೆ ವಯಸ್ಸಾದ ಸಮಯದಲ್ಲಿ ಪಿಂಚಣಿ ಕೊಡಬೇಕು; ಬೀಜ, ಗೊಬ್ಬರ, ಕೀಟನಾಶಕಗಳಂತಹ ಉತ್ತಮ 4ನೇ ಪುಟಕ್ಕೆ

**ಕಲಬುರಗಿ : 13,14 ಸೆಪ್ಟೆಂಬರ್ 2024**

## ಆಶಾ ಕಾರ್ಯಕರ್ತೆಯರ ರಾಜ್ಯ ಮಟ್ಟದ ಪ್ರಥಮ ಸಮ್ಮೇಳನ

# ರಾಜಿರಹಿತ ಒಗ್ಗಟ್ಟಿನ ಹೋರಾಟವೊಂದೇ ದಾರಿ–ಕಾಮ್ರೇಡ್ ಕೆ. ಉಮಾ

ಎಐಯುಟಿಯುಸಿಗೆ ಸಂಯೋಜನೆಗೊಂಡ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಪ್ರಥಮ ರಾಜ್ಯ ಸಮ್ಮೇಳನ ಕಲ್ಬುರ್ಗಿಯಲ್ಲಿ ಅತ್ಯಂತ ಸ್ಪೂರ್ತಿಯುತವಾಗಿ ಜರುಗಿತು. ಇದರ ಅಂಗವಾಗಿ ರಾಜ್ಯದ ಮೂಲೆ ಮೂಲೆಗಳಿಂದ ಕಲ್ಬುರ್ಗಿ ನಗರಕ್ಕೆ ಆಗಮಿಸಿದ್ದ ಸಹಸ್ರಾರು ಗುಲಾಬಿ ಯೋಧರು ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿದರು. ಮೆರವಣಿಗೆಯುದ್ದಕ್ಕೂ, 'ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ!' 'ಕಾರ್ಮಿಕರೆಂದು ಪರಿಗಣಿಸಿ, ಗೌರವ ಧನ ರೂ.15,000 ನಿಗದಿಪಡಿಸಿ!' 'ಬಿಟ್ಟಿ ಕೆಲಸ ಒಪ್ಪೋದಿಲ್ಲ! ದುಡಿಮೆಗೆ ತಕ್ಕ ವೇತನ ನೀಡಲೇಬೇಕು! ಸರ್ಕಾರದ ಒಣ ಮಾತು ಸಾಕು–ಸ್ಪಂದನೆ ಬೇಕು !', 'ರಾಜಿರಹಿತ ಒಗ್ಗಟ್ಟಿನ ಹೋರಾಟ ಚಿರಾಯುವಾಗಲಿ'–ಮುಂತಾದ ಘೋಷಣೆಗಳನ್ನು ಕೂಗಿದರು. ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಿಂದ ಮುಖ್ಯ ರಸ್ತೆಯಲ್ಲಿ ಸಾಗಿ, ವೀರಶೈವ ಕಲ್ಯಾಣ ಮಂಟಪದ ಎದುರಿನ ಸಾರ್ವಜನಿಕ ಉದ್ಯಾನವನ ಮೈದಾನದವರೆಗೆ ಮೆರವಣಿಗೆಯು ಸಾಗಿತು.

### ಬಹಿರಂಗ ಅಧಿವೇಶನ

ಸಾರ್ವಜನಿಕ ಉದ್ಯಾನವನ ಮೈದಾನದಲ್ಲಿ ನಡೆದ ಬಹಿರಂಗ ಅಧಿವೇಶನದ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ.ಉಮಾರವರು, ನೆರೆದ ಆಶಾ ಕಾರ್ಯಕರ್ತೆಯರನ್ನು ಉದ್ದೇಶಿಸಿ ಮಾತನಾಡುತ್ತಾ, "ಜನತೆಯ ಆರೋಗ್ಯವನ್ನು ಕಾಪಾಡಲು ಕರೋನಾ ಕಾಲದಲ್ಲಿ ಜೀವವನ್ನೇ ಪಣಕ್ಕಿಟ್ಟು ಹೋರಾಡಿದ್ದನ್ನು ಇಡೀ ಜಗತ್ತೇ ಕೊಂಡಾಡಿದೆ. ಆದರೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಆಡಳಿತ ನಡೆಸಿದ ಎಲ್ಲಾ ಪಕ್ಷಗಳ 8ನೇ ಪುಟಕ್ಕೆ



# ಝಿಯೊನಿಸ್ಟ್ ಇಸ್ರೇಲ್‌ನಿಂದ ಹಿಜ್ಬುಲ್ಲಾ ಮತ್ತು ಹಮಾಸ್ ಅತ್ಯುನ್ನತ ಮುಖ್ಯಸ್ಥರ ಹತ್ಯೆ

## ಎಸ್‌ಯುಸಿಐ(ಸಿ) ಖಂಡನೆ

**ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಈ ಕೆಳಗಿನ ಹೇಳಿಕೆ ನೀಡಿದ್ದಾರೆ**

ಅಮೆರಿಕಾ ಬೆಂಬಲಿತ ಝಿಯೊನಿಸ್ಟ್ ಇಸ್ರೇಲ್, ಪ್ಯಾಲೆಸ್ಟೀನ್ ಮತ್ತು ಲೆಬನಾನ್ ಮೇಲೆ ನಡೆಸಿದ ಸರಣಿ ದಾಳಿಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ; ಇದರಿಂದಾಗಿ, ಮೊದಲು ಪ್ಯಾಲೆಸ್ಟೀನ್ ಪ್ರತಿರೋಧಿ ಸಂಘಟನೆಯಾದ ಹಮಾಸ್, ಮತ್ತೀಗ, ಲೆಬನಾನಿನ ಸಾಮ್ರಾಜ್ಯಶಾಹಿ ವಿರೋಧಿ ರಾಜಕೀಯ ಪಕ್ಷವಾದ ಹಿಜ್ಬುಲ್ಲಾ ಇವುಗಳ ಅತ್ಯುನ್ನತ ಮುಖ್ಯಸ್ಥರ ಹತ್ಯೆಯಾಗಿದೆ. ಕಳೆದ ಜುಲೈಯಲ್ಲಿ ಹಮಾಸ್‌ನ ಮಿಲಿಟರಿ ಪಡೆಯ ಸಂಸ್ಥಾಪಕರಲ್ಲಿ ಒಬ್ಬರಾದ ಮೊಹಮ್ಮದ್ ಢಿಫ್‌ರನ್ನು ಹತ್ಯೆಗೈಯ್ಯಲಾಗಿತ್ತು; ತದನಂತರ ಇನ್ನಿಬ್ಬರು ಹಮಾಸ್ ನಾಯಕರನ್ನು ಕೊಲ್ಲಲಾಯಿತು. ಕಳೆದ ಸೆಪ್ಟೆಂಬರ್ 27ರಂದು, ಲೆಬನಾನಿನ ರಾಜಧಾನಿಯಲ್ಲಿ ಇಸ್ರೇಲ್ ನಡೆಸಿದ ಮಿಲಿಟರಿ ದಾಳಿಯಲ್ಲಿ ಹಿಜ್ಬುಲ್ಲಾ ಮುಖ್ಯಸ್ಥರಾದ ಹಸನ್ ನಸರಲ್ಲಾರವರನ್ನು ಕ್ರೂರವಾಗಿ ಹತ್ಯೆಗಯ್ಯಲಾಯಿತು. ಈ ಹಿಂದೆಯೂ ಪ್ಯಾಲೆಸ್ಟೀನ್ ಜನರ ಸ್ವಾತಂತ್ರ್ಯಕ್ಕಾಗಿ ಧೀರೋದಾತ್ತವಾಗಿ ಹೋರಾಡುತ್ತಿದ್ದ ಸಾಮ್ರಾಜ್ಯಶಾಹಿ–ವಿರೋಧಿ ಇಸ್ಲಾಮಿಕ್ ಪಕ್ಷದ ಆರು ಜನ ಅತ್ಯುನ್ನತ ಮುಖ್ಯಸ್ಥರನ್ನು ಸಹ ಇಸ್ರೇಲಿ ಮಿಲಿಟರಿಯು ಒಂದು ಯೋಜಿತ ರೀತಿಯಲ್ಲಿ ಕ್ರೂರವಾಗಿ ಹತ್ಯೆಗೈದಿತ್ತು. ಕಳೆದ ಏಪ್ರಿಲ್‌ನಲ್ಲಿ ಡಮಾಸ್ಕಸ್‌ನಲ್ಲಿರುವ ಇರಾನಿನ ರಾಯಭಾರಿ ಕಛೇರಿಯನ್ನು ನಾಶಗೊಳಿಸಿದ ಇಸ್ರೇಲಿ ವಾಯುದಾಳಿಯಲ್ಲಿ, ಇರಾನಿನ ಓರ್ವ ಹಿರಿಯ ಮಿಲಿಟರಿ ಮುಖ್ಯಸ್ಥರಾದ ರೆಜ಼ಾ ಝಹೇದಿ ಹಾಗೂ ಅವರ ಸಹಾಯಕರಾದ ಮೊಹಮ್ಮದ್ ಹದಿ ಹಜ್ರಿಯಾಹಿಮಿಯವರನ್ನು ಹತ್ಯೆಗೈಯ್ಯಲಾಗಿತ್ತು.

ಶಾಂತಿಪ್ರಿಯ ಅಂತರರಾಷ್ಟ್ರೀಯ ಸಮುದಾಯವು ಮತ್ತೆ ಮತ್ತೆ ವಿನಂತಿಸಿಕೊಂಡರೂ, ಅದನ್ನು ಕಡೆಗಣಿಸಿ, ಅಮೆರಿಕಾ ಸಾಮ್ರಾಜ್ಯವಾದದ ಸಂಪೂರ್ಣ ಬೆಂಬಲದಿಂದ ಇಸ್ರೇಲ್ ಬಹುಕಾಲದಿಂದಲೂ ಬಹಿರಂಗವಾಗಿಯೇ ಜನಾಂಗೀಯ ಶುದ್ಧೀಕರಣದ ಘೋಷಣೆ ಮಾಡಿ ಪ್ಯಾಲೆಸ್ಟೀನ್‌ನಲ್ಲಿ ನರಮೇಧ ನಡೆಸುತ್ತಿದೆ. ಇದೀಗ ಅದು ತನ್ನ ಫಿರಂಗಿಯನ್ನು ಹಿಜ್ಬುಲ್ಲಾ ಕಡೆಗೆ ತಿರುಗಿಸಿದೆ. ಹೀಗೆ, ಇಸ್ರೇಲ್, ಅಮೆರಿಕದ ಸಾಮ್ರಾಜ್ಯಶಾಹಿ ಮತ್ತದರ ಮಿತ್ರ ದೇಶಗಳು ಈ ತೈಲ ಸಂಪತ್ಭರಿತ ನಾಡಾದ ಮಧ್ಯಪ್ರಾಚ್ಯದಲ್ಲಿ ನಡೆಸುತ್ತಿರುವ ಗೂಂಡಾಗಿರಿ ಮತ್ತು ಡಕಾಯಿತಿಯನ್ನು ವಿರೋಧಿಸುವ ಅಲ್ಲಿಯ ಎಲ್ಲಾ ದೇಶಗಳು ಮತ್ತು ಶಕ್ತಿಗಳ ಮೇಲೆ ಮರಣಾಂತಿಕ ಮಿಲಿಟರಿ ದಾಳಿಯನ್ನು ನಡೆಸುತ್ತಿದೆ. ಭಾರತದ ಪ್ರಧಾನಿಯವರು, ಇತ್ತೀಚೆಗೆ, ರಷ್ಯಾ ಮತ್ತೆ ಉಕ್ರೇನ್‌ಗಳಂತಹ ಯುದ್ಧನಿರತ ದೇಶಗಳ ನಡುವೆ ಶಾಂತಿ ಸ್ಥಾಪಿಸುವ ದಲ್ಲಾಳಿ ತಾನು ಎಂದು ತಮ್ಮನ್ನೇ ತಾವು ಘೋಷಿಸಿಕೊಂಡಿದ್ದರೂ, ಭಾರತ, ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ, ಇಸ್ರೇಲ್ ತನ್ನ ವಶದಲ್ಲಿರುವ ಪ್ಯಾಲೆಸ್ಟೀನ್‌ನ ಪ್ರದೇಶದಲ್ಲಿ ನಡೆಸುತ್ತಿರುವ ಭೀಕರ ದಾಳಿಗೆ ಈ ಕೂಡಲೇ ಕೊನೆ ಹಾಕಬೇಕು ಎಂದು ಆಗ್ರಹಿಸುವ ಗೊತ್ತುವಳಿಗೆ ಮತ ಹಾಕುವುದರಿಂದ ಎರಡು ಬಾರಿ ಹಿಂದೆ ಸರಿದಿರುವುದು ಸಹ ಹೇಯವಾದ ಕೆಲಸ. ಅಷ್ಟಲ್ಲದೆ, ಭಾರತ, ಝಿಯೊನಿಸ್ಟ್ ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳ ಸರಬರಾಜನ್ನು ಸಹ ಮಾಡುತ್ತಿದೆ.

ಪ್ಯಾಲೆಸ್ಟೀನ್ ಜನರು ಮತ್ತು ಸ್ವಾತಂತ್ರ್ಯದ ಅವರ ನ್ಯಾಯಬದ್ಧ ಬೇಡಿಕೆಯನ್ನು ಬೆಂಬಲಿಸುತ್ತಿರುವ ದೇಶಗಳ ಮೇಲೆ ಈ ಅಮೇರಿಕಾ ಸಾಮ್ರಾಜ್ಯಶಾಹಿ ಬೆಂಬಲಿತ ನಗ್ನ ಇಸ್ರೇಲಿ ದಾಳಿಯನ್ನು ನಿಲ್ಲಿಸಲು, ಒಂದು ಒಗ್ಗಟ್ಟಿನ, ಉತ್ತಮವಾಗಿ ಸಮನ್ವಯಗೊಳಿಸಲ್ಪಟ್ಟ, ಪ್ರಬಲ ವಿಶ್ವವ್ಯಾಪಿ ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟವನ್ನು ಕಟ್ಟಲು ನಾವು ಜಗತ್ತಿನ ಎಲ್ಲಾ ಜನರಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

# ಹಾಲಿನ ದರ ಏರಿಕೆ ಪ್ರಸ್ತಾಪ

## ಎಸ್‌ಯುಸಿಐ(ಸಿ) ವಿರೋಧ

ಎಸ್‌ಯುಸಿಐ(ಸಿ) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ನೀಡಿರುವ ಪತ್ರಿಕಾ ಹೇಳಿಕೆ:

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾಗಡಿ ಪಟ್ಟಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ ಮಾತನಾಡುತ್ತಾ, ಮುಂಬರುವ ದಿನಗಳಲ್ಲಿ ಹೈನುಗಾರರ ಆದಾಯವನ್ನು ಹೆಚ್ಚಿಸುವ ದೃಷ್ಟಿಯಿಂದ ಒಂದು ಲೀಟರ್ ಹಾಲಿನ ಬೆಲೆಯನ್ನು ಐದು ರೂಪಾಯಿಗಳಷ್ಟು ಹೆಚ್ಚಿಸುವಂತೆ ಹೈನುಗಾರ ರೈತರು ಆಗ್ರಹಿಸುತ್ತಿದ್ದಾರೆ, ಆದ್ದರಿಂದ ದರ ಏರಿಸಿ ರೈತರಿಗೆ ಲಾಭ ಬರುವಂತೆ ಮಾಡಲಾಗುವುದು ಎಂದು ಹೇಳಿರುವುದು ಸಾಮಾನ್ಯ ಜನರಿಗೆ ಆಘಾತಕಾರಿಯಾಗಿದೆ.

ಹಸು ಸಾಕುವ ರೈತರಿಗೆ ಲಾಭ ತಂದುಕೊಡುವ ಉದ್ದೇಶದಿಂದ ಈ ದರ ಏರಿಕೆ ಮಾಡಲಾಗುವುದು ಎಂದು ಅವರು ಮಾತನಾಡಿದ್ದಾರೆ. ವಾಸ್ತವದಲ್ಲಿ ಹೈನುಗಾರಿಕೆಯ ವೆಚ್ಚವನ್ನು ಕಡಿಮೆ ಮಾಡಲು ಹಸು ಸಾಕಣಿಕೆಗೆ ಅಗತ್ಯವಾದ ಹಿಂಡಿ, ಮೇವು ಇತ್ಯಾದಿ ಪಶು ಆಹಾರಗಳ ಬೆಲೆಗಳನ್ನು ಕಡಿಮೆ ಮಾಡಬೇಕು; ತನ್ಮೂಲಕ ಹೈನುಗಾರಿಕೆ ಮಾಡುತ್ತಿರುವ ರೈತರ ಹೊರೆಯನ್ನು ಇಳಿಸಬೇಕು. ಅದು ಜವಾಬ್ದಾರಿಯುತ ನಡವಳಿಕೆ. ಆದರೆ ನಮ್ಮ ಮುಖ್ಯಮಂತ್ರಿಗಳು ಆ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ರೈತರ ಹೊರೆಯನ್ನು ಸಾಮಾನ್ಯ ಜನರ ಹೆಗಲಿಗೆ ವರ್ಗಾಯಿಸುತ್ತಿರುವುದು ಜನವಿರೋಧಿ ಕ್ರಮವಾಗುತ್ತದೆ. ಹಾಲಿನ ದರ ಏರಿಕೆಯು ಜನರ ಒಟ್ಟಾರೆ ಜೀವನ ವೆಚ್ಚವನ್ನು ಹೆಚ್ಚಿಸುವುದರಿಂದ ಅದು ಬೆಲೆ ಏರಿಕೆಯ ವಿಷಚಕ್ರಕ್ಕೆ ವೇಗ ನೀಡಿದಂತಾಗುತ್ತದೆ. ಆದ್ದರಿಂದ ರೈತರನ್ನು ಮತ್ತು ಜನಸಾಮಾನ್ಯರನ್ನು ಪರಸ್ಪರ ಎತ್ತಿ ಕಟ್ಟುವ ಇಂತಹ ಸಮೀಪ ದೃಷ್ಟಿಯ ಆಲೋಚನೆಯನ್ನು ಕೈಬಿಡಬೇಕೆಂದು ಕಮ್ಯುನಿಸ್ಟ್ ಪಕ್ಷವು ಮಾನ್ಯ ಮುಖ್ಯಮಂತ್ರಿಗಳಿಗೆ ಆಗ್ರಹಿಸುತ್ತದೆ.

# ಗಾಜ಼ಾ ನರಮೇಧ

## ತಮ್ಮ ಪ್ರಧಾನಿಯನ್ನು 'ಯುದ್ಧಾಪರಾಧಿ' ಎಂದು ಕರೆದ ಇಸ್ರೇಲ್ ನಾಗರಿಕರು!

ಸಾವಿರಾರು ಇಸ್ರೇಲಿಗಳು ಇಸ್ರೇಲ್‌ನ ರಾಜಧಾನಿಯಾದ ಟೆಲ್‌ಅವಿವ್‌ನಲ್ಲಿ ಕದನ ವಿರಾಮದ ಒಪ್ಪಂದಕ್ಕಾಗಿ, ತಕ್ಷಣವೇ ಚುನಾವಣೆಗಳನ್ನು ನಡೆಸಲು ಮತ್ತು ಹಮಾಸ್‌ರ ಅಡಿಯಲ್ಲಿ ಒತ್ತೆಯಾಳುಗಳಾಗಿರುವವರನ್ನು ವಾಪಸ್ಸು ಹಿಂತಿರುಗಿಸಬೇಕೆಂದು ಆಗ್ರಹಿಸಿ ಪ್ರತಿಭಟನೆಯನ್ನು ನಡೆಸಿದರು. ಗಾಜ಼ಾ ಮೇಲೆ ಇಸ್ರೇಲ್ ನಡೆಸಿದ ಯುದ್ಧವನ್ನು ಖಂಡಿಸಿ ನಡೆದ ಪ್ರತಿರೋಧ ರ್‍ಯಾಲಿಗಳಲ್ಲಿಯೇ ದೊಡ್ಡ ಮಟ್ಟದ ರ್‍ಯಾಲಿಯು ಇದಾಗಿದ್ದು, ಸುಮಾರು 1,50,000 ಜನರು ಭಾಗವಹಿಸಿದ್ದರು ಎಂದು ಅಂದಾಜಿಸಲಾಗಿದೆ.

ಮತ್ತು ಮಕ್ಕಳು ಎಂದೂ ವರದಿಯಾಗಿದೆ. ಗಾಜಾ ಆರೋಗ್ಯ ಸಚಿವಾಲಯದ ಪ್ರಕಾರ, ಸುಮಾರು 10,000 ಕ್ಕೂ ಹೆಚ್ಚು ಮಕ್ಕಳು ಗಾಜ಼ಾ ಯುದ್ಧದಲ್ಲಿ ಮರಣವನ್ನಪ್ಪಿದ್ದಾರೆ. ಸಾವಿರಾರು ಮಕ್ಕಳು ಅನಾಥರಾಗಿದ್ದಾರೆ ಮತ್ತು ಇಸ್ರೇಲಿ ವೈಮಾನಿಕ ದಾಳಿಯಿಂದಾಗಿ ಕೈಕಾಲುಗಳನ್ನು ಕಳೆದುಕೊಂಡಿದ್ದಾರೆ.

ವಾಸ್ತವವಾಗಿ, ಸರ್ಕಾರದ ನಿರ್ವಹಣೆಯನ್ನು ಟೀಕಿಸಿ ಮತ್ತು ಪ್ರಧಾನ ಮಂತ್ರಿಗಳಾದ ಬೆಂಜಮಿನ್ ನೆತನ್ಯಾಹು ಅವರ ರಾಜೀನಾಮೆಗೆ ಒತ್ತಾಯಿಸಿ, ಯುದ್ಧವು ಆರಂಭವಾದ ತಕ್ಷಣವೇ




ಧಾರವಾಡ: ಪ್ಯಾಲೆಸ್ಟೀನ್ ಮತ್ತು ಲೆಬನಾನ್ ಮೇಲಿನ ಅಮೆರಿಕಾ ಬೆಂಬಲಿತ ಇಸ್ರೇಲ್ ದಾಳಿಯ ವಿರುದ್ಧ ಕ್ರಾಂತಿಕಾರಿ ಪಕ್ಷಗಳು ಮತ್ತು ಸಂಘಟನೆಗಳ ಅಂತರರಾಷ್ಟ್ರೀಯ ಸಮನ್ವಯ ವೇದಿಕೆಯ (ಐಸಿಓಆರ್) ಆಶ್ರಯದಲ್ಲಿ ಎಸ್‌ಯುಸಿಐ(ಸಿ) ಸಂಘಟಿತ ಪ್ರತಿಭಟನೆ

ಟೆಲ್‌ಅವಿವ್‌ನಲ್ಲಿ ಪ್ರತಿಭಟನಾಕಾರರು ಲೋಹದ ಪಂಜರವನ್ನು ಮುಖ್ಯ ರಸ್ತೆಯಲ್ಲಿ ಇರಿಸಿ ಬೆಂಕಿ ಹಚ್ಚುವ ಮೂಲಕ ರಸ್ತೆ ಅಡ್ಡಗಟ್ಟಿದರು. ಇಸ್ರೇಲ್‌ನಲ್ಲಿ ಅಂತ್ಯವಿಲ್ಲದ ಯುದ್ಧ ಮುನ್ನಡೆಸುತ್ತಿರುವ ಪ್ರಧಾನ ಮಂತ್ರಿ ನೇತಾನ್ಯಹು ಸರ್ಕಾರವನ್ನು ಟೀಕಿಸಿದರು.

ಅನೇಕ ಪ್ರತಿಭಟನಾಕಾರರು 'ಯುದ್ಧಾಪರಾಧಿ' ಮಂತ್ರಿ" ಮತ್ತು "ಯುದ್ಧವನ್ನು ನಿಲ್ಲಿಸಿ" ಎಂಬ ಫಲಕಗಳನ್ನು ಹಿಡಿದಿದ್ದರು. "ನಾನು ಇಲ್ಲಿದ್ದೇನೆ, ಏಕೆಂದರೆ ನಾನು ನನ್ನ ಮೊಮ್ಮಗನ ಭವಿಷ್ಯದ ಬಗ್ಗೆ ಭಯಭೀತನಾಗಿದ್ದೇನೆ. ಈ ಜನವಿರೋಧಿ ಸರ್ಕಾರವನ್ನು ಕಿತ್ತೊಗೆಯಲು ನಾವು ಈಗ ಹೊರಗೆ ಬರದಿದ್ದರೆ, ನಮ್ಮ ಯುವಪೀಳಿಗೆಗೆ ಯಾವುದೇ ಭವಿಷ್ಯವಿರುವುದಿಲ್ಲ" ಎಂದು ಭಾಗವಹಿಸಿದವರಲ್ಲಿ ಒಬ್ಬರು ಹೇಳಿದರು. "ನಾನು ನಿಜವಾಗಿಯೂ ಸರ್ಕಾರ ಪತನವಾಗಲಿ ಎಂದು ಆಶಿಸುತ್ತೇನೆ" ಎಂದು ಮತ್ತೋರ್ವ ಪ್ರತಿಭಟನಾಕಾರರು ತಿಳಿಸಿದರು. ಕೆಲವು ಪ್ರತಿಭಟನಾಕಾರರು ಕೆಂಪು ಬಣ್ಣದಿಂದ ಆವೃತ್ತವಾದ ನೆಲದ ಮೇಲೆ ಮಲಗಿ ನಗರದ ಪ್ರಜಾಪ್ರಭುತ್ವ ಚೌಕದಲ್ಲಿ ಪ್ರತಿಭಟಿಸುವುದರ ಜೊತೆಗೆ ಪ್ರಧಾನ ಮಂತ್ರಿ ನೇತಾನ್ಯಾಹು ಅಡಿಯಲ್ಲಿ ಪ್ರಜಾಪ್ರಭುತ್ವ ಕಗ್ಗೊಲೆಯಾಗಿದೆ ಎಂದು ಹೇಳಿದರು. ಇಸ್ರೇಲ್‌ನಲ್ಲಿ ವಾಕ್ ಸ್ವಾತಂತ್ರ್ಯದ ಮೇಲೆ ದಬ್ಬಾಳಿಕೆ ನಡೆಸಲಾಗಿದೆ ಎಂದು ಹೇಳಲಾಗುತ್ತಿದೆ. ಪೊಲೀಸರು ಪ್ರತಿಭಟನಾಕಾರರ ಜಾಡು ಹಿಡಿದು ಅವರನ್ನು ಬಂಧಿಸುತ್ತಿರುವುದಲ್ಲದೇ ಪ್ರತಿಭಟನೆಯ ಹಾದಿಯಲ್ಲಿರುವವರನ್ನು ಸಹ ಬಂಧಿಸಲಾಗುತ್ತಿದೆ. ಗಾಜ಼ಾದಲ್ಲಿ ಇಸ್ರೇಲ್‌ನ ಆಕ್ರಮಣದಿಂದಾಗಿ ಸುಮಾರು 2,00,000 ಜನರು ಕೊಲ್ಲಲ್ಪಟ್ಟರು ಎಂದು ವರದಿಯಾಗಿದೆ. ಅವರಲ್ಲಿ ಅನೇಕರು ಮಹಿಳೆಯರು

'ಒತ್ತೆಯಾಳುಗಳೊಂದಿಗೆ ಸೋದರತೆ' ರ್‍ಯಾಲಿಯನ್ನು ಅಕ್ಟೋಬರ್ 14 ರಂದು ಟೆಲ್ ಅವಿವ್‌ನಲ್ಲಿ ಪ್ರಾರಂಭಿಸಲಾಯಿತು. ಮರುದಿನ, ಸಂವಹನ ಸಚಿವ ಶ್ಲೋಮೋ ಕರ್ಹಿ, 'ರಾಷ್ಟ್ರೀಯ ನೈತಿಕತೆ'ಯನ್ನು ಘಾಸಿಗೊಳಿಸುವ ಜನರನ್ನು ಬಂಧಿಸಲು ಅವಕಾಶ ಮಾಡಿಕೊಡುವ ತುರ್ತು ನಿಯಮಗಳನ್ನು ಪ್ರಸ್ತಾಪಿಸಿದರು. ಇಸ್ರೇಲ್ ಸರ್ಕಾರವು ಜನರಿಗೆ ಅಂತಹ ಬೆದರಿಕೆಗಳನ್ನು ಒಡ್ಡಿದರೂ, ಸರ್ಕಾರ ವಿರೋಧಿ ಪ್ರತಿಭಟನೆಗಳು ತಿಂಗಳುಗಳವರೆಗೆ ಮುಂದುವರೆದಿವೆ ಹಾಗೂ ಕದನ ವಿರಾಮಕ್ಕಾಗಿ ಒತ್ತಾಯಿಸುವ ಪ್ರತಿಭಟನೆಗಳು ಹೆಚ್ಚುತ್ತಿವೆ. ಇಸ್ರೇಲಿನಲ್ಲಿ ನಡೆದ ಎಲ್ಲಾ ಯುದ್ಧ ವಿರೋಧಿ ಪ್ರತಿಭಟನೆಗಳಲ್ಲಿ, ಎಲ್ಲಾ ವಯಸ್ಸಿನ ಇಸ್ರೇಲಿ ಜನರು ಭಾಗವಹಿಸಿದ್ದಾರೆ ಮತ್ತು ಪ್ಯಾಲೆಸ್ಟೀನಿಯನ್ ಪ್ರದೇಶಗಳನ್ನು ಇಸ್ರೇಲ್ ಆಕ್ರಮಿಸಿಕೊಳ್ಳುವುದನ್ನು ಕೊನೆಗೊಳಿಸಲು ಕರೆ ನೀಡಿದ್ದಾರೆ.

ಕಳೆದ ಜೂನ್‌ನಲ್ಲಿ, ಇಸ್ರೇಲ್‌ನ ಮಿಲಿಟರಿ ಪಡೆ (IDF)ಯ ವಕ್ತಾರ ಡೇನಿಯಲ್ ಹಗರಿ, "ಹಮಾಸ್ ಒಂದು ಕಲ್ಪನೆ" ಎಂದು ಹೇಳಿದರು. ಅದನ್ನು ಕಣ್ಮರೆಯಾಗಿಸಬಹುದು ಎಂದು ಭಾವಿಸುವವರು "ಸಾರ್ವಜನಿಕರನ್ನು ದಾರಿ ತಪ್ಪಿಸುತ್ತಿದ್ದಾರೆ", ಅಂದರೆ ಇಸ್ರೇಲ್ ಈ ಯುದ್ಧವನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಅವರು ಹೇಳಿದರು. ಜಾಗತಿಕ ಯುದ್ಧ ವಿರೋಧಿ, ಇಸ್ರೇಲ್ ವಿರೋಧಿ ಪ್ರತಿಭಟನೆಗಳ ಮೂಲಕ ಸಾಮಾನ್ಯ ಇಸ್ರೇಲಿ ನಾಗರಿಕರು ಒಗ್ಗಟ್ಟಿನಿಂದ ಗಾಜ಼ಾ, ವೆಸ್ಟ್ ಬ್ಯಾಂಕ್ ಮತ್ತು ಉಳಿದ ಪ್ರದೇಶಗಳಲ್ಲಿ ನರಮೇಧವನ್ನು ತಕ್ಷಣವೇ ನಿಲ್ಲಿಸಲು ಒತ್ತಾಯಿಸಿ, ರಕ್ತಪಿಪಾಸು ಝಿಯೋನಿಸ್ಟ್ ಆಡಳಿತದ ವಿರುದ್ಧ ತಮ್ಮ ಪ್ರತಿರೋಧವನ್ನು ಹೆಚ್ಚಿಸಿರುವುದು ಶ್ಲಾಘನೀಯ.

# ಅಭಯಾಳಿಗೆ, ದೇಶದ ಜನರಿಗೆ ನ್ಯಾಯ ಬೇಕು, ನ್ಯಾಯ ಕೊಡಿ!

## ಆರ್‌ಜಿ ಕರ್ ವೈದ್ಯಕೀಯ ಮಹಾ ವಿದ್ಯಾಲಯದ ವೈದ್ಯರ ಆಗ್ರಹ

**ಆರ್‌ಜಿ ಕರ್ ವೈದ್ಯಕೀಯ ಮಹಾ ವಿದ್ಯಾಲಯದ ಕಿರಿಯ ವೈದ್ಯರು ವಿಡಿಯೋ ಒಂದರಲ್ಲಿ 10.09.2024ರಂದು ನೀಡಿರುವ ಹೇಳಿಕೆ:**

ಇಂದಿನ ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ನಾವು ಸಾಕಷ್ಟು ನೊಂದಿದ್ದೇವೆ ಮತ್ತು ಬೇಸರಗೊಂಡಿದ್ದೇವೆ. ಸಿಬಿಐ ವಹಿಸಿಕೊಂಡಿದ್ದ 'ಅಭಯಾ'ಳ ಭೀಕರ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆಯಲ್ಲಿ ಯಾವುದೇ ಪ್ರಗತಿಯಾಗಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಹೈಕೋರ್ಟ್‌ನಿಂದ ಸುಪ್ರೀಂ ಕೋರ್ಟ್‌ವರೆಗೆ, ಕೊಲ್ಕತ್ತಾ ಪೊಲೀಸರಿಂದ ಸಿಬಿಐವರೆಗೆ, ತನಿಖೆಯು ಕೈಯಿಂದ ಕೈಗೆ ಬದಲಾಗಿದ್ದೇನೋ ನಿಜ, ಆದರೆ ನ್ಯಾಯ ಮಾತ್ರ ಕೈಗೆ ಸಿಗದಷ್ಟು ದೂರವಾಗಿದೆ. ಅದಲ್ಲದೇ, ನಮ್ಮ ಹೋರಾಟವನ್ನು ಹೇಗಾದರೂ ಮಾಡಿ ತಡೆಯಲು ಸರ್ಕಾರ ಹಾಗೂ ಅದರ ವಕೀಲ, ಕಪಿಲ್ ಸಿಬಲ್, ಅನಗತ್ಯವಾಗಿ ಪ್ರಯತ್ನಿಸಿದ್ದನ್ನು ನಾವು ನೋಡಿದ್ದೇವೆ. ಜೂನಿಯರ್ ಡಾಕ್ಟರ್‌ಗಳ ಹೋರಾಟದಿಂದಾಗಿ ಜನರು ಸಾಯುತ್ತಿದ್ದಾರೆ ಮತ್ತು ರೋಗಿಗಳ ಚಿಕಿತ್ಸೆಗೆ ತೊಂದರೆಯಾಗುತ್ತಿದೆ ಎಂಬುದು ಅವರ ಹೇಳಿಕೆ. ಆದರೆ ಸೀನಿಯರ್ ಡಾಕ್ಟರ್‌ಗಳ ಅವಿರತ ಪ್ರಯತ್ನದಿಂದ ರಾಜ್ಯದ ಮೂಲೆಮೂಲೆಯಲ್ಲೂ ರೋಗಿಗಳಿಗೆ ಯಾವುದೇ ತೊಂದರೆ ಇಲ್ಲದೇ ಚಿಕಿತ್ಸೆ ದೊರೆಯುತ್ತಿದೆ ಎಂದು ನಾವು ಹೇಳಲು ಇಷ್ಟಪಡುತ್ತೇವೆ. ಜೊತೆಗೆ, ಇಡೀ ರಾಜ್ಯದಲ್ಲಿ ಸುಮಾರು 245 ಸರ್ಕಾರಿ ಆಸ್ಪತ್ರೆಗಳಿದ್ದು, ಅದರಲ್ಲಿ ಕೇವಲ 26 ಮಾತ್ರ ಮೆಡಿಕಲ್ ಕಾಲೇಜುಗಳು ಎಂಬುದನ್ನೂ ನಾವು ಹೇಳಲಿಚ್ಛಿಸುತ್ತೇವೆ. ಅಂದರೆ, ಜೂನಿಯರ್ ಡಾಕ್ಟರ್‌ಗಳ ಒಟ್ಟು ಸಂಖ್ಯೆ 7,500ಕ್ಕಿಂತ ಕಡಿಮೆ. ಪಶ್ಚಿಮ ಬಂಗಾಳದಲ್ಲಿ ಸುಮಾರು 93,000 ರಿಜಿಸ್ಟರ್ಡ್ ಡಾಕ್ಟರ್‌ಗಳಿದ್ದಾರೆ. ವರದಿಗಳ ಪ್ರಕಾರ, ಕೆಲವೇ ಕೆಲವು ಕಾಲೇಜುಗಳಲ್ಲಿ ಜೂನಿಯರ್ ಡಾಕ್ಟರ್‌ಗಳು ಪ್ರತಿಭಟನೆಯಲ್ಲಿ ತೊಡಗಿರುವಾಗ, ಇಡೀ ಆರೋಗ್ಯ ವ್ಯವಸ್ಥೆಯೇ ಕುಸಿಯುತ್ತಿದೆ ಎಂದು ಹೇಗೆ ಹೇಳಲು ಸಾಧ್ಯ? ಇದರರ್ಥ, ಸರ್ಕಾರವು ಹಸಿಹಸಿ ಸುಳ್ಳುಗಳನ್ನು ಹರಡುತ್ತಾ ಸುಪ್ರೀಂ ಕೋರ್ಟನ್ನು ದಾರಿ ತಪ್ಪಿಸುತ್ತಿದೆ ಎಂದಾಯಿತು. ನಮ್ಮ ಹೋರಾಟದ ಬಗ್ಗೆ ನಕಾರಾತ್ಮಕತೆಯನ್ನು ಸೃಷ್ಟಿಸಿ, ರಾಜ್ಯದಾದ್ಯಂತ ವ್ಯಾಪಕವಾಗಿ ಸಿಗುತ್ತಿರುವ ಜನಬೆಂಬಲದ ಹಳಿ ತಪ್ಪಿಸುವುದೇ ಸರ್ಕಾರದ ಉದ್ದೇಶವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸುಪ್ರೀಂ ಕೋರ್ಟಿನ ದಾರಿ ತಪ್ಪಿಸಲು ಯತ್ನಿಸುತ್ತಿರುವ ಕಪಿಲ್ ಸಿಬಲ್, ಆರೋಗ್ಯ ಇಲಾಖೆ ಹಾಗೂ ಆರೋಗ್ಯ ಮಂತ್ರಿಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಜೂನಿಯರ್ ಡಾಕ್ಟರ್‌ಗಳು ಆರೋಗ್ಯ ವ್ಯವಸ್ಥೆಯ ಆಧಾರ ಸ್ಥಂಭವಲ್ಲ, ಅವರು ಕೇವಲ ತರಬೇತಿ ಪಡೆಯಲು ಬಂದವರು ಎಂಬುದನ್ನು ನಾವು ಸರ್ಕಾರಕ್ಕೆ ಮತ್ತು ಸುಪ್ರೀಂ ಕೋರ್ಟಿಗೆ ಹೇಳಲು ಬಯಸುತ್ತೇವೆ. ಒಂದುವೇಳೆ ಸರ್ಕಾರದ ಅಂಕಿಅಂಶವನ್ನು ನಾವು ನಿಜವೆಂದು ನಂಬಿದರೆ, ಜೂನಿಯರ್ ಡಾಕ್ಟರ್‌ಗಳ ಮುಷ್ಕರದಿಂದ ಮಾತ್ರವೇ ಆರೋಗ್ಯ ವ್ಯವಸ್ಥೆ ವಿಫಲವಾದರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಸೀನಿಯರ್ ಡಾಕ್ಟರ್‌ಗಳು, ನರ್ಸ್‌ಗಳು ಹಾಗೂ ಆರೋಗ್ಯ ಸೌಕರ್ಯಗಳ ಹೀನಾಯ ಸ್ಥಿತಿಗೆ ಇದು ಕನ್ನಡಿ ಹಿಡಿಯುತ್ತದೆ. ಆರೋಗ್ಯ ಇಲಾಖೆ ಹಾಗೂ ಆರೋಗ್ಯ ಮಂತ್ರಿಗಳು ಇದರ ಜವಾಬ್ದಾರಿ ಹೊರದೇ ಬೇರೆ ದಾರಿ ಇಲ್ಲ.

ಇದು ಸಾಲದೆಂಬಂತೆ, ಕಪಿಲ್ ಸಿಬಲ್ ಹಾಗೂ ರಾಜ್ಯ ಸರ್ಕಾರವು, ಆಗಸ್ಟ್ 27ರಂದು ಒಂದು ರಾಜಕೀಯ ಕಾರ್ಯಕ್ರಮದಲ್ಲಿ ನಡೆದ ಹಿಂಸಾಕೃತ್ಯಗಳನ್ನು ನಾವೇ ಮಾಡಿದ್ದೆಂದು ನಮ್ಮ ಮೇಲೆ ಗೂಬೆ ಕೂರಿಸಿದರು. ಆದರೆ ಆ ರಾಜಕೀಯ ಕಾರ್ಯಕ್ರಮದೊಂದಿಗೆ ನಮಗೆ ಯಾವ ಸಂಬಂಧವೂ ಇಲ್ಲವೆಂದು ನಾವು ಆಗಸ್ಟ್ 26ರಂದೇ ಹೇಳಿಕೆ ನೀಡಿದ್ದೆವು, ನಾವು ಯಾವುದೇ ಹಿಂಸಾಕೃತ್ಯ ಅಥವಾ ರಾಜಕೀಯ-ಪ್ರೇರಿತ ಕೆಲಸಕ್ಕೆ ಪ್ರೇರೇಪಣೆ ನೀಡಿರಲಿಲ್ಲ, ಮುಂದೆಯೂ ನೀಡುವುದಿಲ್ಲ ಎಂದು ನಾವು ಅವರಿಗೆ ಈ ಮೂಲಕ ಹೇಳಲು ಬಯಸುತ್ತೇವೆ. ಆದಾಗ್ಯೂ, ಸರ್ಕಾರ ಹಾಗೂ ಅದರ ವಕೀಲ ಸುಪ್ರೀಂ ಕೋರ್ಟಿಗೆ ಸುಳ್ಳು ಹೇಳಿರುವುದನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ ಮತ್ತು ಖಂಡಿಸುತ್ತೇವೆ.

ಆ ಭೀಕರ ಘಟನೆ ನಡೆದು 30 ದಿನಗಳಾದ ನಂತರವೂ, ರಾಜ್ಯ ಸರ್ಕಾರ ಈ ಹೋರಾಟದ ಪ್ರಮುಖ ಬೇಡಿಕೆಗಳ ಬಗ್ಗೆ ಯಾವುದೇ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿಲ್ಲ. ಅವರು ಸಿಬಿಐ ತನಿಖೆಯ ಮೇಲೆ ಇನ್ನಿಲ್ಲದ ಆರೋಪಗಳನ್ನು ಹೊರಿಸುವತ್ತ ಮಾತ್ರ ಪ್ರಯತ್ನ ನಡೆಸುತ್ತಿದ್ದಾರೆ. ಪೊಲೀಸರ ನಿರ್ಲಕ್ಷ್ಯ ಅಥವಾ ಅರೋಗ್ಯ ಕ್ಷೇತ್ರದ ಹಗರಣಗಳ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದರ ನಂತರ ಡಾ. ಸಂದೀಪ್ ಘೋಷ್, ಡಾ. ಬಿರೂಪಾಕ್ಷ ಬಿಸ್ವಾಸ್ ಮತ್ತು ಡಾ. ಅವಿಕ್ ಡೇ (ಇಬ್ಬರೂ ಕಲ್ಕತ್ತೆಯ ಇತರ ಮೆಡಿಕಲ್ ಕಾಲೇಜಿನ ವೈದ್ಯರಾಗಿದ್ದು, ಸಂದೀಪ್ ಘೋಷ್‌ನ ಸಹವರ್ತಿಗಳು ಎಂಬ ಆರೋಪವಿದೆ) ಅವರನ್ನು ಕರ್ತವ್ಯಲೋಪ ಎಸಗಿದರೆಂದು ಅಮಾನತ್ತುಗೊಳಿಸಿದ್ದು ಕೇವಲ ಒಂದು ಕಣ್ಣೊರೆಸುವ ಪ್ರಯತ್ನವಷ್ಟೇ. ನಿಜ ಹೇಳಬೇಕೆಂದರೆ, ಸಂದೀಪ್ ಘೋಷ್‌ಗೆ ಸಿಬಿಐ ಬಂಧನದ ನಂತರ ಹೆಸರಿಗಷ್ಟೇ ಒಂದು ಶೋ-ಕಾಸ್ ನೋಟೀಸ್ ಕಳಿಸಲಾಗಿತ್ತು. ಇನ್ನು ಅವಿಕ್ ಡೇ ಹಾಗೂ ವಿರೂಪಾಕ್ಷ ಬಿಸ್ವಾಸ್ ಅವರನ್ನು ಯಾಕೆ ಅಮಾನತ್ತು ಮಾಡಲಾಯಿತೆಂದು ಎಲ್ಲೂ ತಿಳಿಸಿಲ್ಲ. ಇಷ್ಟು ದುರ್ಬಲ ಅಮಾನತ್ತು ಆದೇಶಗಳನ್ನು ಕೋರ್ಟಿನಲ್ಲಿ ಪ್ರಶ್ನಿಸಬಹುದು ಹಾಗೂ ರದ್ದುಗೊಳಿಸಬಹುದು. ಜನರ ಕೋಪ ತಣಿಸಲು ಇದೊಂದು ಕಳ್ಳನಾಟಕವಲ್ಲದೇ, ಬೇರೇನೂ ಅಲ್ಲ. ಸಂದೀಪ್ ಘೋಷ್ ವಿರುದ್ಧ ತೀವ್ರವಾದ ಶಿಸ್ತುಕ್ರಮ ಜರುಗಿಸಬೇಕು ಹಾಗೂ ಸೂಕ್ತ ಕಾರಣ ತಿಳಿಸಿ ಆರೋಗ್ಯ ಇಲಾಖೆಯು ಅವಿಕ್ ಡೇ ಮತ್ತು ವಿರೂಪಾಕ್ಷ ಬಿಸ್ವಾಸ್ ಅವರನ್ನು ವಜಾಗೊಳಿಸಬೇಕೆಂದು ನಾವು ಬಲವಾಗಿ ಆಗ್ರಹಿಸುತ್ತೇವೆ.

ಹೋರಾಟದ ಮೊದಲ ದಿನದಿಂದ, ನಾವು ಸುರಕ್ಷತೆಯ ಬಗ್ಗೆ ಹಲವಾರು ಬೇಡಿಕೆಗಳನ್ನು ಎತ್ತಿದ್ದೇವೆ. ಡ್ಯೂಟಿ ಮಾಡುತ್ತಿರುವ ಡಾಕ್ಟರ್‌ಗಳಿಗೆ ಪ್ರತ್ಯೇಕ ವಿಶ್ರಾಂತಿ ಕೋಣೆ ಹಾಗೂ ಶೌಚಾಲಯ, ಸಾಕಷ್ಟು ಭದ್ರತಾ ಸಿಬ್ಬಂದಿ, ಸಿಸಿ ಟಿವಿ ಹಾಗೂ ಮಹಿಳೆಯರಿಗೆ ಮಹಿಳಾ ಭದ್ರತಾ ಸಿಬ್ಬಂದಿ, ವೈದ್ಯರ ವಿಶ್ರಾಂತಿ ಕೊಠಡಿ, ವಾರ್ಡ್ ಹಾಗೂ ಆಪರೇಶನ್ ಥಿಯೇಟರ್ ಹೊರಗೆ ಸೂಕ್ತ ಸುರಕ್ಷತಾ ಕ್ರಮಗಳು ಬೇಕೆಂದು ನಾವು ಕೇಳಿದ್ದೇವೆ. ಆದರೆ, ನೆಪಮಾತ್ರಕ್ಕೆ ಪೊಲೀಸರ ಉಪಸ್ಥಿತಿಯನ್ನು ಹೆಚ್ಚಿಸಿ, ವೈದ್ಯರ ಕೋಣೆಗಳನ್ನು ಲಿಂಗಾಧಾರಿತವಾಗಿ ಪ್ರತ್ಯೇಕಿಸುವುದರಿಂದ ಸುರಕ್ಷತೆಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ನೆನಪಿಸಲು ಬಯಸುತ್ತೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸೂಕ್ತ ಚಿಕಿತ್ಸೆಯನ್ನು ಖಾತ್ರಿ ಪಡಿಸಿದಾಗ ಮಾತ್ರವೇ ವೈದ್ಯರ ಹಾಗೂ ಆರೋಗ್ಯ ಕಾರ್ಯಕರ್ತರ ಸುರಕ್ಷತೆ ಸಾಧಿಸಲು ಸಾಧ್ಯ.

ಆರೋಗ್ಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಎಂಬುದು ಹಂತಹಂತದಲ್ಲೂ ಬೇರು ಬಿಟ್ಟಿದೆ. ಆಧುನಿಕ ಸೌಕರ್ಯಗಳ ಲಭ್ಯತೆ ಹಾಗೂ ಸಮರ್ಪಕ ಸಿಬ್ಬಂದಿಗಳ ನೇಮಕಾತಿ ಇಲ್ಲದೇ ಸಾರ್ವಜನಿಕ ಆರೋಗ್ಯ ಸೇವಾ ವಲಯದಲ್ಲಿ ಹಾಗೂ ವಲಯವಾರು ಮೆಡಿಕಲ್ ಕಾಲೇಜುಗಳಲ್ಲಿ ಸಾಕಷ್ಟು ಉದ್ಯೋಗಗಳು ಖಾಲಿ ಉಳಿದಿವೆ. ಆರೋಗ್ಯ ವ್ಯವಸ್ಥೆಯು ವೈದ್ಯರಿಂದ ಮಾತ್ರವೇ ನಡೆಯುವುದಲ್ಲ. ಅವರೊಂದಿಗೆ, ವೈದ್ಯರ ಸಹಾಯಕರು, ತಾಂತ್ರಿಕ ತಜ್ಞರು, ನರ್ಸ್‌ಗಳು, ಇತರ ಸಿಬ್ಬಂದಿಗಳು, ಹೀಗೆ ಎಲ್ಲರೂ ಸೇರಿರುತ್ತಾರೆ. ಇಲ್ಲಿ ಶಾಶ್ವತ ನೇಮಕಾತಿಗಳನ್ನು ಮಾಡಿಕೊಳ್ಳದೇ, ಗುತ್ತಿಗೆ ಆಧಾರಿತ ನೇಮಕಾತಿಗಳು ಮಾತ್ರ ನಡೆಯುತ್ತಿರುವುದರಿಂದ ಹಲವಾರು ಸಮಸ್ಯೆಗಳು ಎದುರಾಗುತ್ತಿವೆ.

.......ಕಾಲೇಜುಗಳಲ್ಲಿ ಆರೋಗ್ಯ ಸೇವೆಗಳ ಡಿಜಿಟಲೀಕರಣ ನಡೆಸಲು ಹಾಗೂ ರೋಗಿಗಳ ಸಮಸ್ಯೆಗಳಿಗೆ ಕಿವಿಗೊಡಲು ಸೂಕ್ತ ವ್ಯವಸ್ಥೆ ಇಲ್ಲ. ಸರಿಯಾದ ಆರೋಗ್ಯ ಸೇವೆಯ ಕೊರತೆಯಿಂದ ರೋಗಿಗಳು ದಿನನಿತ್ಯ ಕಿರುಕುಳ ಅನುಭವಿಸಬೇಕು ಹಾಗೂ ಚಿಕಿತ್ಸೆ ದೊರೆಯದೇ ಎಷ್ಟು ರೋಗಿಗಳು ಸಾಯುತ್ತಿದ್ದಾರೆ ಎಂದು ಸರ್ಕಾರವು ದತ್ತಾಂಶವನ್ನೂ ನೀಡುತ್ತಿಲ್ಲ. ರಾಜ್ಯದ ವಿವಿಧ ಜಾಗಗಳಲ್ಲಿ ಭಾರೀ ಪ್ರಮಾಣದಲ್ಲಿ ಸೂಪರ್-ಸ್ಪೆಷಾಲಿಟಿ ಆಸ್ಪತ್ರೆಗಳು ಹಾಗೂ ಮೆಡಿಕಲ್ ಕಾಲೇಜುಗಳು ಹುಟ್ಟಿಕೊಂಡರೂ, ಆಯಾ ಜಾಗಗಳಲ್ಲಿ ಆರೋಗ್ಯದ ಸ್ಥಿತಿ ಮಾತ್ರ ಬದಲಾಗುತ್ತಿಲ್ಲ. ವೈದ್ಯರು, ನರ್ಸ್‌ಗಳು, ಆರೋಗ್ಯ ಕಾರ್ಯಕರ್ತರ ಕೊರತೆ ಅಪಾರವಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ತೆರೆದಿರುವ ಹೊಸ ಮೆಡಿಕಲ್ ಕಾಲೇಜುಗಳಲ್ಲಿ ಹಿರಿಯ ಸಿಬ್ಬಂದಿಯ ನೇಮಕಾತಿ ಹೀನಾಯವಾಗಿ ಕಡಿಮೆ ಪ್ರಮಾಣದಲ್ಲಿದೆ ಹಾಗೂ ಆಧುನಿಕ ರೋಗಪತ್ತೆ ವಿಧಾನಗಳ ಕೊರತೆ ಬಹಳಷ್ಟಿದೆ. ದೊಡ್ಡ ಕಟ್ಟಡಗಳನ್ನು ಕಟ್ಟಿದ ಮಾತ್ರಕ್ಕೆ ಆರೋಗ್ಯ ಸೇವೆ ಸಾಧಿಸಿದಂತೆ ಅಲ್ಲ. ಸರಿಯಾದ ಆರೋಗ್ಯ ನೀತಿ, ಸರಿಯಾದ ಸಿಬ್ಬಂದಿ ನೇಮಕಾತಿ ವ್ಯವಸ್ಥೆ ಹಾಗೂ ಸರ್ಕಾರದ ಸದುದ್ದೇಶ ಇಲ್ಲಿ ಅತ್ಯವಶ್ಯಕ ಎಂಬುದನ್ನು ನಾವು ನೆನಪಿಸಲು ಬಯಸುತ್ತೇವೆ. ದುರದೃಷ್ಟವಶಾತ್, ನಮ್ಮ ರಾಜ್ಯದಲ್ಲಿ ಇವೆಲ್ಲದರ ಕೊರತೆ ಕಾಣುತ್ತಿದೆ. ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯೊಬ್ಬ ಸಿಟಿ ಸ್ಕ್ಯಾನ್ ಮಾಡಿಸಲು ಕೋನ್‌ನಗರದಿಂದ ಕೊಲ್ಕತ್ತಾಗೆ 30 ಕಿಲೋಮೀಟರ್ ಪ್ರಯಾಣ ಏಕೆ ಮಾಡಬೇಕಾಯಿತು? ಹತ್ತಿರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಕಡೇಪಕ್ಷ ಸಿಟಿ ಸ್ಕ್ಯಾನ್ ಸೌಕರ್ಯವೂ ಯಾಕಿಲ್ಲ? ಎಂಬುದು ನಮ್ಮ ಪ್ರಶ್ನೆ. ಜಿಲ್ಲಾ ಕೇಂದ್ರಗಳಲ್ಲಿ ಜನರಿಗೆ ಆರೋಗ್ಯ ಸೇವೆ ಒದಗಿಸುವ ನೈಜ ಉದ್ದೇಶ ಸರ್ಕಾರಕ್ಕೆ ಇದ್ದರೆ, ಜಿಲ್ಲಾಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸುಧಾರಣೆಗೆ ಸರ್ಕಾರ ಏಕೆ ಕೈ ಹಾಕಿಲ್ಲ? ಹೆಸರಿಗಷ್ಟೇ ವೈದ್ಯರು ಮತ್ತು ನರ್ಸ್‌ಗಳನ್ನು ನೇಮಿಸುವ ಬದಲು, ಸರ್ಕಾರವು ಸೂಕ್ತ ರೀತಿಯಲ್ಲಿ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಆರೋಗ್ಯ ವ್ಯವಸ್ಥೆ ಒದಗಿಸಬೇಕೆಂದು ನಾವು ಆಗ್ರಹಿಸುತ್ತೇವೆ.

ರಾಜ್ಯದಾದ್ಯಂತ ಆರೋಗ್ಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ತಡೆಯುವುದು ಹಾಗೂ ಮೆಡಿಕಲ್ ಕಾಲೇಜುಗಳಲ್ಲಿನ ಭಯಭೀತ ಪರಿಸ್ಥಿತಿಯನ್ನು ಹತೋಟಿಗೆ ತರುವುದು ಆರೋಗ್ಯ ಇಲಾಖೆಯ ಮೇಲಧಿಕಾರಿಗಳಿಂದ ಸಾಧ್ಯವಿಲ್ಲ ಎಂಬುದು ನಮಗೆ ಈಗ ಸ್ಪಷ್ಟವಾಗಿದೆ. ಇಂತಹ ಅಗಾಧ ಪ್ರಮಾಣದ ಭ್ರಷ್ಟಾಚಾರದಿಂದ ರೋಗಿಗಳ ಸೇವೆಗೆ ನಿರಂತರವಾಗಿ ತೊಂದರೆಯಾಗಿದೆ. ಅದಲ್ಲದೇ, ಸಂತ್ರಸ್ತೆ ಹತ್ಯೆಯಾದ ಸೆಮಿನಾರ್ ಕೋಣೆಯ ಪಕ್ಕದ ಕೋಣೆಗಳನ್ನು ಉರುಳಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಸೇವಾ ಇಲಾಖೆಯ ಆರೋಗ್ಯ ಕಾರ್ಯದರ್ಶಿಗಳು ಆದೇಶಕ್ಕೆ ಸಹಿ ಮಾಡಿದ್ದರೆಂದು ತಿಳಿದುಬಂದಿದೆ. ಹಾಗಾಗಿ ನಾವು, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಸೇವಾ ಇಲಾಖೆಯ ಆರೋಗ್ಯ ಕಾರ್ಯದರ್ಶಿಗಳನ್ನು ವಜಾ ಮಾಡಬೇಕೆಂದು ಹಾಗೂ ಅವರನ್ನು ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ಆಗ್ರಹಿಸುತ್ತೇವೆ. ಜೊತೆಗೆ, ಆರೋಗ್ಯ ಇಲಾಖೆಯ ಈ ತೀವ್ರ ಭ್ರಷ್ಟಾಚಾರದ ಬಗ್ಗೆ ಆರೋಗ್ಯ ಸಚಿವರ ನಿಲುವು ಏನು ಎಂದು ನಮಗೆ ತಿಳಿಯಬೇಕಿದೆ. ನಮಗೆ ಅವರಿಂದ ಇಲ್ಲಿಯವರೆಗೆ ಯಾವುದೇ ಹೇಳಿಕೆ ಬಂದಿಲ್ಲ.

ಅಭಯಾಳಿಗೆ ನ್ಯಾಯಕ್ಕಾಗಿ ಆಗ್ರಹಿಸುವ ಈ ಹೋರಾಟದ ಮೂಲಕ, ನಾವು ಆರೋಗ್ಯ ವ್ಯವಸ್ಥೆಯಲ್ಲಿ ಮೂಲಭೂತ ಸುಧಾರಣೆ ತರುವ ಹಾಗೂ ಅದನ್ನು ನಿಜವಾಗಿಯೂ ಜನ-ಕೇಂದ್ರಿತ ಆಗಿಸುವ ಭರವಸೆ ಹೊಂದಿದ್ದೆವು. ಆದರೆ, ಕಪಿಲ್ ಸಿಬಲ್ ಹಾಗೂ ರಾಜ್ಯ ಸರ್ಕಾರವು ಈಗ ಸುಪ್ರೀಂ ಕೋರ್ಟಿನಲ್ಲಿ ಈ ಹೋರಾಟವನ್ನು ಜನ-ವಿರೋಧಿ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ನಾಳೆ ಮಧ್ಯಾಹ್ನ 1 ಗಂಟೆಗೆ ನಾವು ಕರುಣಾಮಯಿ ಇಂದ ಸ್ವಾಸ್ಥ್ಯ ಭವನದ ತನಕ ಪಾದಯಾತ್ರೆ ನಡೆಸಲು ಉದ್ದೇಶಿಸಿದ್ದೇವೆ. ಈ ಪಾದಯಾತ್ರೆಯ ಉದ್ದೇಶವು, ಮೇಲೆ ತಿಳಿಸಿದಂತೆ, ಆರೋಗ್ಯ ವ್ಯವಸ್ಥೆಯನ್ನು ಜನಸಾಮಾನ್ಯರಿಗೆ ಸೂಕ್ತ ಆರೋಗ್ಯ ಸೇವೆ ಒದಗಿಸುವ ವ್ಯವಸ್ಥೆಯಾಗಿ ಬದಲಿಸುವುದೇ ಆಗಿದೆ. ಮುಖ್ಯಮಂತ್ರಿಗಳ ಮಾಧ್ಯಮ ಹೇಳಿಕೆಯ ಮುಖಾಂತರ, ಸಿಪಿ (ಪೊಲೀಸ್ ಕಮಿಷನರ್) ರಾಜೀನಾಮೆ ಕೊಟ್ಟಿದ್ದಾರೆ ಎಂದು ಕೇಳಲ್ಪಟ್ಟೆವು. ಹಾಗಾದರೆ, ಅವರೇ ತನಿಖಾದಳದ ನಿರ್ಲಕ್ಷ್ಯವನ್ನು ಒಪ್ಪಿಕೊಂಡಂತೆ ಆಯಿತು. ಹಾಗಾದರೆ ಅವರ ರಾಜೀನಾಮೆಯನ್ನು ಏಕೆ ಅಂಗೀಕರಿಸಿಲ್ಲ? ಹಬ್ಬ-ಉತ್ಸವಗಳ ಸಮಯದಲ್ಲಿ ಜನಸಂದಣಿಯನ್ನು ನಿಯಂತ್ರಿಸುವುದು ಮಾತ್ರವೇ ಪೊಲೀಸರ ಕೆಲಸವೇ? ಇಂತಹ ಪೊಲೀಸರನ್ನು ನಂಬಿಕೊಂಡು ನಮ್ಮ ರಾಜ್ಯದ ಮಹಿಳೆಯರು ಬಾಳಬೇಕೇ? ಅವರನ್ನು ತ್ವರಿತವಾಗಿ ಸೇವೆಯಿಂದ ವಜಾಗೊಳಿಸಬೇಕು, ಅಭಯಾಳ ಕುಟುಂಬದಿಂದ ಹಣ ಕೇಳಿದ ಉತ್ತರ ವಲಯದ ಜಿಲ್ಲಾಧಿಕಾರಿಯನ್ನು ತನಿಖೆಗೆ ಒಳಪಡಿಸಬೇಕು. ಅವಿಕ್ ಡೇಗೆ ಭದ್ರತೆ ಏರ್ಪಡಿಸಲು ಪ್ರಯತ್ನಿಸಿದ ಕೇಂದ್ರ ವಲಯದ ಜಿಲ್ಲಾಧಿಕಾರಿಯನ್ನು ಕಠಿಣ ಕ್ರಮಕ್ಕೆ ಒಳಪಡಿಸಬೇಕು.

ಭವಿಷ್ಯದಲ್ಲಿ ಯಾವುದೇ ಮೆಡಿಕಲ್ ಕಾಲೇಜಿನ ಸ್ಥಿತಿಯು ಆರ್.ಜಿ.ಕರ್ ರೀತಿಯಲ್ಲಿ ಆಗುವುದು ನಮಗೆ ಇಷ್ಟವಿಲ್ಲ. ಆಗಸ್ಟ್ 9ರಂದು ನಡೆದ ಘಟನೆಯು ಪ್ರತ್ಯೇಕ ಘಟನೆಯಾಗಿರದೇ, ಆತಂಕವಾದಿ ರಾಜಕಾರಣ ಹೊಂದಿರುವ ಕಾಲೇಜುಗಳ ಸ್ಥಿತಿ ಇನ್ನುಮುಂದೆ ಹೇಗಿರುತ್ತದೆ ಎಂಬುದಕ್ಕೆ ಉದಾಹರಣೆಯಾಗಿದೆ. ಪ್ರತಿ ಕಾಲೇಜು ಕೂಡಾ ಚುನಾಯಿತ ವಿದ್ಯಾರ್ಥಿಯನ್ನು ಕಾಲೇಜು ಸಮಿತಿಯ ಆರ್.ಡಿ.ಎ ಹಾಗೂ ರೋಗಿ ಕಲ್ಯಾಣ ಸಮಿತಿಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು. ಸರ್ಕಾರವು ಎಲ್ಲಾ 4ನೇ ಪುಟಕ್ಕೆ

3ನೇ ಪುಟದಿಂದ

## ಅಭಯಾಳಿಗೆ, ದೇಶದ ಜನರಿಗೆ ನ್ಯಾಯ ಬೇಕು, ನ್ಯಾಯ ಕೊಡಿ!

ಕಾಲೇಜುಗಳಲ್ಲಿ ಬಹಳ ಪ್ರಜಾತಾಂತ್ರಿಕ ವಿಧಾನದಲ್ಲಿ ವಿದ್ಯಾರ್ಥಿಗಳು ಹಾಗೂ ಜೂನಿಯರ್ ಡಾಕ್ಟರ್‌ಗಳ ನಡುವೆ ಚುನಾವಣೆ ನಡೆಸಬೇಕು.

ಬಂಗಾಳದ ಜನತೆ ನಮ್ಮ ಹೋರಾಟಕ್ಕೆ ನೀಡಿದ ಅವಿಸ್ಮರಣೀಯ ಬೆಂಬಲವನ್ನು ನಾವು ಶ್ಲಾಘಿಸುತ್ತೇವೆ. ಅಹೋರಾತ್ರಿ ಹೋರಾಟಕ್ಕೆ ಹಾಗೂ ಮಾನವ ಸರಪಳಿಗೆ ಅವರ ಬೆಂಬಲ ಅತ್ಯಂತ ಶ್ಲಾಘನೀಯ. ಜೊತೆಗೆ, ನೈಹತಿಯಿಂದ ಬರಾಸಾತ್‌ವರೆಗೆ ಹಾಗೂ ಮಥಭಂಗದಿಂದ ಕಂಚ್ರಾಪಾರಾವರೆಗೆ ಜನಸಾಮಾನ್ಯರ ಮೇಲೆ ಆಡಳಿತ ಪಕ್ಷದ ಗೂಂಡಾಗಳು ಮತ್ತು ಪೊಲೀಸರು ಹಲ್ಲೆ ನಡೆಸಿದ್ದನ್ನು ನಾವು ಖಂಡಿಸುತ್ತೇವೆ. ನಮ್ಮ ಹೋರಾಟ ಬಹಳ ಘನತೆಯುಕ್ತವಾದದ್ದು, ಜನಗಳಿಂದ ಜನಗಳಿಗಾಗಿ ನಡೆಯುತ್ತಿರುವ ಹೋರಾಟ. ಸರ್ಕಾರ ಅಥವಾ ಸುಪ್ರೀಂ ಕೋರ್ಟ್ ಇದನ್ನು ಮರೆಯಬಾರದು. ಜನಸಾಮಾನ್ಯರ ಮೇಲೆ ನಡೆದ ಹಲ್ಲೆಯನ್ನು ನಮ್ಮ ಮೇಲೆ ನಡೆದ ಹಲ್ಲೆಯೆಂದೇ ನಾವು ಪರಿಗಣಿಸುತ್ತೇವೆ ಹಾಗೂ ಈ ಹಲ್ಲೆಯಲ್ಲಿ ಶಾಮೀಲಾಗಿರುವ ಎಲ್ಲರಿಗೂ ತಕ್ಷಣವೇ ಶಿಕ್ಷೆ ಆಗಬೇಕು ಎಂದು ಆಗ್ರಹಿಸುತ್ತೇವೆ.

ನೋವನ್ನೆಲ್ಲಾ ಮರೆತು, ಹಬ್ಬ–ಉತ್ಸವಕ್ಕೆ ವಾಪಸ್ಸಾಗಿ ಎಂದು ಮುಖ್ಯಮಂತ್ರಿಗಳು ನೀಡಿರುವ ಕರೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಅಭಯಾಳ ಶವ ಇಟ್ಟುಕೊಂಡು, ಉತ್ಸವಕ್ಕೆ ಬನ್ನಿ ಎಂದು ಕರೆಯುವುದು ಬಹಳ ಶೋಚನೀಯ ಕ್ರಮ. ನ್ಯಾಯ ಕೊಡುವ ಮುನ್ನ ಉತ್ಸವಕ್ಕೆ ಕರೆಯುವುದು ಬಹಳ ಅಮಾನವೀಯ ಹಾಗೂ ಖಂಡನೀಯ. ಮುಖ್ಯಮಂತ್ರಿಗಳು ಈ ಕೂಡಲೇ ಈ ಹೇಳಿಕೆಯನ್ನು ಹಿಂಪಡೆಯಬೇಕು. ಅಭಯಾಳ ಕುಟುಂಬದವರನ್ನು ಸುಳ್ಳರು ಎಂದು ಕರೆದ ಮುಖ್ಯಮಂತ್ರಿಯನ್ನು ನಾವು ಖಂಡಿಸುತ್ತೇವೆ. ನಾಳೆ 5 ಗಂಟೆಯ ಒಳಗಾಗಿ ಸರ್ಕಾರವು ನಮ್ಮ ಬೇಡಿಕೆಗಳಿಗೆ ಸ್ಪಂದಿಸಿದರೆ, ಆಗ ಮಾತ್ರವೇ ನಾವು ಈ ಹೋರಾಟದ ಬಗ್ಗೆ ಅವರ ಮನವಿಯನ್ನು ಪರಿಗಣಿಸಬಹುದು ಎಂದು ಸ್ಪಷ್ಟವಾಗಿ ಹೇಳಲು ಇಚ್ಛಿಸುತ್ತೇವೆ. ಇಲ್ಲವೆಂದರೆ, ಯಾವ ಪ್ರಶ್ನೆಗೂ ಉತ್ತರಿಸುವ ಮನಸ್ಸು ಸರ್ಕಾರಕ್ಕೆ ಇಲ್ಲವೆಂದು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಅಂತಹ ಸನ್ನಿವೇಶದಲ್ಲಿ, ರಾಜ್ಯದಾದ್ಯಂತ ಎದುರಾಗುತ್ತಿರುವ ಪರಿಸ್ಥಿತಿಗೆ ನಾವು ಸರ್ಕಾರವನ್ನು ಹೊಣೆ ಮಾಡುತ್ತೇವೆ.

# ‘ಒಂದು ದೇಶ ಒಂದು ಚುನಾವಣೆ’

## ಜನರ ದನಿಯನ್ನು ಹತ್ತಿಕ್ಕುವ ಹುನ್ನಾರ-ಎಸ್‌ಯುಸಿಐ(ಸಿ)

**ದೇಶಾದ್ಯಂತ, ತಥಾಕಥಿತ ‘ಒಂದು ದೇಶ ಒಂದು ಚುನಾವಣೆ’ಯನ್ನು ಅಳವಡಿಸುವ ಕೇಂದ್ರ ಬಿಜೆಪಿ ಸರ್ಕಾರದ ನಡೆಯನ್ನು ಖಂಡಿಸಿ ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ನೀಡಿರುವ ಹೇಳಿಕೆ:**

ಇದು, ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಇನ್ನೂ ಅಳಿದುಳಿದಿರುವ ಪ್ರಜಾತಾಂತ್ರಿಕ ಅಂಶಗಳನ್ನು ದೋಚಿ, ಒಂದು ಅತ್ಯಂತ ಕೇಂದ್ರೀಕೃತ ಚುನಾವಣಾ ವ್ಯವಸ್ಥೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿಯ ವಂಚಕ ನಡೆಯಾಗಿರುವುದು ಸುಸ್ಪಷ್ಟ; ಇದು, ಆಳುವ ಏಕಸ್ವಾಮ್ಯಾಧಿಪತಿಗಳ ಹಿತಾಸಕ್ತಿಯಲ್ಲಿ, ಚುನಾವಣೆಯಲ್ಲಿ ಜನರ ಧ್ವನಿಯನ್ನು ಇನ್ನಷ್ಟು ನಿಗ್ರಹಿಸುತ್ತಾ, ಅಡಗಿಸುತ್ತಾ, ತತ್ಫಲವಾಗಿ ಇಡೀ ಚುನಾವಣಾ ಪ್ರಕ್ರಿಯೆಯನ್ನೇ ಒಂದು ಪ್ರಹಸನದ ಮಟ್ಟಕ್ಕೆ ಇಳಿಸುತ್ತದೆ.

ಹಾಗಾಗಿ, ಈ ಹೀನ ನಡೆಯನ್ನು ವಿರೋಧಿಸಲು ದೇಶದ ಜನರು ಮುಂಬಂದು, ಅದನ್ನು ಹಿಂಪಡೆಯುವಂತೆ ಕೇಂದ್ರ ಬಿಜೆಪಿ ಸರ್ಕಾರದ ಮೇಲೆ ಬಲವಾದ ಒತ್ತಡ ಹಾಕಬೇಕು ಎಂದು ನಾವು ಕರೆ ನೀಡುತ್ತೇವೆ.

## ಮಲ್ಲೇಶ್ವರದ ಆಟದ ಮೈದಾನದಲ್ಲಿ ತುಕ್ಕು ಹಿಡಿದ ಗೇಟ್ ಮುರಿದು ಬಿದ್ದು ಬಾಲಕ ಸಾವು : ಸೂಕ್ತ ಕ್ರಮಕ್ಕೆ ಆಗ್ರಹ



**ಬೆಂಗಳೂರು: ಮಲ್ಲೇಶ್ವರದ ಕುಳ್ಳ ಪಾರ್ಕಿನ ಆಟದ ಮೈದಾನದ ಕೆಟ್ಟುಹೋದ, ತುಕ್ಕು ಹಿಡಿದ ಕಬ್ಬಿಣದ ಗೇಟ್ ಬಿದ್ದು ಏಳು ವರ್ಷದ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದ. ಕೂಡಲೇ ಪಕ್ಷದ ಮಲ್ಲೇಶ್ವರ ಸ್ಥಳೀಯ ಸಮಿತಿಯ ಕಾರ್ಯಕರ್ತರು ಸ್ಥಳಕ್ಕೆ ತೆರಳಿ, ಪರಿಶೀಲನೆ ನಡೆಸಿದರು. ಸೂಕ್ತ ತನಿಖೆ ನಡೆಸಿ, ಈ ದುರ್ಘಟನೆಗೆ ಕಾರಣರಾದ ಬಿಬಿಎಂಪಿ ಅಧಿಕಾರಿಗಳು ಮತ್ತು ಕಂಟ್ರಾಕ್ಟರ್‌ಗಳ ಮೇಲೆ ಈ ಕೂಡಲೇ ಕ್ರಮ ಕೈಗೊಳ್ಳಬೇಕು ಹಾಗೂ ಮಗುವಿನ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಆಗ್ರಹಿಸಿ ಎಸ್‌ಯುಸಿಐ(ಸಿ) ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಕಾ. ವಿ.ಜ್ಞಾನಮೂರ್ತಿಯವರ ನೇತೃತ್ವದಲ್ಲಿ ಸ್ಥಳೀಯ ನಿವಾಸಿಗಳು ಬಿಬಿಎಂಪಿ ಚೀಫ್ ಇಂಜಿನಿಯರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಮನವಿಗೆ ಸ್ಪಂದಿಸಿದ ಸರ್ಕಾರ, ನೊಂದ ಕುಟುಂಬಕ್ಕೆ ಪರಿಹಾರ ನೀಡಿದೆಯಲ್ಲದೆ, ಅಪರಾಧಿಗಳಿಗೆ ಶಿಕ್ಷೆ ವಿಧಿಸಲು ಒಪ್ಪಿಕೊಂಡಿದೆ.**

1ನೇ ಪುಟದಿಂದ

## ಕಿಸಾನ್ ಮಹಾಪಂಚಾಯತ್

ದರ್ಜೆಯ ಕೃಷಿ ಒಳಸುರಿಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡಬೇಕು; ಚಾರಿತ್ರಿಕ ದೆಹಲಿ ರೈತ ಚಳುವಳಿಯಲ್ಲಿ ಹುತಾತ್ಮರಾದವರ ನೆನಪಿನಲ್ಲಿ ನಿರ್ಮಿಸುವ ಸ್ಮಾರಕಕ್ಕೆ ಭೂಮಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಬೇಕು; ಮುಂತಾದ ಹಕ್ಕೊತ್ತಾಯಗಳನ್ನು ಕಿಸಾನ್ ಮಹಾಪಂಚಾಯತ್‌ನಲ್ಲಿ ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ.

ಈ ಕಿಸಾನ್ ಮಹಾಪಂಚಾಯತ್‌ನಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ನಾಯಕರುಗಳಾದ ಸರ್ದಾರ್ ಬಲ್‌ಬೀರ್ ಸಿಂಗ್, ಸರ್ದಾರ್ ಜೋಗಿಂದರ್ ಸಿಂಗ್ ಉಗ್ರಾಣ್ ಮತ್ತು ಶ್ರೀ ಪ್ರೇಮ್ ಸಿಂಗ್ ಗೆಹ್ಲಾಟ್ ಆಹ್ವಾನಿತರಾಗಿ ಭಾಗವಹಿಸಿದ್ದರು. ನಮ್ಮ ರೈತ–ಕೃಷಿ ಕಾರ್ಮಿಕರ ಸಂಘಟನೆ, ಎಐಕೆಕೆಎಂಎಸ್‌ನ ಹಿರಿಯ ಉಪಾಧ್ಯಕ್ಷರಾದ ಕಾಮ್ರೇಡ್ ರಘುನಾಥ್ ದಾಸ್ ಅಧ್ಯಕ್ಷತೆ ವಹಿಸಿದ್ದರು.

ಉದ್ಘಾಟನಾ ಭಾಷಣ ಮಾಡುತ್ತಾ ಕಾಮ್ರೇಡ್ ಶಂಕರ್ ಘೋಷ್ ಹೇಳಿದರು: “ನಮ್ಮ ದೇಶದ ರೈತರು ಅಸಹಾಯಕ ಜನತೆಯಲ್ಲ. ಅವರು ಇಡೀ ದೇಶದ ಜನಕ್ಕೆ ಅನ್ನ ಹಾಕುತ್ತಿದ್ದಾರೆ. ಅವರು ಅಸಂಘಟಿತರೂ ಅಲ್ಲ. ಹಲವಾರು ವರ್ಷಗಳಿಂದ ಧೀರ ಹೋರಾಟಗಳನ್ನು ಕಟ್ಟುತ್ತಾ ಬಂದಿದ್ದಾರೆ. ಸಿಧು–ಕಾನು, ಬಿರ್ಸಾ ಮುಂಡಾ, ತಿಲ್ಕಾ ಮಾಂಜ್ಹಿ ಹಾಗೂ ಇನ್ನಿತರರ ನೇತೃತ್ವದಲ್ಲಿ ನಡೆದ ಧೀರೋದಾತ್ತ ಹೋರಾಟಗಳನ್ನು ನೆನಪಿಸಿಕೊಳ್ಳಬೇಕು. ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ, ಏಕಸ್ವಾಮ್ಯಾಧಿಪತಿಗಳು, ಕಾರ್ಪೊರೇಟ್ ಕಂಪನಿಗಳು ಹಾಗೂ ಅವರ ಪಾದಸೇವಕರು ಭೂಮಿ, ಕೃಷಿ ಒಳಸುರಿಗಳು ಹಾಗೂ ಕೃಷಿ ಉತ್ಪನ್ನಗಳ ಮೇಲೆ ಬಿಗಿಹಿಡಿತ ಸಾಧಿಸಲು ಹರಸಾಹಸ ಮಾಡುತ್ತಿದ್ದಾರೆ. ಆದರೆ ಅದಾವುದೂ ಪ್ರತಿಭಟನೆಯಿಲ್ಲದೆ ಹೋಗಿಲ್ಲ. ಸಿಂಗೂರ್ ನಂದಿಗ್ರಾಮ್ ಹೋರಾಟ, ಒಡಿಸ್ಸಾದಲ್ಲಿ ಮಿತ್ತಲ್ ಕಂಪೆನಿ ವಿರುದ್ಧ ಯಶಸ್ವಿ ಸಮರಶೀಲ ಚಳುವಳಿ, ಮಧ್ಯಪ್ರದೇಶದ ಮಂಡ್‌ಸೌರ್ ಸಂಘರ್ಷ ಮತ್ತು ಅಂತಿಮವಾಗಿ ದೆಹಲಿಯಲ್ಲಿ ನಡೆದ 13 ತಿಂಗಳ ಚಾರಿತ್ರಿಕ ಚಳುವಳಿಗಳ ಉದಾಹರಣೆಗಳು ನಮ್ಮ ಮುಂದಿವೆ. ಈ ಎಲ್ಲಾ ಅನುಭವಗಳನ್ನು ಒಗ್ಗೂಡಿಸಿಕೊಂಡು ನೋಡಿದಾಗ, ಮುಂದೆ ಬರುವ ದಿನಗಳಲ್ಲಿ ಅದೆಷ್ಟು ಬಲಶಾಲಿಯಾದ ಹೋರಾಟ ಬೆಳೆಸಬೇಕೆಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಕಾರ್ಮಿಕವರ್ಗದ ಮಹಾನ್ ನಾಯಕ ಹಾಗೂ ಎಐಕೆಕೆಎಂಎಸ್ ಸ್ಥಾಪನೆಯ ಹಿಂದಿರುವ ಮಹಾನ್ ಚೇತನ ಕಾಮ್ರೇಡ್ ಶಿವದಾಸ್ ಘೋಷರ ಮಾರ್ಗದರ್ಶಿ ಚಿಂತನೆಗಳಿಂದ ಎಐಕೆಕೆಎಂಎಸ್ ಕೆಲಸ ಮಾಡುತ್ತಿದೆ. ಅದು ನಮಗೆ ಮಹಾಬಲ. ಇತಿಹಾಸ ನಮಗೆ ನೀಡಿರುವ ಜವಾಬ್ದಾರಿಗೆ ನಾವು ಯೋಗ್ಯರಾಗಬೇಕು.”

ಕೇಂದ್ರ ಸರ್ಕಾರದ ಮುಂದಿಟ್ಟಿರುವ ಹಕ್ಕೊತ್ತಾಯಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಲಾಯಿತು. ‘ಬ್ರಹ್ಮಪುತ್ರ ನದಿ ತೀರದ ಮಣ್ಣ ಸವಕಳಿ’ ಕುರಿತು ಗೊತ್ತುವಳಿ ಅಂಗೀಕಾರವಾಯಿತು. ದೆಹಲಿಯ ದೆಹಾತ್ ಪ್ರದೇಶದಲ್ಲಿ ಕಾರ್ಪೊರೇಟ್ ಮನೆತನಗಳ ಭೂಸ್ವಾಧೀನವನ್ನು ಮಹಾಪಂಚಾಯತ್‌ನಲ್ಲಿ ಚರ್ಚಿಸಲಾಯಿತು. ಎಸ್‌ಕೆಎಂ ನಾಯಕರು ಮಹಾಪಂಚಾಯತ್ ಉದ್ದೇಶಿಸಿ ಮಾತನಾಡಿದರು.

ಎಐಕೆಕೆಎಂಎಸ್ ರಾಷ್ಟ್ರಾಧ್ಯಕ್ಷರಾದ ಕಾಮ್ರೇಡ್ ಸತ್ಯವಾನ್ ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಾ, ಈ ಕಿಸಾನ್ ಮಹಾಪಂಚಾಯತ್ ಚಾರಿತ್ರಿಕ ದೆಹಲಿ ರೈತ ಚಳುವಳಿಯಲ್ಲಿ ಹುತಾತ್ಮರಾದ 750 ಕ್ಕೂ ಹೆಚ್ಚು ರೈತರನ್ನು ಸ್ಮರಿಸುತ್ತದೆ ಎಂದರು. ಮುಂದುವರೆದು ಮಾತನಾಡುತ್ತಾ ಹೇಳಿದರು: “ಅವರ ಕನಸುಗಳನ್ನು ನನಸುಗೊಳಿಸಲು ಈ ಮಹಾಪಂಚಾಯತ್ ಸಂಕಲ್ಪ ತೊಡುತ್ತದೆ. ಸ್ವಾತಂತ್ರ್ಯಪೂರ್ವದಿಂದಲೂ ರೈತ ಚಳುವಳಿಗಳು ನಡೆದಿವೆ. ಸ್ವಾತಂತ್ರ್ಯ ಹೋರಾಟದಲ್ಲೂ ರೈತರು ಬಲಿದಾನ ಮಾಡಿದ್ದಾರೆ. ನಾವು ಸ್ವಾಮಿ ಸಹಜಾನಂದ ಸರಸ್ವತಿಯವರನ್ನು ಮರೆಯಲು ಸಾಧ್ಯವಿಲ್ಲ. ದೇಶದ 4,00,000 ಅನ್ನದಾತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಮ್ಮ ದೇಶದ ರಾಷ್ಟ್ರಪತಿ, ಪ್ರಧಾನಮಂತ್ರಿ, ಎಲ್ಲಾ ಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಹಾಗಾದರೆ ರೈತರ ಈ ದುಸ್ಥಿತಿಗೆ ಕಾರಣರಾರು? ಈ ದುರ್ದೆಸೆಯಿಂದ ರೈತರಿಗೆ ವಿಮುಕ್ತಿ ಕಾಣಿಸಲು ಎಐಕೆಕೆಎಂಎಸ್ ಪತಾಕೆಯಡಿ ದೇಶದ ಮೂಲೆಮೂಲೆಗಳಲ್ಲಿ ರೈತ ಹೋರಾಟಗಳನ್ನು ಕಟ್ಟುತ್ತಿದೆ. ಇಂದು ರೈತರ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು. ಕನಿಷ್ಠ ಬೆಂಬಲ ಬೆಲೆ ಬಹಳ ಮುಖ್ಯ ಹಕ್ಕೊತ್ತಾಯ. ಆದರೆ ಕಾಂಗ್ರೆಸ್ ಸರ್ಕಾರ ನೇಮಿಸಿದ ಸ್ವಾಮಿನಾಥನ್ ಆಯೋಗದ ಶಿಫಾರಸ್ಸನ್ನು ಕಾಂಗ್ರೆಸ್ ಸರ್ಕಾರವೂ ಪಾಲಿಸಲಿಲ್ಲ ಮತ್ತು ಅದರ ವಿರುದ್ಧ ಮಾತನಾಡುವ ಬಿಜೆಪಿ ಸರ್ಕಾರವೂ ಪಾಲಿಸುತ್ತಿಲ್ಲ. ಮಧ್ಯವರ್ತಿಗಳು ಅತ್ಯಂತ ಕನಿಷ್ಠ ಬೆಲೆಗೆ ರೈತರಿಂದ ಬೆಳೆಗಳನ್ನು ಕೊಂಡು ಅತ್ಯಧಿಕ ಲಾಭಕ್ಕೆ ಮಾರುತ್ತಾರೆ. ವಿದ್ಯುತ್ ತಿದ್ದುಪಡಿ ಕಾಯ್ದೆಯು ಜಾರಿಯಾದರೆ ಬಡವರ ಮನೆಗಳಲ್ಲಿ ದೀಪ ಉರಿಯುವುದಿಲ್ಲ. ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿದರೆ, ರೈತರು ದಿವಾಳಿಯಾಗುತ್ತಾರೆ. ಹಿಂದೆ ಶಾಲೆ, ಆಸ್ಪತ್ರೆಗಳಂತಹ ಸಾರ್ವಜನಿಕ ಹಿತಾಸಕ್ತಿಗೆ ಭೂಮಿಯನ್ನು ತೆಗೆದುಕೊಳ್ಳಲಾಗುತ್ತಿತ್ತು. ಈಗ ಕಾರ್ಪೊರೇಟ್ ಕಂಪೆನಿಗಳ ಹಿತ ಕಾಪಾಡಲು ಭೂಸ್ವಾಧೀನವಾಗುತ್ತಿದೆ. ಕೃಷಿ ಒಳಸುರಿಗಳ ಬೆಲೆಗಳು ವಿಪರೀತವಾಗಿ ಏರುತ್ತಿವೆ. ರೈತರ ಜೀವಾಳವಾದ ಬೀಜ ಅವರ ಕೈತಪ್ಪುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳ ಕಪಿಮುಷ್ಟಿಗೆ ಬೀಜ ಸಿಕ್ಕಿಕೊಂಡಿದೆ. ಇದೀಗ ಕುಲಾಂತರಿ ತಳಿಗಳು ಬರುತ್ತಿವೆ. ಇದು ಕೃಷಿಗೆ ಧಕ್ಕೆ ತರುತ್ತದೆ. ಹಿಂದೆ, ಬ್ರಿಟಿಷ್ ವಸಾಹತು ಕಾಲದಲ್ಲಿದ್ದ ಸರ್ಕಾರ ಈಸ್ಟ್ ಇಂಡಿಯಾ ಕಂಪೆನಿ ಪರವಾಗಿ ನೀತಿಗಳನ್ನು ಜಾರಿಗೊಳಿಸುತ್ತಿದ್ದ ರೀತಿಯಲ್ಲಿ, ಇಂದಿನ ಸರ್ಕಾರಗಳು ಬಂಡವಾಳಿಗರ, ಕಾರ್ಪೊರೇಟ್ ಮನೆತನಗಳ ಪರವಾಗಿ ನೀತಿಗಳನ್ನು ಪಾಲಿಸುತ್ತಿವೆ. ಬಿಜೆಪಿ ಸರ್ಕಾರ ಬಂಡವಾಳಿಗರ ಹಿತ ಕಾಪಾಡಲು ರೈತ ವಿರೋಧಿ ನೀತಿಗಳನ್ನು ಎಗ್ಗುಸಿಗ್ಗಿಲ್ಲದೆ ಜಾರಿಗೊಳಿಸುತ್ತಿದೆ. ಕಾರ್ಪೊರೇಟ್ ಕಂಪೆನಿಗಳು ರೈತರನ್ನು ನಿರ್ದಯವಾಗಿ ಶೋಷಿಸುತ್ತಿವೆ. ಹಾಗಾಗಿ ನಮ್ಮ ಹೋರಾಟ ಬಂಡವಾಳಿಗರ ಮತ್ತು ಕಾರ್ಪೊರೇಟ್ ಕಂಪೆನಿಗಳ ವಿರುದ್ಧದ ಹೋರಾಟ. ಈ ಹೋರಾಟದೊಳಗೆ ದೇಶದ ರೈತ ಸಮುದಾಯ ಧುಮುಕಬೇಕು” ಎಂದು ಕರೆ ನೀಡಿದರು.

ಅಕ್ಟೋಬರ್ ತಿಂಗಳ 17 ರಂದು ಮಹಾನ್ ಸ್ವಾತಂತ್ರ್ಯ ಹೋರಾಟಗಾರ, ಪಂಜಾಬಿನ ಸಿಂಹ ಲಾಲಾ ಲಜಪತ್ ರಾಯ್ ಹುತಾತ್ಮರಾದ ದಿನದಂದು ನಾಡಿನಾದ್ಯಂತ ಹಳ್ಳಿ, ಹಳ್ಳಿಗಳಲ್ಲಿ ಹುತಾತ್ಮ ದಿನ ಆಚರಿಸಲಾಗುವುದು ಮತ್ತು 18 ರಂದು ದೇಶದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು; ಫೆಬ್ರುವರಿ, 2025 ರಂದು ರಾಜ್ಯಗಳ ರಾಜಧಾನಿಗಳಲ್ಲಿ, ರಾಷ್ಟ್ರಪತಿ ಭವನಗಳ ಮುಂದೆ ರೈತ ಚಳುವಳಿ ಸಂಘಟಿಸಲಾಗುವುದು ಎಂದು ಮಹಾಪಂಚಾಯತ್‌ನಲ್ಲಿ ಎಐಕೆಕೆಎಂಎಸ್ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಶಂಕರ್ ಘೋಷ್ ಘೋಷಿಸಿದರು. ಈ ಹೋರಾಟಗಳನ್ನು ಅತ್ಯಂತ ಯಶಸ್ವಿಗೊಳಿಸಲು ನೆರೆದಿದ್ದ ರೈತರು ಸಂಕಲ್ಪ ತೊಡುವುದರೊಂದಿಗೆ ಮಹಾಪಂಚಾಯತ್ ಮುಕ್ತಾಯವಾಯಿತು.

# ಬಾಂಗ್ಲಾದೇಶದಲ್ಲಿ ಕೋಲಾಹಲ: ಸತ್ಯಸಂಗತಿ ಏನು!

**(ಸೋಷಲಿಸ್ಟ್ ಪಾರ್ಟಿ ಆಫ್ ಬಾಂಗ್ಲಾದೇಶ್-ಮಾರ್ಕ್ಸ್‌ವಾದಿ(ಎಸ್‌ಪಿಬಿ[ಎಂ]) ಪಕ್ಷದ ಕೇಂದ್ರ ಕಾರ್ಯಕಾರಿ ವೇದಿಕೆಯ ಸದಸ್ಯರಾದ ಕಾಮ್ರೇಡ್ ಡಾ.ಜಯ್‌ದೀಪ್ ಭಟ್ಟಾಚಾರ್ಯ ಮತ್ತು ಕಾಮ್ರೇಡ್ ರಶೀದ್ ಶತ್ರಿಯರ್ ಸೇರಿಕೊಂಡು ಜಂಟಿಯಾಗಿ ಬರೆದಿರುವ ಈ ಲೇಖನದ ಸಂಕ್ಷಿಪ್ತ ಕನ್ನಡ ಅನುವಾದವನ್ನು ಕಾ.ದೃ ಓದುಗರ ಮುಂದೆ ಇಲ್ಲಿ ಇಡುತ್ತಿದ್ದೇವೆ. ವಾಸ್ತವವಾಗಿ, ಬಾಂಗ್ಲಾದೇಶದಲ್ಲಿ ಘಟಿಸಿದ ಬೆಳವಣಿಗೆಗಳ ಬಗ್ಗೆ ಈ ಲೇಖನವು ಸತ್ಯದ ಅನಾವರಣವನ್ನು ಮಾಡುತ್ತದೆ ಎಂದು ಆಶಿಸುತ್ತೇವೆ.)**

ಆಗಸ್ಟ್ 5ರ ಮಧ್ಯಾಹ್ನ ಸಾವಿರಾರು ಮಂದಿ 'ಗಣಭವನ'ಕ್ಕೆ ಬಂದು ಸೇರುವ ಹೊತ್ತಿಗೆ ಶೇಖ್ ಹಸೀನಾ ರಾಜೀನಾಮೆ ಸಲ್ಲಿಸಿದ್ದರು, ದೇಶಬಿಟ್ಟು ಪರಾರಿಯಾಗಿದ್ದರು. 'ಸ್ವಾತಂತ್ರ್ಯ' – ಈ ಪದದಿಂದ ಫೇಸ್‌ಬುಕ್ ತುಂಬಿ ಹೋಗಿತ್ತು. 'ಸ್ವಾತಂತ್ರ್ಯ' ಎಂಬುದು ಯಾವುದೇ ವ್ಯಕ್ತಿಯು ತನ್ನ ಹೃದಯದಲ್ಲಿ ಜತನದಿಂದ ಪೊರೆಯುವ ಮಿಡಿತ. ದಮನಿತ ದೇಶವೊಂದರ ಜನರ ಬದುಕಿನಲ್ಲಿ ಇದಕ್ಕಿಂತ ಪ್ರಿಯವಾದದ್ದು ಬೇರೊಂದಿರುವುದಿಲ್ಲ. 1971ರಲ್ಲಿ ನಾವು ಸ್ವತಂತ್ರರಾದೆವು. ಪಾಕಿಸ್ತಾನಿಯರ ದಬ್ಬಾಳಿಕೆ, ಅನ್ಯಾಯ ಮತ್ತು ತಾರತಮ್ಯಗಳ ವಿರುದ್ಧ ನಡೆದ ಹೋರಾಟ ಅದಾಗಿತ್ತು. ಆದರೆ, ಸ್ವಾತಂತ್ರ್ಯ ದೊರೆತ ನಂತರ ನಮಗೆ ಬಾಂಗ್ಲಾದೇಶ ಹೆಸರಿನ ಭೂಪ್ರದೇಶವೇನೋ ಲಭಿಸಿತು, ಆದರೆ, ನೈಜ ಅರ್ಥದಲ್ಲಿ ನಾವು ಸ್ವತಂತ್ರರಾಗಲಿಲ್ಲ. ಒಂದು ಹೊಸ ಸಂಘರ್ಷ ಶುರುವಾಯಿತು. ಮುಂದೆ, ಸರ್ವಾಧಿಕಾರಿ ಜನರಲ್ ಇರ್ಷಾದ್‌ನನ್ನು ಅಧಿಕಾರದಿಂದ ಕಿತ್ತೊಗೆಯಬೇಕಾಯಿತು. ಆದರೆ, ನೈಜ ಸ್ವಾತಂತ್ರ್ಯ ಲಭಿಸಲಿಲ್ಲ. ಪೊಳ್ಳು ಭರವಸೆ ನೀಡುವ ಒಂದು ಪಕ್ಷದ ಸ್ಥಾನದಲ್ಲಿ ಅದೇ ಪ್ರಕಾರದ ಇನ್ನೊಂದು ಪಕ್ಷ ಅಧಿಕಾರಕ್ಕೆ ಬಂತು. ಸರಿಯಾದ ರಾಜಕೀಯ ಪ್ರಜ್ಞೆಯ ಕೊರತೆಯ ಕಾರಣದಿಂದ ಆಳುವ ರಾಜಕೀಯ ಪಕ್ಷಗಳ ನೈಜ ಲಕ್ಷಣವನ್ನು ಅರಿಯಲು ಜನತೆ ವಿಫಲರಾದರು ಮತ್ತು ಪದೇಪದೇ ವಂಚನೆಗೆ ಒಳಗಾದರು.

ಎರಡೂ ಪಕ್ಷ(ಆವಾಮಿ ಲೀಗ್ ಮತ್ತು ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿ)ಗಳ ಆಳ್ವಿಕೆಯಲ್ಲಿಯೂ ನಮಗೆ ಯಾವುದೇ ಸ್ವಾತಂತ್ರ್ಯ ಇರಲಿಲ್ಲ. ಆದರೆ ಕಳೆದ 16 ವರ್ಷಗಳ ಆವಾಮಿ ಲೀಗ್ ಪಕ್ಷದ ಸರ್ವಾಧಿಕಾರದ ಆಳ್ವಿಕೆಯ ದಮನವು ಹಿಂದಿನ ಎಲ್ಲಾ ದಮನಕಾರಿ ಪ್ರಭುತ್ವಗಳನ್ನು ಚಿಕ್ಕದಾಗಿಸಿದೆ. ಅದು ಮತ್ತೆಮತ್ತೆ ನಮಗೆ ಪಾಕಿಸ್ತಾನಿ ಆಳ್ವಿಕೆಯ ಕರಾಳ ನೆನಪುಗಳು ಮರುಕಳಿಸುವಂತೆ ಮಾಡಿದೆ. 1971ರಲ್ಲಿ ವಿರೋಧ ಪಕ್ಷಗಳ ನಾಯಕರ ಮತ್ತು ಕಾರ್ಯಕರ್ತರ ಮನೆಯ ಕದಗಳನ್ನು ತಡರಾತ್ರಿ ತಟ್ಟಲಾಗುತ್ತಿತ್ತು. ಅವರನ್ನು ವಶಕ್ಕೆ ಪಡೆದು ಬಂದೀಖಾನೆಗೆ ತಳ್ಳಲಾಗುತ್ತಿತ್ತು. ಹಸೀನಾ ಸರ್ಕಾರದ ಅವಧಿಯಲ್ಲೂ ಪರಿಸ್ಥಿತಿ ಅದೇ ರೀತಿ ಆಗಿತ್ತು. ಪೊಲೀಸರು ಬಂಧನದ ಯಾವುದೇ ದಾಖಲೆಯನ್ನು ಇಡುತ್ತಿರಲಿಲ್ಲ. ಕುಟುಂಬದ ಸದಸ್ಯರಿಗೆ ಸುಳಿವೇ ಸಿಗುತ್ತಿರಲಿಲ್ಲ. ಅವರಲ್ಲಿ ಕೆಲವರನ್ನು ನಂತರದ ದಿನಗಳಲ್ಲಿ ಪತ್ತೆಹಚ್ಚಲು ಸಾಧ್ಯವಾದರೆ, ಕೆಲವರು ಬೀದಿಗಳಲ್ಲಿ ಅರೆ ಶವವಾಗಿ ಸಿಗುತ್ತಿದ್ದರು. ಸರ್ಕಾರದ ಕಪ್ಪುಪಟ್ಟಿಯನ್ನು ಸೇರಲು ಒಬ್ಬ ವ್ಯಕ್ತಿ ದೊಡ್ಡ ನಾಯಕನೇ ಆಗಬೇಕಿರಲಿಲ್ಲ. ಒಮ್ಮೆ, ಸರ್ಕಾರದ ವಿರುದ್ಧ ವ್ಯಂಗ್ಯ ಚಿತ್ರ ರಚಿಸಿದ ಕಾರಣಕ್ಕೆ ಒಬ್ಬ ಹದಿಹರೆಯದವನನ್ನು ಬಂಧಿಸಲಾಯಿತು. ಅವನು ಜೈಲಿನಲ್ಲಿಯೇ ಪ್ರಾಣ ಬಿಟ್ಟಿದ್ದ. ವ್ಯಂಗ್ಯ ಚಿತ್ರಗಳು, ಲೇಖನಗಳು ಮತ್ತು ಟೀಕೆಗಳು ಅಷ್ಟರಮಟ್ಟಿಗೆ ದೇಶದಲ್ಲಿ ನಿಷೇಧಕ್ಕೆ ಒಳಗಾಗಿದ್ದವು.

### ಮೀಸಲಾತಿ ವಿರೋಧಿ ಚಳುವಳಿಯಿಂದ ಸಾಮೂಹಿಕ ಬಂಡಾಯದತ್ತ

ಇದು ಆರಂಭವಾಗಿದ್ದು ಸ್ವಾತಂತ್ರ್ಯ ಹೋರಾಟಗಾರರ ವಂಶಸ್ಥರಿಗೆ ಸರ್ಕಾರಿ ಉದ್ಯೋಗಗಳಲ್ಲಿ, ಹಿಂದೆ ಜಾರಿಯಲ್ಲಿದ್ದ ಶೇ.30ರ ಮೀಸಲಾತಿಯನ್ನು ಮರುಜಾರಿ ಮಾಡಲು ತಯಾರಿ ನಡೆದಾಗ. ತಮ್ಮ ಅತೀವ ತ್ಯಾಗ ಮತ್ತು ಬಲಿದಾನಕ್ಕಾಗಿ ಸ್ವಾತಂತ್ರ್ಯ ಹೋರಾಟಗಾರರ ಕುರಿತು ದೇಶದ ಜನರ ಹೃದಯಗಳಲ್ಲಿ ಅಪಾರ ಗೌರವ ಇದೆ. ಆದರೆ, ಸ್ವಾತಂತ್ರ್ಯ ಲಭಿಸಿದ ಇಷ್ಟು ವರ್ಷಗಳ ನಂತರವೂ, ಅಂದು ಹೋರಾಡಿದವರ ಮಕ್ಕಳಿಗೆ ಮಾತ್ರವಲ್ಲದೆ ಮೊಮ್ಮಕ್ಕಳಿಗೂ ಮೀಸಲಾತಿಯ ಸವಲತ್ತು ಏಕಿರಬೇಕು ಎಂಬುದು ಎದ್ದು ಬಂದಿದ್ದ ಪ್ರಶ್ನೆಯಾಗಿತ್ತು. ಶೇ.30ರ ಸ್ವಾತಂತ್ರ್ಯ ಹೋರಾಟಗಾರರ ಕೋಟಾ ಸೇರಿದಂತೆ ಇದುವರೆಗಿನ ನೇಮಕಾತಿಗಳಲ್ಲಿ ಒಟ್ಟು ಶೇ.56ರಷ್ಟು ಮೀಸಲಾತಿಯ ಆಧಾರದಲ್ಲೇ ಎಲ್ಲವೂ ನಡೆದುಕೊಂಡು ಬಂದಿದೆ. ದೇಶದಲ್ಲಿ ಇಂದು ನಿರುದ್ಯೋಗ ಸಮಸ್ಯೆ ತೀವ್ರವಾಗಿದೆ. ದೇಶದಲ್ಲಿ 3 ಕೋಟಿ ಜನರು ನಿರುದ್ಯೋಗಿಗಳು. ಬಿಐಡಿಎಸ್(ಬಾಂಗ್ಲಾದೇಶ ಅಭಿವೃದ್ಧಿ ಅಧ್ಯಯನ ಸಂಸ್ಥೆ) ಅಧ್ಯಯನದ ಪ್ರಕಾರ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದಿರುವವರಲ್ಲಿ ಶೇ.48 ಮಂದಿ ನಿರುದ್ಯೋಗಿಗಳಿದ್ದಾರೆ. ಆದರೆ ಸರ್ಕಾರವು ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ, ಹೊಸ ಉದ್ಯೋಗಗಳು ಸೃಷ್ಟಿ ಆಗುತ್ತಿಲ್ಲ. ಲಂಚಗುಳಿತನ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಪ್ರಶ್ನೆ ಪತ್ರಿಕೆ ಸೋರಿಕೆ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿವೆ. ಹಾಗಾಗಿಯೇ, ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾಗುವಂತೆ ಪರಿಸ್ಥಿತಿಯು ನಿರ್ಮಾಣವಾಗಿದೆ.



2018ರಲ್ಲಿ ನಡೆದ ಕೋಟಾ ಸುಧಾರಣಾ ಚಳುವಳಿಯ ಫಲವಾಗಿ ಆವಾಮಿ ಲೀಗ್(ಶೇಖ್ ಹಸೀನಾ) ಸರ್ಕಾರವು ಕೋಟಾವನ್ನು ನಿಷೇಧಿಸಿ ಆಜ್ಞೆಯನ್ನು ಹೊರಡಿಸಿತ್ತು. ಆದರೆ ಈ ವರ್ಷ ಜೂನ್ 5ರಂದು ಆ ಆಜ್ಞೆಯನ್ನು ಉಚ್ಚ ನ್ಯಾಯಾಲಯವು ರದ್ದುಪಡಿಸಿತು. ಅದೇ ದಿನ ಢಾಕಾ ಮತ್ತು ಜಹಾಂಗೀರ್‌ನಗರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಪ್ರತಿಭಟನೆ ಇತರೆಡೆಗೂ ಹಬ್ಬಿತು. ತಮ್ಮ ಬೇಡಿಕೆಗಳನ್ನು ಜೂನ್ ತಿಂಗಳೊಳಗೆ ಈಡೇರಿಸುವಂತೆ ವಿದ್ಯಾರ್ಥಿಗಳು ಆಗ್ರಹಿಸಿದರು. ಸರ್ಕಾರವು ಹಠಮಾರಿ ಧೋರಣೆ ತೋರಿತು. ನಂತರ ಈದ್ ಕಾಲದ ರಜೆ ಮುಗಿದು ಜುಲೈ 1ರಂದು ತರಗತಿಗಳು ಆರಂಭವಾಗುತ್ತಿದ್ದಂತೆಯೇ ಮತ್ತೆ ಪ್ರತಿಭಟನೆಗಳು ಆರಂಭವಾದವು. ದೇಶದ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಬೀದಿಗಿಳಿದರು. ಜುಲೈ 4ರಂದು ಮೇಲ್ಮನವಿ ಪ್ರಾಧಿಕಾರದಲ್ಲಿ ವಿಚಾರಣೆ ನಡೆದರೂ, ಅದು ಉಚ್ಚ ನ್ಯಾಯಾಲಯದ ತೀರ್ಪಿಗೆ ತಡೆಯಾಜ್ಞೆ ನೀಡಲಿಲ್ಲ. ಜುಲೈ 5ರಂದು ದೇಶದ ವಿವಿಧೆಡೆ ವಿದ್ಯಾರ್ಥಿಗಳು ರಸ್ತೆ ತಡೆ ನಡೆಸಿದರು. ಜುಲೈ 6ರಿಂದ ವಿದ್ಯಾರ್ಥಿಗಳು 'ಬಾಂಗ್ಲಾ ದಿಗ್ಬಂಧನ' ಹೋರಾಟಕ್ಕೆ ಕರೆ ನೀಡಿದರು.

ಜುಲೈ 10ರಂದು ಮೇಲ್ಮನವಿ ಪ್ರಾಧಿಕಾರವು ಸರ್ಕಾರಿ ನೌಕರಿಯಲ್ಲಿ ನೇರ ನೇಮಕಾತಿ ಕೋಟಾಕ್ಕೆ 4 ವಾರಗಳ ತಡೆ ನೀಡಿ, ಮುಂದಿನ ವಿಚಾರಣೆಯನ್ನು ಆಗಸ್ಟ್ 7ಕ್ಕೆ ನಿಗದಿಪಡಿಸಿತು. ಆದರೆ ವಿದ್ಯಾರ್ಥಿಗಳು ಎಲ್ಲಾ ಶ್ರೇಣಿಗಳ ಸರ್ಕಾರಿ ನೌಕರಿಗಳಲ್ಲಿ ಕೋಟಾ ಸುಧಾರಣೆಯನ್ನು ಆಗ್ರಹಿಸಿದರು. ಕಾರ್ಯಾಂಗವು ಈ ವಿಷಯದಲ್ಲಿ ತೀರ್ಮಾನವನ್ನು ಕೈಗೊಳ್ಳಬೇಕು, ನ್ಯಾಯಾಂಗ ಅಲ್ಲ ಎಂದರು ವಿದ್ಯಾರ್ಥಿಗಳು. ಕೋಟಾ ವ್ಯವಸ್ಥೆ ಸಂಪೂರ್ಣವಾಗಿ ಹಿಂಪಡೆಯುವವರೆಗೂ ಹೋರಾಟವನ್ನು ಮುಂದುವರಿಸುವುದಾಗಿ ಅವರು ಘೋಷಿಸಿದರು. ಸರ್ಕಾರವು ಮುಗುಮ್ಮಾಗಿ ಕುಳಿತಿತ್ತು.

ಆಡಳಿತಾರೂಢ ಪಕ್ಷದ ಮುಖಂಡರ ಮತ್ತು ಸಚಿವರ ಬೆದರಿಕೆಗಳಿಗೆ ಸೊಪ್ಪು ಹಾಕದ ವಿದ್ಯಾರ್ಥಿಗಳು ಹೆದ್ದಾರಿ ತಡೆ ಹಾಗೂ ರೈಲು ತಡೆಗಳನ್ನು ಮುಂದುವರಿಸಿದರು. ಜುಲೈ 14ರಂದು ಈ ಬೇಡಿಕೆಗಳ ಮನವಿ ಪತ್ರವನ್ನು ರಾಷ್ಟ್ರಪತಿಗಳಿಗೂ ಸಲ್ಲಿಸಿದ್ದರು. ಅದೇ ದಿನ 'ಗಣಭವನ'(ಪ್ರಧಾನಿಗಳ ಅಧಿಕೃತ ನಿವಾಸ)ದಲ್ಲಿ ಮಾಧ್ಯಮ ಗೋಷ್ಠಿ ನಡೆಸಿದ ಪ್ರಧಾನಿ ಶೇಖ್ ಹಸೀನಾ, "ಕೋಟಾ ವಿಚಾರವಾಗಿ ನಾನು ಏನನ್ನೂ ಮಾಡಲು ಸಾಧ್ಯವಿಲ್ಲ. ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಲಾಗದು." ಎಂದರು. ಅಂದು, ಒಂದು ಸಂದರ್ಭದಲ್ಲಿ, "ಸ್ವಾತಂತ್ರ್ಯ ಹೋರಾಟಗಾರರ ಪೀಳಿಗೆಯವರಲ್ಲದೆ 'ರಜಾಕಾರ್'ರ ಮೊಮ್ಮಕ್ಕಳು ನೌಕರಿ ಪಡೆಯಬೇಕೇ?" ಎಂದು ಅವರು ಹೋರಾಟನಿರತ ವಿದ್ಯಾರ್ಥಿಗಳನ್ನು ತುಚ್ಛೀಕರಿಸಿ ಅನುಚಿತವಾಗಿಯೂ ಮಾತನಾಡಿದರು. ದೇಶದ ವಿಮೋಚನಾ ಸಮರದ ನೈಜ ಸ್ಫೂರ್ತಿಯನ್ನು ತಮ್ಮ ಹೃದಯಗಳಲ್ಲಿ ಹೊತ್ತಿರುವ ಇಂದಿನ ಯುವಪೀಳಿಗೆಗೇ ಸೇರಿರುವವರನ್ನು, ರಜಾಕಾರರಿಗೆ (ಪಾಕಿಸ್ತಾನದಿಂದ ಬಂದಿದ್ದಂತಹ, ಲಕ್ಷಾಂತರ ಜನ ಅಮಾಯಕ ಬಂಗಾಳಿಗಳ ರಕ್ತದ ಕಲೆಯನ್ನು ತಮ್ಮ ಕೈಗಳ ಮೇಲೆ ಹೊತ್ತಿರುವ ವಿದ್ರೋಹಿ ಪಡೆ) ಹೋಲಿಸಿ ಮಾಡಿದ ಅವಮಾನ ಸಹಿಸಲಸಾಧ್ಯವಾಗಿತ್ತು.

ಇಂತಹ ಅವಹೇಳನಕಾರಕ ಮಾತಿಗೆ ತಕ್ಕ ಉತ್ತರ ನೀಡಲು ಅದೇ ರಾತ್ರಿ ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆಯನ್ನು ಕೈಗೆತ್ತಿಕೊಂಡರು. 'ನಾನು ಯಾರು, ನೀವು ಯಾರು – ರಜಾಕಾರ್ ರಜಾಕಾರ್', 'ಇದನ್ನು ಹೇಳುವವರು ಯಾರು – ಸರ್ವಾಧಿಕಾರಿ, ಸರ್ವಾಧಿಕಾರಿ', 'ನನ್ನ ಹಕ್ಕುಗಳನ್ನು ಬಯಸಿದೆ, ಅದಕ್ಕೆ ದೇಶದ್ರೋಹಿ ಎಂದು ಕರೆದರು' ಎಂಬಂತಹ ಘೋಷಣೆಗಳು ಮಧ್ಯರಾತ್ರಿಯ ಆಗಸದಲ್ಲಿ ಮೊಳಗಿದವು. ಹೆಣ್ಣುಮಕ್ಕಳೂ ಕೂಡ ಗೇಟುಗಳನ್ನು ಮುರಿದು ರಸ್ತೆಗಿಳಿದರು.

ಪ್ರಧಾನಮಂತ್ರಿಗಳ ವ್ಯಂಗ್ಯಕ್ಕೆ ತಕ್ಕ ಉತ್ತರ ನೀಡಲು ಆರಂಭವಾದ ಈ ಹೋರಾಟ ಕೇವಲ ಕೋಟಾ ಸುಧಾರಣೆಯ ಆಗ್ರಹಕ್ಕೆ ಸೀಮಿತವಾಗಿ ಉಳಿಯಲಿಲ್ಲ. ಹಸೀನಾರ ನಿರಂಕುಶ ಆಳ್ವಿಕೆಯ ವಿರುದ್ಧ ದೀರ್ಘಕಾಲದಿಂದ ಮಡುಗಟ್ಟಿದ್ದ ಆಕ್ರೋಶದ ವಿಸ್ಫೋಟವಾಯಿತು. ಅದೇ ರಾತ್ರಿ ಹೋರಾಟದ ಅಗ್ನಿಯು ಬೇರೆ ವಿಶ್ವವಿದ್ಯಾಲಯಗಳಿಗೂ ಹಬ್ಬಿತು. ಮರುದಿನ ಆವಾಮಿ ಲೀಗ್ ಪಕ್ಷದ ಪ್ರಧಾನ ಕಾರ್ಯದರ್ಶಿ ಒಬೆದುಲ್ ಖಾದರ್ 'ಇದಕ್ಕೆ ತಕ್ಕ ಉತ್ತರ ನೀಡಲು ಛಾತ್ರ ಲೀಗ್(ಆವಾಮಿ ಲೀಗ್‌ನ ವಿದ್ಯಾರ್ಥಿ ದಳ) ಸಿದ್ಧವಿದೆ' ಎಂದರು. ನಂತರದ ಕೆಲವು ಗಂಟೆಗಳಲ್ಲಿ ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಹೋರಾಟಗಾರರ ಮೇಲೆ ಛಾತ್ರ ಲೀಗ್‌ನ ಬಾಡಿಗೆ ಬಂಟರು ಕ್ರೂರ ದಾಳಿಯನ್ನು ನಡೆಸಿದರು. ವಿದ್ಯಾರ್ಥಿನಿಯರೂ ಸೇರಿದಂತೆ 300ಕ್ಕೂ ಹೆಚ್ಚು ಮಂದಿ ಈ ಘಟನೆಯಲ್ಲಿ ಗಾಯಗೊಂಡರು. ಗಾಯಾಳುಗಳನ್ನು ಚಿಕಿತ್ಸೆಗಾಗಿ ಢಾಕಾ ಮೆಡಿಕಲ್ ಕಾಲೇಜಿಗೆ ಕರೆದೊಯ್ದಾಗ ಅಲ್ಲಿಯೂ ಅವರ ಮೇಲೆ ದಾಳಿ ನಡೆಯಿತು.

ಜುಲೈ 15ರಂದು ರಂಗ್‌ಪುರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ರೊಕಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಅಬು ಸೈಯಿದ್ ಪೊಲೀಸರ ಗುಂಡಿಗೆ ಎದೆಯೊಡ್ಡಿ ನಿಂತು ಅದಕ್ಕೆ ಬಲಿಯಾದ. ಅದೇ ದಿನ ದೇಶದ ಬೇರೆಬೇರೆ ಭಾಗಗಳಲ್ಲಿ ಇನ್ನೂ 6 ಮಂದಿ ಪ್ರಾಣ ಕಳೆದುಕೊಂಡರು. ಇದರ ನಂತರ ಇಡೀ ದೇಶವೇ ಸಿಡಿದೆದ್ದಿತು. ಸಂಪೂರ್ಣ ಬಂದ್ ಕರೆಗೆ ದೇಶವೇ ನಿಶ್ಚಲವಾಯಿತು.

ಫ್ಯಾಸಿಸ್ಟ್ ಆವಾಮಿ ಲೀಗ್ ಪಕ್ಷದ ಸರ್ಕಾರವು ಈ ಬೃಹತ್ ಜನ ಹೋರಾಟವನ್ನು ಬರ್ಬರ ದಾಳಿಗಳ ಮೂಲಕ ಹತ್ತಿಕ್ಕಲು ಮುಂದಾಯಿತು. ಸರ್ಕಾರದ ಮತ್ತು ಪಕ್ಷದ ದಮನಕಾರಿ ಪಡೆಗಳನ್ನು ಜನರ ಮೇಲೆ ಛೂ ಬಿಡಲಾಯಿತು. ಪೊಲೀಸ್, ಕ್ಷಿಪ್ರ ಪಡೆ, ಬಾಂಗ್ಲಾದೇಶ ಗಡಿ ರಕ್ಷಣಾ ಪಡೆ ಮತ್ತು ಛಾತ್ರ ಲೀಗ್, ಯುವ ಲೀಗ್(ಆವಾಮಿ ಲೀಗ್ ಪಕ್ಷದ ಗೂಂಡಾ ಪಡೆಗಳು) ಒಟ್ಟಾಗಿ ಸೇರಿ 200ಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳನ್ನು ಹತ್ಯೆಗೈದವು. ಈ ಸಂಖ್ಯೆ 500ಕ್ಕೂ ಅಧಿಕವಾಗಿದೆ ಮತ್ತು ವಾಸ್ತವಾಂಶಗಳು ಇನ್ನೂ ಹೊರಬರಬೇಕಿದೆ. ಗುಂಡಿನ ದಾಳಿಗೆ ಸಿಕ್ಕು 50ಕ್ಕೂ ಹೆಚ್ಚು ಮಂದಿ ಕಣ್ಣು ಕಳೆದುಕೊಂಡು ಕುರುಡರಾಗಿದ್ದಾರೆ. 6,000ಕ್ಕೂ ಮೀರಿ ಗಾಯಗೊಂಡಿದ್ದಾರೆ. 11,000 ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಇಷ್ಟೆಲ್ಲಾ ದಬ್ಬಾಳಿಕೆಯ ನಂತರವೂ ಚಳವಳಿಯನ್ನು ಹತ್ತಿಕ್ಕಲು ವಿಫಲವಾದಾಗ, ಸರ್ಕಾರವು ಕರ್ಫ್ಯೂ ವಿಧಿಸಿ ಸೇನೆಯನ್ನು ನಿಯೋಜಿಸಿತು. ಇಂಟರ್ನೆಟ್, ಮೊಬೈಲ್ ಸೇವೆಗಳನ್ನು ಸ್ಥಗಿತಗೊಳಿಸಲಾಯಿತು. ವಾಟ್ಸಾಪ್, ಫೇಸ್‌ಬುಕ್‌ಗಳ ಮೇಲೆ ದಿಗ್ಬಂಧನ ವಿಧಿಸಲಾಯಿತು. ಸರ್ಕಾರದ ಏಕಪಕ್ಷೀಯ ಸುದ್ದಿಗಳ ಪ್ರಚಾರವನ್ನು ಟೆಲಿವಿಷನ್ ಮಾಡಿತು. ಆದರೆ ವಾಸ್ತವ ಸಂಗತಿಗಳ ವಿಡಿಯೋ ಮತ್ತು ಸುದ್ದಿ ಅಲ್ಪಸ್ವಲ್ಪವಾದರೂ ಹರಡುವುದನ್ನು ಇವ್ಯಾವುದರಿಂದಲೂ ತಡೆಯಲಾಗಲಿಲ್ಲ. ಬೇಕಾಬಿಟ್ಟಿ ಗೋಲಿಬಾರ್ ಮೂಲಕ ಜನರನ್ನು ಕೊಲೆಗೈದ ಪೊಲೀಸರ ಕೃತ್ಯಗಳನ್ನು ವಿಡಿಯೋಗಳ ಮೂಲಕ ನೋಡಿ ಜನತೆ ದಿಗ್ಮೂಢರಾದರು. ಬಲಿಯಾದವರ ಎದೆ, ತಲೆಗಳಿಗೆ ಗುಂಡೇಟು ಬಿದ್ದಿದ್ದವು. ಬಾಲ್ಕನಿ, ತಾರಸಿಯಲ್ಲಿದ್ದ ಅಮಾಯಕ ಮಕ್ಕಳನ್ನೂ ಅವರು ಬಿಡಲಿಲ್ಲ. ಇದುವರೆಗೆ ಲಭ್ಯವಿರುವ ಮಾಹಿತಿಯಂತೆ 32 ಮಕ್ಕಳು ಗುಂಡೇಟಿಗೆ ಬಲಿಯಾಗಿದ್ದಾರೆ. ವಿಮೋಚನಾ ಯುದ್ಧದ ನಂತರ ಮೊದಲ ಬಾರಿಗೆ ದೇಶವು ಇಂತಹ ರಕ್ತಪಾತವನ್ನು ಕಂಡಿದೆ. ಬಾಂಗ್ಲಾದೇಶದಲ್ಲಿ ನಡೆದ ಭಾಷಾ ಹೋರಾಟ, 1969 ಮತ್ತು 1990ರ ಜನರ ಬಂಡಾಯಗಳು ಈ ನೆಲವನ್ನು ನಲುಗಿಸಿವೆ. ಆಗಲೂ ಚಿತ್ರಹಿಂಸೆ, ಶೋಷಣೆಗಳು ಕಡಿಮೆ ಏನಿರಲಿಲ್ಲ. ಆದಾಗ್ಯೂ ಆಗ ರಸ್ತೆಗಳಲ್ಲಿ ಜನತೆಯ ರಕ್ತದೋಕುಳಿ ಕಂಡಿರಲಿಲ್ಲ. ಈ ಅಂಶದಲ್ಲಿ, ಫ್ಯಾಸಿಸ್ಟ್ ಆವಾಮಿ ಲೀಗ್ ಸರ್ಕಾರವು ಹಿಂದಿನ ಎಲ್ಲಾ ಸರ್ವಾಧಿಕಾರಿಗಳು ನಡೆಸಿದ ಕ್ರೌರ್ಯದ ದಾಖಲೆಗಳನ್ನು ಮೀರಿದೆ. ಆದರೆ ವಿದ್ಯಾರ್ಥಿಗಳ ಮತ್ತು ಜನಸಾಮಾನ್ಯರ ಅದಮ್ಯ ಸ್ಫೂರ್ತಿಯನ್ನು ತುಳಿಯಲು ಯಾವುದರಿಂದಲೂ ಸಾಧ್ಯವಾಗಲಿಲ್ಲ.

6ನೇ ಪುಟಕ್ಕೆ

## ದಾವಣಗೆರೆ: 'ಯುಬಿಡಿಟಿ ಉಳಿಸಿ' ಸಮಾವೇಶ

# "ಯುಬಿಡಿಟಿ ಕಾಲೇಜಿನಲ್ಲಿ ಪೇಮೆಂಟ್ ಕೋಟಾ–ಸರ್ಕಾರದ ಜನದ್ರೋಹ": ಅಲ್ಲಮಪ್ರಭು ಬೆಟ್ಟದೂರು ಆಕ್ರೋಶ!

ರಾಜ್ಯದ ಪ್ರಥಮ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಾಗಿರುವ ದಾವಣಗೆರೆಯ ಯುಬಿಡಿಟಿಯಲ್ಲಿ ಸರ್ಕಾರವು ಈ ಶೈಕ್ಷಣಿಕ ವರ್ಷದಿಂದ 50% ಪೇಮೆಂಟ್ ಕೋಟಾ ಜಾರಿಗೊಳಿಸಿ, ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಸೀಟುಗಳನ್ನು ರೂ. 97,000ಕ್ಕೆ ಮಾರುತ್ತಿದೆ. ಸರ್ಕಾರಿ ಕಾಲೇಜಿನಲ್ಲಿ ಪೇಮೆಂಟ್ ಕೋಟಾ ವಿರೋಧಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಚಳುವಳಿಯ ಭಾಗವಾಗಿ ನಗರದ ಕುವೆಂಪು ಕನ್ನಡ ಭವನದಲ್ಲಿ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಲಾಗಿತ್ತು.

ಬಂಡಾಯ ಸಾಹಿತಿಗಳು ಹಾಗೂ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯಾಧ್ಯಕ್ಷರಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರುರವರು ಸಮಾವೇಶದಲ್ಲಿ ಮಾತನಾಡಿ, ಈಗಾಗಲೇ ಸಮರ್ಪಕ ಸೌಲಭ್ಯಗಳಿಲ್ಲದೆ, ಶಿಕ್ಷಕರ ಹುದ್ದೆಗಳಲ್ಲಿ ನೇಮಕಾತಿಯಾಗದೆ ಶಿಕ್ಷಣ ವ್ಯವಸ್ಥೆಯು ಶೋಚನೀಯ ಸ್ಥಿತಿಯಲ್ಲಿದೆ. ಹೀಗಿರುವಾಗ ಹೆಚ್ಚಿನ ಆರ್ಥಿಕ ಜವಾಬ್ದಾರಿ ವಹಿಸಿ ಸರ್ಕಾರವು ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುವುದನ್ನು ಬಿಟ್ಟು ಯುಬಿಡಿಟಿ ಕಾಲೇಜಿನಲ್ಲಿ ಸೀಟು ಮಾರಾಟ ಮಾಡುತ್ತಿರುವುದು ಜನದ್ರೋಹದ ಕೆಲಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಿಂದಿನ ರಾಜ್ಯ ಸರ್ಕಾರ ಜಾರಿಗೊಳಿಸಿದ ಶಿಕ್ಷಣ ವಿರೋಧಿ ಕರಾಳ ರಾಷ್ಟ್ರೀಯ ಶಿಕ್ಷಣ ನೀತಿ– 2020ರ ವಿರುದ್ಧ ಹಾಗೂ ಅದರ ಭಾಗವಾದ ನಾಲ್ಕು ವರ್ಷದ ಪದವಿ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ಹಾಗೂ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯಿಂದ ನಡೆದ ಹೋರಾಟದ ಫಲವಾಗಿ ಇಂದು ಪ್ರಸಕ್ತ ರಾಜ್ಯ ಸರ್ಕಾರವು ಆ ನೀತಿಯನ್ನು ಹಿಂಪಡೆದು ರಾಜ್ಯ ಶಿಕ್ಷಣ ನೀತಿಯ ರಚನೆಗೆ ಮುಂದಾಗಿದೆ. ಈ ರೀತಿ ವಿದ್ಯಾರ್ಥಿಗಳು ಬಲಿಷ್ಠ ಚಳುವಳಿ ಮೂಲಕ ಯುಬಿಡಿಟಿ ಕಾಲೇಜು ಉಳಿಸಬೇಕೆಂದು ಕರೆ ನೀಡಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ ಎ. ಮುರಿಗಪ್ಪ ಮಾತನಾಡಿ, ಒಂದೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳನ್ನು ಒಡೆದು ಆಳುವ ನೀತಿ ಇದಾಗಿದೆ. ಈ ಕಾಲೇಜಿನಲ್ಲಿ ಪೇಮೆಂಟ್ ಕೋಟಾ ಬದಲಿಗೆ ಫೀಲೆಸ್ (ಶುಲ್ಕ ರಹಿತ) ಕೋಟಾ ಜಾರಿಗೊಳಿಸಿದರೆ ಸರ್ಕಾರವು ಪ್ರಶಂಸೆಗೆ ಅರ್ಹವಾಗುತ್ತದೆ. ರಾಜ್ಯದ ಬಡ ಜನರಿಗೆ 5 ಗ್ಯಾರಂಟಿಗಳನ್ನು ನೀಡುತ್ತಿರುವ ರಾಜ್ಯ ಸರ್ಕಾರವು ಶಿಕ್ಷಣವನ್ನು 6ನೇ ಗ್ಯಾರಂಟಿಯಾಗಿ ನೀಡಬೇಕು ಎಂದು ಆಗ್ರಹ ವ್ಯಕ್ತಪಡಿಸಿದರು.




ಪ್ರತಿಭಟನೆಯಲ್ಲಿ: ಎಡದಿಂದ: ಕಾ. ಮಹಾಂತೇಶ ಬಿಳೂರ್, ಕಾ. ಟಿ.ಎಸ್. ಸುನೀತ್‌ಕುಮಾರ್, ಶ್ರೀ.ಅಲ್ಲಮಪ್ರಭು ಬೆಟ್ಟದೂರು, ಪ್ರೊ. ಎ. ಮುರಿಗೆಪ್ಪ, ಪ್ರೊ. ಕೆ. ಎಸ್. ಈಶ್ವರಪ್ಪ, ಡಾ. ಸುರೇಶ ಚಂದ್ರಮೋಹನ, ಶ್ರೀ. ರವಿನಾರಾಯಣ, ಪ್ರೊ. ಎ ಬಿ ರಾಮಚಂದ್ರಪ್ಪ, ಕಾ. ಸುಭಾಷ್ ಬೆಟ್ಟದಕೊಪ್ಪ

ಡಿ.ಆರ್.ಎಂ ವಿಜ್ಞಾನ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ ಕೆ. ಎಸ್. ಈಶ್ವರಪ್ಪ ಮಾತನಾಡಿ, ಬಡವರ ಪರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿಗಳು ವಿದ್ಯಾರ್ಥಿಗಳ ಈ ಹೋರಾಟದ ಕೂಗಿಗೆ ಸ್ಪಂದಿಸಬೇಕು. ಆರ್ ಜಿ ಕರ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಸುಪ್ರೀಂ ಕೋರ್ಟಿನ ಕಡಿವಾಣವನ್ನೂ ಲೆಕ್ಕಿಸದೆ ಹೋರಾಡಿ ಜಯಗಳಿಸಿದ ರೀತಿಯಲ್ಲಿ 'ಯುಬಿಡಿಟಿ ಉಳಿಸಿ' ಚಳುವಳಿಯು ಯಾವ ಅಡೆತಡೆಯನ್ನು ಲೆಕ್ಕಿಸದೆ ಬೆಳೆಯಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಯುಬಿಡಿಟಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಸುರೇಶ್‌ಚಂದ್ರ ಮೋಹನ್ ಮಾತನಾಡಿ, ಯುಬಿಡಿಟಿ ಕಾಲೇಜನ್ನು ಉಳಿಸಲು ನಡೆಯುತ್ತಿರುವ ಈ ಹೋರಾಟಕ್ಕೆ ಜಯ ಸಿಗುವವರೆಗೂ ವಿದ್ಯಾರ್ಥಿಗಳು ಸಂಘಟಿತರಾಗಿ ನಿಂತರೆ ಯಶಸ್ಸು ಶತಸಿದ್ಧ! ಸರ್ಕಾರವೇ ಯುಬಿಡಿಟಿ ಕಾಲೇಜಿನ ಸಂಪೂರ್ಣ ಆರ್ಥಿಕ ಜವಾಬ್ದಾರಿ ವಹಿಸಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಪ್ರತಿಷ್ಠಿತ ಯುವಿಸಿಇ ಎಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಎಐಡಿಎಸ್‌ಓ ರಾಜ್ಯ ಖಜಾಂಚಿಗಳಾದ ಕಾ. ಸುಭಾಷ್ ಬೆಟ್ಟದಕೊಪ್ಪ ಮಾತನಾಡಿ, ಶುಲ್ಕ ಹೆಚ್ಚಳ ಸೇರಿದಂತೆ ಯುವಿಸಿಇ ಕಾಲೇಜಿನ ಹಲವಾರು ಸಮಸ್ಯೆಗಳ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟ ಹಲವಾರು ವಿಜಯಗಳನ್ನು ಗಳಿಸಿದೆ. ಅದೇ ರೀತಿ ಯುಬಿಡಿಟಿ ಹೋರಾಟ ಮುಂದುವರೆಯಬೇಕು. ಈಗ ಯುಬಿಡಿಟಿಯಲ್ಲಿ ಸರ್ಕಾರ ಜಾರಿಗೊಳಿಸಿರುವ ಪೇಮೆಂಟ್ ಕೋಟಾ ಶುಲ್ಕವು ಈ ಸಂಸ್ಥೆಯನ್ನು ಆರ್ಥಿಕ ಸ್ವಾಯತ್ತ ಸಂಸ್ಥೆಯನ್ನಾಗಿಸಿ ಅಂತಿಮವಾಗಿ ಖಾಸಗಿಯವರ ಪಾಲು ಮಾಡುತ್ತದೆ. ಸರ್ಕಾರದ ಈ ನೀತಿಯ ವಿರುದ್ಧ ವಿದ್ಯಾರ್ಥಿಗಳು ರಾಜಿರಹಿತ ಹೋರಾಟ ಬೆಳೆಸಬೇಕು. ಪ್ರಾಂಶುಪಾಲರು, ಕುಲಪತಿಗಳು, ಆಡಳಿತ ಅಧಿಕಾರಿಗಳು, ಸರ್ಕಾರ ಸೇರಿದಂತೆ ಯಾರ ಬೆದರಿಕೆ ಮತ್ತು ಒತ್ತಡಗಳಿಗೆ ಬಾಗದೆ, ಅನ್ಯಾಯ ಮತ್ತು ಶೋಷಣೆಯ ವಿರುದ್ಧ ಹೋರಾಟವನ್ನು ಬೆಳೆಸಿದ ನೇತಾಜಿ ಸುಭಾಷ್‌ಚಂದ್ರ ಬೋಸರಿಂದ ಯುಬಿಡಿಟಿ ಉಳಿಸಿ ಹೋರಾಟವು ಸ್ಫೂರ್ತಿ ಪಡೆಯಬೇಕು ಎಂದು ಕರೆ ನೀಡಿದರು.

ಸಮಾವೇಶದ ಅಧ್ಯಕ್ಷತೆಯನ್ನು ಸಂಘಟನೆಯ ರಾಜ್ಯ ಕಚೇರಿ ಕಾರ್ಯದರ್ಶಿ ಕಾ.ಮಹಾಂತೇಶ್ ವಹಿಸಿದ್ದರು. ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಕಾ. ಪೂಜಾ ನಂದಿಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಕಾ. ಸುಮನ್ ಟಿ. ಎಸ್, ಉಪಸ್ಥಿತರಿದ್ದರು. ಯುಬಿಡಿಟಿ ಕಾಲೇಜು ಹೋರಾಟ ಸಮಿತಿ ಸದಸ್ಯರೊಂದಿಗೆ, ಯುಬಿಡಿಟಿ ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸಮಾವೇಶದಲ್ಲಿ ಭಾಗವಹಿಸಿ ಪೇಮೆಂಟ್ ಕೊಟಾ ರದ್ದಾಗುವವರೆಗೂ ಹೋರಾಟವನ್ನು ಮುಂದುವರಿಸುವುದಾಗಿ ಸಂಕಲ್ಪ ತೆಗೆದುಕೊಂಡರು.

...5ನೇ ಪುಟದಿಂದ

# ಬಾಂಗ್ಲಾದೇಶದಲ್ಲಿ ಕೋಲಾಹಲ: ಸತ್ಯಸಂಗತಿ ಏನು!

### ವಿದ್ಯಾರ್ಥಿ ಚಳುವಳಿಯು ಕೋಮುವಾದಿ ಎಂಬ ಹಣೆಪಟ್ಟಿ

ಪ್ರಸಕ್ತ ಹೋರಾಟವನ್ನು ಮುರಿಯಲು ಸರ್ಕಾರವು ಎರಡು ದಾಳಗಳನ್ನು ಉರುಳಿಸಿತು. ಬಲಪ್ರಯೋಗದ ಮೂಲಕ ಹತ್ತಿಕ್ಕುವ ವಿಧಾನ ಒಂದಾದರೆ, ಇನ್ನೊಂದೆಡೆ ಹೋರಾಟಗಾರರು ಸ್ವಾತಂತ್ರ್ಯ ವಿರೋಧಿ ಪ್ರತಿಗಾಮಿ ಶಕ್ತಿಯೆಂದು ಬಿಂಬಿಸಲು ಯತ್ನಿಸಿತು. ಚಳವಳಿಯು ವಿದ್ಯಾರ್ಥಿಗಳ ಕೈಮೀರಿದೆ ಮತ್ತು ಬಿಎನ್‌ಪಿ–ಜಮಾತ್‌ಗಳು ಚಳವಳಿಯ ಒಳಗೆ ನುಸುಳಿವೆ ಎಂದು ಪ್ರಚಾರ ಮಾಡಿತು. ಜನತಾಂತ್ರಿಕ ಮನೋಭಾವದ ಜನರು ಈ ಚಳವಳಿಯಿಂದ ದೂರ ಉಳಿಯುವಂತೆ ಮಾಡಲು ಸಾಧ್ಯವಾದಷ್ಟೂ ಪ್ರಯತ್ನಿಸಿತು. ಲೂಟಿ, ವಿಧ್ವಂಸಕ ಕೃತ್ಯಗಳು, ಬೆಂಕಿ ಹಚ್ಚಿದ ಘಟನೆಗಳನ್ನು ಪ್ರದರ್ಶಿಸಿ ಜನರ ಅನುಕಂಪವನ್ನು ತನ್ನೆಡೆಗೆ ಸೆಳೆದುಕೊಳ್ಳಲು ಹವಣಿಸಿತು.

ಹಿಂದೂ ಮತ್ತು ಮುಸಲ್ಮಾನ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳೆಲ್ಲರೂ ಹೋರಾಟದಲ್ಲಿ ಜೊತೆಜೊತೆಯಾಗಿ ಭಾಗವಹಿಸಿದ್ದಾರೆ. ಒಟ್ಟಾಗಿ ಜೀವ ಕೊಟ್ಟಿದ್ದಾರೆ. ಶೇಖ್ ಹಸೀನಾ ದೇಶ ಬಿಟ್ಟು ಪರಾರಿಯಾಗುತ್ತಿದ್ದಂತೆ, ಚಳವಳಿಗೆ ಮಸಿ ಬಳಿಯುವ ಉದ್ದೇಶದಿಂದ ಪದಚ್ಯುತ ಆವಾಮಿ ಲೀಗ್ ಮತ್ತು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಲ್ಪಸಂಖ್ಯಾತರ ಧಾರ್ಮಿಕ ಸ್ಥಳಗಳ ಮೇಲೆ ದಾಳಿ ನಡೆಸಿದರು. ಆದರೆ ವಿದ್ಯಾರ್ಥಿಗಳು ಈ ನೀಚ ಪಿತೂರಿಯನ್ನು ಸೋಲಿಸಿದರು. ಹಾಗಾಗಿ ಚಳವಳಿಯು ತನ್ನ ಉದ್ದೇಶಿತ ಗುರಿಯಿಂದ ದಿಕ್ಕು ತಪ್ಪಲಿಲ್ಲ.

### ಒಂದೇ ಬೇಡಿಕೆ - ಹಸೀನಾ ರಾಜೀನಾಮೆ

ಜುಲೈ 16ರಂದು ನಡೆದ ಎಡಪ್ರಜಾಸತ್ತಾತ್ಮಕ ಮೈತ್ರಿಕೂಟ, ಫ್ಯಾಸಿಸ್ಟ್ ವಿರೋಧಿ ಎಡರಂಗ ಮತ್ತು ಎಸ್‌ಪಿಬಿ[ಎಂ]ಗಳು ತಮ್ಮ ಜಂಟಿ ಹೇಳಿಕೆಯಲ್ಲಿ ಶೇಖ್ ಹಸೀನಾ ರಾಜೀನಾಮೆಗೆ ಆಗ್ರಹಿಸಿದವು. ಸರ್ಕಾರದ ದಮನಕಾರಿ ಕ್ರಮಗಳ ವಿರುದ್ಧ ಜುಲೈ 26ರಂದು ಸಾಂಸ್ಕೃತಿಕ ಕಾರ್ಯಕರ್ತರು ನಿಷೇಧಾಜ್ಞೆಯನ್ನು ಉಲ್ಲಂಘಿಸಿ 'ಗಣ' ಮೆರವಣಿಗೆಯನ್ನು ಸಂಘಟಿಸಿದರು. ಅದೇ ದಿನ ಸಂಜೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಹುತಾತ್ಮರಿಗೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿದವು.

ಜುಲೈ 17ರಂದು ಮಹಿಳೆಯರ ನೇತೃತ್ವದಲ್ಲಿ ಪ್ರತಿಭಟನಾ ರ‍್ಯಾಲಿ ನಡೆಯಿತು. ಜುಲೈ 29ರಂದು ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿಯು ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿತ್ತು. ಜುಲೈ 30ರಂದು ಕೆಂಪು ಬಟ್ಟೆ ಧರಿಸಲು, ಸಾಮಾಜಿಕ ಮಾಧ್ಯಮಗಳ ತಮ್ಮ ಖಾತೆಗಳ ಪ್ರೊಫೈಲ್‌ಗಳಲ್ಲಿ ಕೆಂಪು ಬಣ್ಣ ಹಾಕುವ ಚಳವಳಿಗೆ ಕರೆ ನೀಡಲಾಗಿತ್ತು. ಜುಲೈ31ರಂದು 'ನ್ಯಾಯಕ್ಕಾಗಿ ನಡಿಗೆ' ಹೋರಾಟದ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯದ ಆವರಣದಲ್ಲಿ ವಕೀಲರು ಭಾಗವಹಿಸಿದರು. ಆಗಸ್ಟ್ 1ರಂದು ದೇಶದಾದ್ಯಂತ ಹುತಾತ್ಮರ ಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆಗಸ್ಟ್ 2ರಂದು ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಲಾಯಿತು.

ಹಸೀನಾ ರಾಜೀನಾಮೆಗೆ ಒತ್ತಾಯಿಸಿ ಆಗಸ್ಟ್ 4ರಿಂದ ಅಸಹಕಾರ ಚಳವಳಿಗೆ ಕರೆ ನೀಡಲಾಯಿತು. ಆದರೆ ಅಂದು ಪೊಲೀಸರು ಮತ್ತು ಆವಾಮಿ ಲೀಗ್ ಗೂಂಡಾಗಳು ಹೋರಾಟಗಾರರ ಮೇಲೆ ಮುಗಿಬಿದ್ದರು. ಆ ಹಿನ್ನೆಲೆಯಲ್ಲಿ ಆಗಸ್ಟ್ 5ರಂದು 'ಢಾಕಾಗೆ ಲಾಂಗ್ ಮಾರ್ಚ್' ಹೋರಾಟವನ್ನು ಘೋಷಿಸಲಾಯಿತು. ಅಂದು ಸಾವಿರಾರು ಮಂದಿ ಢಾಕಾದ ಶಹೀದ್ ಮಿನಾರ್ ಮತ್ತು ಗಣಭವನದೆಡೆಗೆ ಬರಲಾರಂಭಿಸಿದರು. ಅದನ್ನು ತಡೆಯಲು ಸರ್ಕಾರದ ಮುಂದೆ ಯಾವುದೇ ದಾರಿಯಿರಲಿಲ್ಲ. ಪ್ರಭುತ್ವವು ಜನಶಕ್ತಿ(ಗಣಶಕ್ತಿ)ಯ ಮುಂದೆ ಸೋತಿತು. ಶೇಖ್ ಹಸೀನಾ ಅನಿವಾರ್ಯವಾಗಿ ರಾಜೀನಾಮೆ ನೀಡಿ ಗೌಪ್ಯವಾಗಿ ದೇಶದಿಂದ ಕಾಲ್ಕಿತ್ತರು.

### ಜನಸಾಮಾನ್ಯರ ಅವಿಸ್ಮರಣೀಯ ಪಾತ್ರ

ವಿಭಿನ್ನ ವಿಭಾಗಗಳಿಗೆ ಸೇರಿದ ಮತ್ತು ವಿವಿಧ ವೃತ್ತಿಗಳನ್ನು ಮಾಡುವ ಜನತೆ ಈ ಹೋರಾಟದಲ್ಲಿ ಬಹಿರಂಗವಾಗಿ ಮತ್ತು ಪರೋಕ್ಷವಾಗಿ ಅತ್ಯುತ್ಸಾಹದೊಂದಿಗೆ ಪಾಲ್ಗೊಂಡಿದ್ದಾರೆ. ವಿಶ್ವವಿದ್ಯಾಲಯಗಳ ಬೋಧಕರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಅವರ ಸಂಘಟನೆ 'ಯುನಿವರ್ಸಿಟಿ ಟೀಚರ್ಸ್ ನೆಟ್ವರ್ಕ್' ಬಹಳ ಕಾಲದಿಂದ ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ದನಿ ಎತ್ತುತ್ತಲೇ ಇದೆ.

ಈ ಹೋರಾಟದಲ್ಲಿ ದೇಶದಾದ್ಯಂತ ವಿದ್ಯಾರ್ಥಿಗಳೊಂದಿಗೆ ವಕೀಲರೂ ಜೊತೆಯಾದರು. ಸಾಮೂಹಿಕ ಕೊಲೆಗಳ ವಿಚಾರಣೆಗಾಗಿ ಒಂದು ಸಾರ್ವಜನಿಕ ಸಮಿತಿಯನ್ನು ರಚಿಸಲಾಯಿತು. ಢಾಕಾ ನಗರದ ರಿಕ್ಷಾ ಚಾಲಕರು ಕೂಡ ಸಂಘಟಕರಂತೆ ಕೆಲಸ ಮಾಡಿದರು. ರಿಕ್ಷಾ ರ‍್ಯಾಲಿಗಳನ್ನು ಸಂಘಟಿಸಿದ್ದೇ ಅಲ್ಲದೆ, ಕರ್ಫ್ಯೂ ಸಂದರ್ಭದಲ್ಲೂ ಪೊಲೀಸರ ಕಣ್ತಪ್ಪಿಸಿ ಪ್ರತಿಭಟನೆಗಳ ಜಾಗಗಳಿಗೆ ತಲುಪಲು ಅವರು ಸಹಾಯ ಮಾಡಿದರು. ಅಂಗಡಿಗಳ ಕಾರ್ಮಿಕರು, ಸಣ್ಣ ವರ್ತಕರು, ರೈತರು ಕೂಡ ಈ ಚಳವಳಿಯಲ್ಲಿ ಪಾಲ್ಗೊಂಡರು, ಗುಂಡಿಗೆ ಗುಂಡಿಗೆಯನ್ನೊಡ್ಡಿ ಹುತಾತ್ಮರಾದರು.

### ಬಂಡಾಯದ ನಂತರ: ರಾಜಕೀಯ ಚರ್ಚೆ ನಡೆಯಲಿ

ಈ ಹೋರಾಟಕ್ಕೂ ಮುನ್ನ ಚಹ ಅಂಗಡಿಗಳೂ ಸೇರಿದಂತೆ ಬಹುತೇಕ ಎಲ್ಲ ಸ್ಥಳಗಳಲ್ಲೂ ರಾಜಕೀಯ ಚರ್ಚೆಯನ್ನು ನಿಷೇಧಿಸಲಾಗಿದೆ ಎಂಬ ಸಾಮಾನ್ಯ ಸಂದೇಶವು ರವಾನೆಯಾಗಿತ್ತು. ರಾಜಕೀಯ ಚರ್ಚೆಯಲ್ಲಿ ತೊಡಗಲು ಯಾರಿಗೂ ಅವಕಾಶವಿರಲಿಲ್ಲ. ಏಕೆಂದರೆ ಸರ್ಕಾರವನ್ನು ವಿರೋಧಿಸಿ ಮಾತನಾಡುವುದು ತುಂಬಾ ಅಪಾಯಕಾರಿ ಆಗಿತ್ತು. ಆದರೆ ಈ ಸಾಮೂಹಿಕ ಬಂಡಾಯವು ಬಾಂಗ್ಲಾದೇಶದಲ್ಲಿ ಒಂದು ಹೊಸ ಬೆಳಕನ್ನು ತಂದಿದೆ. ಈಗ ಪ್ರತಿಯೊಬ್ಬರೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡುವ ಮಾತಾಡುತ್ತಾರೆ. ಸಾರ್ವಜನಿಕ ಬೆಂಬಲವು ಯಾವುದೇ ಸ್ಥಾಪಿತ ವಿರೋಧ ಪಕ್ಷಗಳೆಡೆಗೆ ಇಲ್ಲ ಎಂಬುದು ಇಲ್ಲಿ ಗಮನಾರ್ಹ ಅಂಶ. ಹಾಗಾಗಿ ಪ್ರಭುತ್ವದ ರಚನೆಯಲ್ಲಿ ಸುಧಾರಣೆಗಳನ್ನು ತರುವುದು ಹೇಗೆ ಎಂಬ ಚರ್ಚೆ ಈಗ ಮುನ್ನೆಲೆಗೆ ಬಂದಿದೆ.

### ಫ್ಯಾಸಿಸ್ಟ್ ಪ್ರಭುತ್ವವನ್ನು ಕಿತ್ತೊಗೆಯಲು ಹೋರಾಡೋಣ

ಶೇಖ್ ಹಸೀನಾ ರಾಜೀನಾಮೆಯಿಂದಾಗಿ ಆವಾಮಿ ಲೀಗಿನ ಫ್ಯಾಸಿಸ್ಟ್ ಆಳ್ವಿಕೆ ಪತನಗೊಂಡಿದೆ. ಆದರೆ ಈ ಹಿಂದೆಯೂ ದೇಶದಲ್ಲಿ ದೊಡ್ಡ ಹೋರಾಟಗಳು ನಡೆದಿವೆ, ಸಮೂಹ ಬಂಡಾಯಗಳು, ವಿಮೋಚನಾ ಯುದ್ಧವೇ ನಡೆದಿದೆ, ಜನತೆ ಜೀವತ್ಯಾಗ ಮಾಡಿದ್ದಾರೆ ಎಂಬುದನ್ನು ಮರೆಯಬಾರದು. ಆದರೆ ಒಂದು ಪ್ರಜಾಸತ್ತಾತ್ಮಕ ಪ್ರಭುತ್ವವನ್ನು ರೂಪಿಸುವ ಕನಸು ಇನ್ನೂ ನನಸಾಗಿಲ್ಲ. ತಾರತಮ್ಯ ಹಾಗೂ ನಿರುದ್ಯೋಗ ಇತ್ಯಾದಿ ಸಮಸ್ಯೆಗಳನ್ನು ಹುಟ್ಟು ಹಾಕುವ ಆರ್ಥಿಕ ಸಾಮಾಜಿಕ ವ್ಯವಸ್ಥೆಯು ಈ ವಿದ್ಯಾರ್ಥಿಗಳ ಬಂಡಾಯದಿಂದ ಅಂತ್ಯವಾಗಿಲ್ಲ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯೇ ಫ್ಯಾಸಿಸ್ಟ್ ಆಳ್ವಿಕೆಯನ್ನು ಹುಟ್ಟು ಹಾಕುತ್ತದೆ. ಎಡಪ್ರಜಾಸತ್ತಾತ್ಮಕ ಶಕ್ತಿಗಳ ನಾಯಕತ್ವದಲ್ಲಿ ಜನಹೋರಾಟಗಳು ಇನ್ನೂ ಬಲಗೊಳ್ಳಬೇಕು. ರಾಜಕೀಯ ಪ್ರಜ್ಞೆಯುಳ್ಳ, ನೈತಿಕ ಬಲವುಳ್ಳ ಪ್ರಬಲ ಜನಹೋರಾಟ ಮಾತ್ರವೇ ಪ್ರಜಾತಾಂತ್ರಿಕ ಹಕ್ಕುಗಳನ್ನು ಗಳಿಸಲು ಮತ್ತು ಉಳಿಸಲು ಸಾಧ್ಯ.

### ಧಾರವಾಡ: ಎಐಡಿವೈಓ ಸಂಘಟಿತ ವಲಯ ಮಟ್ಟದ

### ಯುವಜನ ಸಂಕಲ್ಪ ಸಮಾವೇಶದ ಒಕ್ಕೊರಲ ಕರೆ!

# ಮಹಿಳೆಯರ ಘನತೆ ಮತ್ತು ಮಾನವ ಮೌಲ್ಯ ಉಳಿಸೋಣ!!

ಆಲ್ ಇಂಡಿಯಾ ಡೆಮೊಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ), ಧಾರವಾಡದಲ್ಲಿ 19 ಸೆಪ್ಟೆಂಬರ್ 2024ರಂದು 'ಮಹಿಳೆಯ ಘನತೆ ಮತ್ತು ಮಾನವ ಮೌಲ್ಯ ಉಳಿಸೋಣ' ಎಂಬ ವಿಷಯದ ಮೇಲೆ ವಲಯ ಮಟ್ಟದ ಯುವಜನರ ಸಂಕಲ್ಪ ಸಮಾವೇಶವನ್ನು ಸಂಘಟಿಸಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಕರ್ನಾಟಕದ ಮಾಜಿ ಲೋಕಾಯುಕ್ತರು ಹಾಗೂ ಸುಪ್ರೀಂ ಕೋರ್ಟ್‌ನ ನಿವೃತ್ತ ಜಸ್ಟೀಸ್ ಎನ್.ಸಂತೋಷ್ ಹೆಗ್ಡೆಯವರು ಮಾತನಾಡುತ್ತಾ, ಅತ್ಯಾಚಾರ, ಕೊಲೆಗೆ ಮಾನವ ಮೌಲ್ಯಗಳ ಕುಸಿತ ಕಾರಣವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ದೆಹಲಿಯಲ್ಲಿ ನಡೆದ ನಿರ್ಭಯಾ ಘಟನೆಯ ಸಂದರ್ಭದಲ್ಲಿ ಇಡೀ ದೇಶವೇ ಎಚ್ಚೆತ್ತುಕೊಂಡು ಪ್ರತಿಭಟನೆ ನಡೆಸಿತ್ತು. ಇಂದು ಸಹ ಅಂತಹ ಪ್ರಬಲ ಹೋರಾಟಗಳ ಅವಶ್ಯಕತೆಯಿದೆ. ಹಿಂದೆ ಅಪರಾಧ ಮಾಡಿ ಜೈಲು ಶಿಕ್ಷೆಗೆ ಗುರಿಯಾದವರನ್ನು ಸಮಾಜ ಬಹಿಷ್ಕರಿಸುತಿತ್ತು. ಆದರೆ ಇಂದು ಅವರನ್ನು ಸನ್ಮಾನಿಸುವ, ಪೂಜಿಸುವ ಮನಸ್ಥಿತಿಗೆ ಬಂದು ತಲುಪಿದ್ದೇವೆ. ನ್ಯಾಯಾಲಯದ ತೀರ್ಪಿನ ವಿಳಂಬತೆಯಿಂದಾಗಿ, ಅತ್ಯಾಚಾರ ಮಾಡಿದವರಿಗೆ ಶಿಕ್ಷೆಯ ಭಯವಿಲ್ಲದಂತಾಗಿದೆ. ರಾಜಕೀಯ–ಸಾಮಾಜಿಕ–ನ್ಯಾಯಾಂಗ ವ್ಯವಸ್ಥೆಗಳಲ್ಲಿ ನ್ಯಾಯ ದೊರಕುವ ಭರವಸೆಯೇ ಉಳಿದಿಲ್ಲ. ಹಾಗಾಗಿ ಹಿರಿಯರು ಕಟ್ಟಿ ಬೆಳೆಸಿದ ಮಾನವ ಮೌಲ್ಯಗಳನ್ನು ನಮ್ಮ ಯುವಕರು ಅಳವಡಿಸಿಕೊಂಡು, ಅಪರಾಧಗಳೇ ಇಲ್ಲದ ಸಮಾಜದ ನಿರ್ಮಾಣಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.




**ನಿವೃತ್ತ ಲೋಕಾಯುಕ್ತ ಜಸ್ಟಿಸ್ ಸಂತೋಷ್ ಹೆಗ್ಡೆಯವರು ಮಾತನಾಡುತ್ತಿರುವುದು. ವೇದಿಕೆಯಲ್ಲಿ, ಎಡದಿಂದ, ಡಾ. ಜಿಎಸ್. ಕುಮಾರ್, ಕಾ. ರಾಮಾಂಜನಪ್ಪ ಆಲ್ದಳ್ಳಿ, ಶ್ರೀ ನಡಹಳ್ಳಿ ವಸಂತ್, ಡಾ.ಸುಜ್ಞಾನಿದೇವಿ ಪಾಟೀಲ್**

ಖ್ಯಾತ ಮನೋಚಿಕಿತ್ಸಕರಾದ ವಸಂತ ನಡಹಳ್ಳಿಯವರು, 'ಯುವ ಮನಸ್ಸಿನ ತಲ್ಲಣಗಳು' ಎಂಬ ವಿಷಯದ ಕುರಿತು ಮಾತನಾಡುತ್ತಾ, ನಮ್ಮ ಯುವಜನರಿಗೆ ಬದುಕಿನ ಪಾಠಗಳನ್ನು ನೀಡದೆ, ಇಡೀ ವ್ಯವಸ್ಥೆಯೇ ಮುಂದೆ ನಿಂತು ದಾರಿ ತಪ್ಪಿಸುತ್ತಿದೆ, ಕಾರ್ಪೊರೇಟ್ ಸಂಸ್ಕೃತಿಯಿಂದ ಮೌಲ್ಯಗಳ ನಾಶವಾಗುತ್ತಿದೆ. 12 ವರ್ಷದವರೆಗೆ ಸಣ್ಣ ಮಕ್ಕಳ ಕೈಗೆ ಮೊಬೈಲ್ ಕೊಡಬಾರದು. ಆ ನಿಟ್ಟಿನಲ್ಲಿ ಮೊದಲು ತಂದೆ–ತಾಯಿ, ಅತಿಯಾದ ಮೊಬೈಲ್ ಬಳಕೆಯಿಂದ ಹೊರಬರಬೇಕು. ಸೋಷಲ್ ಮೀಡಿಯಾದ ವ್ಯಸನವು ಆತ್ಮಹತ್ಯೆಗೆ ಪ್ರಚೋದನೆ ನೀಡುತ್ತಿದೆ ಎಂದು ಸಂಶೋಧನೆಗಳು ಹೇಳುತ್ತಿವೆ. ಇವೆಲ್ಲವೂ ಗೊತ್ತಿದ್ದು ಎಲ್ಲ ಪಕ್ಷಗಳು, ಸರ್ಕಾರಗಳು ಇದರ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ. 100 ಕಾರ್ಪೊರೇಟ್ ಮನೆತನಗಳಿಂದ ಹಣ ಪಡೆದು ಅವರ ಹಿತಾಸಕ್ತಿ ಕಾಪಾಡಲು ರಾಜಕಾರಣಿಗಳು ಮೌನಕ್ಕೆ ಶರಣಾಗಿದ್ದಾರೆ ಎಂದರು. ಪ್ರತಿಯೊಬ್ಬರೂ ಪ್ರಶ್ನೆ ಮಾಡುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಮನೆಯಲ್ಲಾಗಲಿ, ಹೊರಗಡೆಯಾಗಲಿ ತಪ್ಪುಗಳು ಜರುಗಿದಾಗ ಅದಕ್ಕೆ ಸಣ್ಣದಾಗಿ ಪ್ರತಿರೋಧ ಒಡ್ಡಬೇಕು. ಆ ಮೂಲಕ ದೊಡ್ಡ ಅಪರಾಧ ಜರುಗಲು ಅವಕಾಶವಿರುವುದಿಲ್ಲ ಎಂದು ಕಿವಿಮಾತು ಹೇಳಿದರು. ದೌರ್ಜನ್ಯವನ್ನು ಎಸಗುತ್ತಾ ಮಹಿಳೆಯ ನೋವು, ಆಕ್ರಂದನದಲ್ಲಿ ಸಂತೋಷ ಅನುಭವಿಸುವುದು ನಿಜಕ್ಕೂ ಅದು ಮನುಷ್ಯನ ಸಹಜ ಗುಣ–ಸ್ವಭಾವವಲ್ಲ. ವಯಸ್ಸಿಗೆ ತಕ್ಕಂತೆ ಯುವಜನಾಂಗಕ್ಕೆ ವೈಜ್ಞಾನಿಕವಾದ ತಿಳುವಳಿಕೆಯನ್ನು ನೀಡುವುದು ಅವಶ್ಯಕವಾಗಿದೆ ಎಂದರು.

ಮನೋವೈದ್ಯರಾದ ಡಾ.ಸುಜ್ಞಾನಿದೇವಿ ಪಾಟೀಲ್‌ರವರು, 'ಮಕ್ಕಳ ಹಾಗೂ ಹದಿಹರೆಯದವರ ಲೈಂಗಿಕ ಅಪರಾಧಗಳು; ಕಾರಣಗಳು ಹಾಗೂ ಪರಿಹಾರಗಳು' ಎಂಬ ವಿಷಯದ ಕುರಿತು ಮಾತನಾಡುತ್ತಾ, ಇಂದು ವಿಶ್ವದಾದ್ಯಂತ ಸುಮಾರು 35%ರಷ್ಟು ಮಹಿಳೆಯರು ದೈಹಿಕ ಮತ್ತು ಲೈಂಗಿಕ ಹಿಂಸಾಚಾರವನ್ನು ಅನುಭವಿಸುತ್ತಿದ್ದಾರೆ. ಹದಿಹರೆಯದ ಹೆಣ್ಣುಮಕ್ಕಳು ಪರಿಚಯದವರಿಂದಲೇ ಹೆಚ್ಚಿನ ದೌರ್ಜನ್ಯಗಳಿಗೆ ತುತ್ತಾಗುತ್ತಿದ್ದಾರೆ. ಹಿಂಸಾಚಾರದಿಂದ ಬದುಕುಳಿದ ಬಹುಪಾಲು ಮಹಿಳೆಯರು ಕಳಂಕಕ್ಕೆ ಹೆದರಿ ಅದನ್ನು ಬಹಿರಂಗಪಡಿಸಲು ಹಿಂಜರಿಯುತ್ತಿದ್ದಾರೆ. ಇಂತಹ ಕೃತ್ಯಗಳಲ್ಲಿ ಬುಡಕಟ್ಟು ಜನಾಂಗದ, ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು, ತೃತೀಯಲಿಂಗಿಗಳು ಮತ್ತು ವಿಕಲಾಂಗ ಮಹಿಳೆಯರೇ ಹೆಚ್ಚು ಬಲಿಪಶುಗಳಾಗುತ್ತಿರುವುದು. ಹದಿಹರೆಯದ ವಯಸ್ಸಿನಲ್ಲಿ ದೈಹಿಕ ಬದಲಾವಣೆಯ ಜೊತೆಗೆ, ಮನಸ್ಸಿನ ಭಾವನೆಗಳೂ ಬದಲಾಗುತ್ತವೆ. ಇವು ಹದಿಹರೆಯದವರನ್ನು ಲೈಂಗಿಕ ಕೃತ್ಯಗಳೆಡೆಗೆ ಪ್ರಚೋದಿಸುತ್ತವೆ. ಆ ಹಂತದಲ್ಲಿ ಇವುಗಳನ್ನು ನಿಯಂತ್ರಿಸುವ ಮೆದುಳಿನ ನಿರ್ದಿಷ್ಟ ಭಾಗ ಬೆಳೆದಿರುವುದಿಲ್ಲ. ಆದ್ದರಿಂದ ಹದಿಹರೆಯದವರಿಗೆ ಇದರ ಬಗ್ಗೆ ಸರಿಯಾದ, ವೈಜ್ಞಾನಿಕ ಶಿಕ್ಷಣ ಅಗತ್ಯವಿದೆ. ಶಾಲೆಗಳಲ್ಲಿ ಸ್ವಯಂ–ರಕ್ಷಣಾ ತರಬೇತಿ, ಜೀವನ ಮೌಲ್ಯಗಳ ಶಿಕ್ಷಣ ಒದಗಿಸುವುದು ಹಾಗೂ ಲಿಂಗ ಸಮಾನತೆಯನ್ನು ಉತ್ತೇಜಿಸುವುದು ಇಂದಿನ ಅವಶ್ಯಕತೆಯಾಗಿದೆ ಎಂದರು.

ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷರಾದ ಡಾ.ಜಿ.ಎಸ್.ಕುಮಾರ್ ಮಾತನಾಡಿ, ಹುಬ್ಬಳ್ಳಿಯ ನೇಹ, ಅಂಜಲಿ, ಕೊಲ್ಕತಾದ ವೈದ್ಯೆಯ ಮೇಲಿನ ಘಟನೆಗಳು ಸೇರಿದಂತೆ ಹಲವಾರು ಗುಂಪು ಅತ್ಯಾಚಾರ–ಹತ್ಯೆಯ ಘಟನೆಗಳು ಸಮಾಜದಲ್ಲಿ ಆಘಾತ ಹಾಗೂ ಆಕ್ರೋಶವನ್ನುಂಟು ಮಾಡಿವೆ. ಕೊಳೆತುಹೋದ ಬಂಡವಾಳಶಾಹಿ ವ್ಯವಸ್ಥೆಯು, ಸಮೂಹ ಮಾಧ್ಯಮಗಳಲ್ಲಿ ಅಶ್ಲೀಲತೆ, ಪೋರ್ನೋಗ್ರಫಿಗಳ ಪ್ರಚಾರಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ನೀಡುತ್ತಾ ಯುವ ಜನಾಂಗದಲ್ಲಿ ಮೂಲ ಪ್ರವೃತ್ತಿಯನ್ನು ಪ್ರಚೋದಿಸುತ್ತದೆ, ಅವರನ್ನು ಲೈಂಗಿಕತೆಯಲ್ಲಿ ಮುಳುಗುವಂತೆ ಮಾಡುತ್ತದೆ; ಜೊತೆಗೆ, ಮದ್ಯಪಾನ, ಮಾದಕವಸ್ತು ದುಶ್ಚಟಗಳನ್ನು ಪ್ರಚೋದಿಸುತ್ತಾ ಅವರಲ್ಲಿನ ವಿವೇಚನಾ ಶಕ್ತಿಯ ಹರಣ ಮಾಡುತ್ತದೆ. ಇಂತಹ ಕುಸಂಸ್ಕೃತಿಗೆ ಬಲಿಯಾಗುವ ಯುವ ಜನರೇ ಮುಖ್ಯವಾಗಿ ಮಹಿಳೆಯರ ಮೇಲಿನ ಅಪರಾಧಗಳಲ್ಲಿ ತೊಡಗುವುದು. ಹೀಗೆ, ದೇಶದಲ್ಲಿನ ಘೋರ ನಿರುದ್ಯೋಗ ಸಮಸ್ಯೆ, ಬದುಕಿನ ಅಭದ್ರತೆಗೆ ನೈಜ ಕಾರಣವಾದ ಈ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವ ಬದಲಿಗೆ ಅವರು, ಪಾತಕಲೋಕಕ್ಕೆ ಪ್ರವೇಶಿಸಿ ಬಿಡುತ್ತಾರೆ, ಅಲ್ಲಿಂದ ಹೊರಬರಲಾಗುವುದಿಲ್ಲ. ಹಾಗಾಗಿ, ಇಂತಹ ಪರಿಸ್ಥಿತಿಯಿಂದ ಯುವಕರನ್ನು ರಕ್ಷಿಸಲು, ಅವರಲ್ಲಿ ಮಾನಸಿಕ ಸ್ಥೈರ್ಯ ಹಾಗೂ ವೈಚಾರಿಕತೆಯನ್ನು ಬೆಳೆಸಲು ಇಂತಹ ಸಮಾವೇಶಗಳನ್ನು ಸಂಘಟಿಸಬೇಕಾಗಿದೆ ಎಂದರು.




**ಕಿಕ್ಕಿರಿದ ಸಭಾಂಗಣ**

ಹಿಂದೆ ದೆಹಲಿಯ ನಿರ್ಭಯಾ ಘಟನೆಯ ವಿರುದ್ಧದ ಹೋರಾಟದಿಂದ ರಚಿತವಾದ ಜಸ್ಟೀಸ್ ವರ್ಮಾ ಸಮಿತಿಯು ಅತ್ಯಾಚಾರ ಘಟನೆಗಳ ವಿರುದ್ಧ ತುರ್ತು ಕ್ರಮಕೈಗೊಳ್ಳಲು ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳನ್ನು ನಿರ್ಮಿಸಲು ಶಿಫಾರಸ್ಸು ಮಾಡಿತು. ಆದರೆ ಇಂದಿನವರೆಗೂ ಅಧಿಕಾರ ನಡೆಸಿದ ಯಾವುದೇ ಸರ್ಕಾರಗಳು ವರ್ಮಾ ಸಮಿತಿಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಜಾರಿ ಮಾಡಿಲ್ಲ. ಪರಿಣಾಮವಾಗಿ ಇಂದು ಪ್ರತಿನಿತ್ಯ ಅಂತಹ ಘಟನೆಗಳು ನಡೆಯುತ್ತಿವೆ. ಇವುಗಳನ್ನು ತಡೆಯಲು ಯುವಕರು ವೈಯಕ್ತಿಕ ಹಾಗೂ ಸಾಮಾಜಿಕ ಮಟ್ಟದಲ್ಲಿ ಪ್ರತಿಭಟಿಸಬೇಕಾದ ಅವಶ್ಯಕತೆಯಿದೆ. ಮದ್ಯಪಾನ ಮತ್ತು ಮಾದಕ ವಸ್ತು ದುಶ್ಚಟ ಹಾಗೂ ಅಶ್ಲೀಲತೆ ವಿರುದ್ಧ ಧ್ವನಿ ಎತ್ತಬೇಕೆಂದು ಅಭಿಪ್ರಾಯಪಟ್ಟರು.

ಧಾರವಾಡದ ಜನಜಾಗೃತಿ ಅಭಿಯಾನದ ಸಲಹೆಗಾರರಾದ ಕಾ. ರಾಮಾಂಜನಪ್ಪ ಆಲ್ದಳ್ಳಿಯವರು ಸಮಾರೋಪ ಭಾಷಣ ಮಾಡುತ್ತಾ, ಹಿಂದೆ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ಹಿರಿಯರು ತಮ್ಮ ಜೀವನದಲ್ಲಿ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಿದ್ದರು. ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್‌ರ ಜೀವನದಲ್ಲಿಯೂ ಪ್ರೀತಿ, ಮದುವೆಯ ವಿಷಯಬಂದಾಗ, ವೈಯಕ್ತಿಕ ಆಸೆ–ಆಕಾಂಕ್ಷೆಗಳಿಗೆ ತಮ್ಮನ್ನು ಸೀಮಿತಗೊಳಿಸದೆ ದೇಶದ ವಿಮೋಚನೆಯನ್ನೇ ಜೀವನದ ಗುರಿಯಾಗಿ ಸ್ವೀಕರಿಸಿದರು. ಅದೇರೀತಿ ನೇತಾಜಿ ಸುಭಾಷ್‌ಚಂದ್ರ ಬೋಸ್‌ರ ಜೀವನದಲ್ಲಿಯೂ ತಮ್ಮನ್ನು ವಿವಾಹವಾಗಲು ಬಯಸಿದ ಮಹಿಳೆಗೆ, 'ಭಾರತ ನನ್ನ ಮೊದಲ ಹಾಗೂ ಏಕೈಕ ಪ್ರೀತಿ' ಎಂದು ಹೇಳಿದ್ದರು. ಮುಂದುವರಿಕೆಯಾಗಿ ಮಹಾನ್ ತತ್ವಜ್ಞಾನಿ ಶಿವದಾಸ್ ಘೋಷ್‌ರವರು, "ಯಾವುದೇ ಪರಿಸ್ಥಿತಿಯಲ್ಲೂ ಲೈಂಗಿಕತೆ ಜೀವನವನ್ನು ಮೀರಿ ಹೋಗಲಾಗದು, ಅದು ಜೀವನದ ಒಂದು ಭಾಗವಷ್ಟೇ. ಇಡೀ ಜೀವನ ಲೈಂಗಿಕತೆಯನ್ನು ಸುತ್ತುವರೆದು ಹರಿಯುವುದಿಲ್ಲ. ಬದಲಿಗೆ ಜೀವನದ ಹರಿವೇ ಲೈಂಗಿಕತೆಯನ್ನು ರೂಪಿಸುವುದು." ಎಂದಿದ್ದಾರೆ. ಇನ್ನೊಂದೆಡೆ ಶರತ್‌ಚಂದ್ರ ಚಟರ್ಜಿ, ಖಾಜಿ ನಜ್ರುಲ್ ಇಸ್ಲಾಂರಂತಹ ಮಹಾನ್ ಮಾನವತಾವಾದಿಗಳ, ನವೋದಯದ ಸಾಹಿತಿಗಳ ಜೀವನ ಘಟನೆಗಳು ನಮಗೆ ಮೌಲ್ಯಗಳನ್ನು ಕಲಿಸುತ್ತವೆ. ಆದರೆ ನಾವಿಂದು ಬೇರಿಲ್ಲದವರಾಗಿದ್ದೇವೆ. ಕೊಲೆಗಾರ–ಅತ್ಯಾಚಾರಿ ನಟರನ್ನು, ರಾಜಕಾರಣಿಗಳನ್ನು ಆದರ್ಶವೆಂದು ಬಿಂಬಿಸಲಾಗುತ್ತಿದೆ. ಇಂತಹ ನೈತಿಕ ನಿರ್ವಾತ ಪರಿಸರದಲ್ಲಿ ನಮ್ಮ ದೇಶದ ಮಹಾನ್ ಕ್ರಾಂತಿಕಾರಿಗಳ, ನವೋದಯದ ಹರಿಕಾರರ ಉದಾತ್ತ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಾ, ಅನ್ಯಾಯದ ವಿರುದ್ಧ ಹೋರಾಡುತ್ತಾ, ಸಮಾಜದಲ್ಲಿ ಉನ್ನತ ನೀತಿ–ಸಂಸ್ಕೃತಿಯನ್ನು ಬೆಳೆಸಲು ನಮ್ಮ ಯುವಜನರು ಮುಂದೆಬರಬೇಕಾಗಿದೆ. ಹೊಸ ನೀತಿ, ಹೊಸ ಮೌಲ್ಯ, ಹೊಸ ಆದರ್ಶವನ್ನು ಸೃಷ್ಟಿಸಬೇಕಾಗಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಐಡಿವೈಓ ರಾಜ್ಯ ಅಧ್ಯಕ್ಷರಾದ ಕಾ. ಶರಣಪ್ಪ ಉದ್ಬಾಳ್ ವಹಿಸಿದ್ದರು, ರಾಜ್ಯ ಕಾರ್ಯದರ್ಶಿಗಳಾದ ಕಾ. ಸಿದ್ದಲಿಂಗ ಬಾಗೇವಾಡಿ ಕಾರ್ಯಕ್ರಮದ ಆಶಯ ಮಾತುಗಳನ್ನಾಡಿದರು. ವೇದಿಕೆಯಲ್ಲಿ ಎಐಡಿವೈಓ ರಾಜ್ಯ ಉಪಾಧ್ಯಕ್ಷರಾದ ಕಾ. ಚನ್ನಬಸವ ಜಾನೇಕಲ್, ಜಿಲ್ಲಾಧ್ಯಕ್ಷರಾದ ಕಾ. ಭವಾನಿಶಂಕರ್ ಎಸ್. ಗೌಡ, ಜಿಲ್ಲಾ ಕಾರ್ಯದರ್ಶಿ ಕಾ. ರಣಜಿತ್ ದೂಪದ್ ಇದ್ದರು. ಭಾಗವಹಿಸಿದ್ದ ಧಾರವಾಡ, ಬೆಳಗಾವಿ, ಹಾವೇರಿ, ಗದಗ ಜಿಲ್ಲೆಯ ನೂರಾರು ಯುವಜನರು ಹಾಗೂ ಎಐಡಿವೈಓ ನಾಯಕರು, ಕಾರ್ಯಕರ್ತರು, ಮಹಿಳೆಯರ ಘನತೆ ಹಾಗೂ ಮಾನವ ಮೌಲ್ಯ ಉಳಿಸುವ ಅಭಿಯಾನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಪ್ರತಿಜ್ಞಾವಿಧಿಯನ್ನು ತೆಗೆದುಕೊಂಡರು.

1ನೇ ಪುಟದಿಂದ

# ಆಶಾ ಕಾರ್ಯಕರ್ತೆಯರ ರಾಜ್ಯ ಮಟ್ಟದ ಪ್ರಥಮ ಸಮ್ಮೇಳನ

ಸರ್ಕಾರಗಳು ಆಶಾ ಕಾರ್ಯಕರ್ತೆಯರ ನ್ಯಾಯಯುತ ಬೇಡಿಕೆ–ಸಮಸ್ಯೆಗಳಿಗೆ ಸ್ಪಂದಿಸಿಲ್ಲ. ಇಂದು ನಾವು ಎರಡು ಭಾರತವನ್ನು ನೋಡುತ್ತಿದ್ದೇವೆ. 90% ದುಡಿಯುವ ಬಡಜನತೆಯ ಭಾರತ ಒಂದೆಡೆ, 1% ಬಂಡವಾಳಶಾಹಿಗಳ ಭಾರತ ಮತ್ತೊಂದೆಡೆ. ದೇಶದ 77% ಆಸ್ತಿ ಕೆಲವೇ ಬಂಡವಾಳಶಾಹಿಗಳ ಒಡೆತನದಲ್ಲಿದ್ದರೆ, ಕೇವಲ 22% ಆಸ್ತಿ ಮಾತ್ರ 90% ಜನತೆಯ ಬಳಿಯಿದೆ. ಬಂಡವಾಳಶಾಹಿಗಳ ಕೃಪಾಕಟಾಕ್ಷದಿಂದ ಅಧಿಕಾರಕ್ಕೆ ಬಂದ ಎಲ್ಲಾ ಸರ್ಕಾರಗಳು ಅವರ ಲಾಭವನ್ನು ಹೆಚ್ಚಿಸುವ ನೀತಿಗಳನ್ನು ತರುತ್ತಿವೆ. ಅದಕ್ಕಾಗಿ ದುಡಿಯುವ ಜನತೆಯ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಎಲ್ಲಾ ಸರ್ಕಾರಗಳು ಬಂಡವಾಳಶಾಹಿಪರವಾಗಿವೆ. ಈ ಹಿನ್ನೆಲೆಯಲ್ಲಿ, ಆಶಾ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ಕಟ್ಟುತ್ತಲೇ, ಸಮಾಜದಲ್ಲಿರುವ ಅಸಮಾನತೆಯ ವಿರುದ್ಧ ರಾಜಿರಹಿತ ಹೋರಾಟಕ್ಕೂ ಸಜ್ಜಾಗಬೇಕು" ಎಂದು ಕರೆ ನೀಡಿದರು.

### ಪ್ರತಿನಿಧಿ ಅಧಿವೇಶನ: ಹೋರಾಟಕ್ಕೆ ವೈಚಾರಿಕತೆ, ಸ್ಫೂರ್ತಿ, ಬಲ ತುಂಬಿದ ಅಧಿವೇಶನ

ಕಲ್ಬುರ್ಗಿ ನಗರದ ಡಾ.ಎಸ್.ಎಂ ಪಂಡಿತ್ ರಂಗಮಂದಿರದಲ್ಲಿ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಅತಿಥಿಗಳಾಗಿ ಎಐಎಂಎಸ್ಎಸ್ ರಾಜ್ಯ ಕಾರ್ಯದರ್ಶಿ ಕಾ. ಶೋಭಾ ಎಸ್. ರವರು ಮಾತನಾಡಿ, "ಮಹಿಳೆಯರಿಗೆ ಸ್ವಾತಂತ್ರ್ಯ ಯಾರೂ ತಂದು ಕೊಡುವುದಿಲ್ಲ; ಮಹಿಳೆಯರೇ ತಾವೇ ಹೋರಾಟದ ಮೂಲಕ ಗಳಿಸಿಕೊಳ್ಳಬೇಕು, ಎಂಬ ಎಐಯುಟಿಯುಸಿ ಸಂಸ್ಥಾಪಕರಾದ ಕಾ. ಶಿವದಾಸ್ ಘೋಷ್‌ರವರ ಸೂಕ್ತಿ ಸ್ಮರಿಸುತ್ತಾ, ಆಶಾ ಕಾರ್ಯಕರ್ತೆಯರು ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ಸಜ್ಜುಗೊಳ್ಳಲು ಈ ಸಮ್ಮೇಳನ ಸ್ಫೂರ್ತಿ ತುಂಬಲಿ" ಎಂದು ಹಾರೈಸಿದರು.

ಕಲ್ಬುರ್ಗಿ ಕರ್ನಾಟಕ ಕೇಂದ್ರೀಯ ವಿ.ವಿ.ಯ ಪ್ರಾಧ್ಯಾಪಕರಾದ ಪ್ರೊ. ಶಿವಗಂಗಮ್ಮ ರುಮ್ಮಾ ಅವರು ಅತಿಥಿಯಾಗಿ ಆಗಮಿಸಿ ಮಾತನಾಡುತ್ತಾ, "ಮೌನ ಮುರಿದು ಮಾತಾಡುವುದು ಈ ಘಳಿಗೆಯ ಅವಶ್ಯಕತೆಯಾಗಿದೆ. ನಮ್ಮ ಹಕ್ಕುಗಳಿಗಾಗಿ ಮಾತನಾಡುವುದು ಶ್ರೇಷ್ಠ ಕಾರ್ಯ. ಅದಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ನೆರೆದಿರುವುದು ಅಭಿನಂದನಾರ್ಹ" ಎಂದರು.

ಅಧಿವೇಶನದಲ್ಲಿ ಆಶಾ ಸೇವೆ ಖಾಯಂಮಾತಿಗಾಗಿ ಆಗ್ರಹವನ್ನು ಒಳಗೊಂಡ ಮುಖ್ಯ ಗೊತ್ತುವಳಿ, ದುಡಿಯುವ ಮಹಿಳೆಯರ ಮೇಲಿನ ಅತ್ಯಾಚಾರ ದೌರ್ಜನ್ಯ ಖಂಡಿಸಿ ಗೊತ್ತುವಳಿ ಸೇರಿದಂತೆ ಹಲವು ಗೊತ್ತುವಳಿಗಳನ್ನು ಹಾಗೂ ಸಂಘಟನಾತ್ಮಕ ವರದಿಯನ್ನು ಮಂಡಿಸಿ ಚರ್ಚಿಸಿದ ನಂತರ ಅಂಗೀಕರಿಸಲಾಯಿತು. ಅನುಮೋದಿತ ಬೇಡಿಕೆಗಳ ಈಡೇರಿಕೆಗಾಗಿ ಬಲಿಷ್ಠ ಹೋರಾಟ ಹರಿಬಿಡಲು ನಿರ್ಧರಿಸಿ, ಅದನ್ನು ಕಾರ್ಯಸಾಧ್ಯವಾಗುವಂತೆ ಮಾಡಲು ನೂತನ ರಾಜ್ಯ ಸಮಿತಿ ಚುನಾಯಿಸಲಾಯಿತು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೂತನ ರಾಜ್ಯ ಸಮಿತಿ: ರಾಜ್ಯ ಅಧ್ಯಕ್ಷರಾಗಿ ಕಾ.ಕೆ.ಸೋಮಶೇಖರ್ ಯಾದಗಿರಿ, 25 ಜನ ರಾಜ್ಯ ಉಪಾಧ್ಯಕ್ಷರು, ರಾಜ್ಯ ಕಾರ್ಯದರ್ಶಿ ಕಾ.ಡಿ.ನಾಗಲಕ್ಷ್ಮಿ, 42 ಜನ ಜಂಟಿ ಕಾರ್ಯದರ್ಶಿಗಳು, ಖಜಾಂಚಿಯಾಗಿ ಕಾ.ಸಂಧ್ಯಾ ಪಿ.ಎಸ್., ಹಾಗೂ 240 ಜನ ಕಾರ್ಯಕಾರಿ ಸಮಿತಿ ಸದಸ್ಯರುಳ್ಳ ರಾಜ್ಯ ಸಮಿತಿ ಸಮ್ಮೇಳನದಲ್ಲಿ ಆಯ್ಕೆಯಾಯಿತು.

ನೂತನ ರಾಜ್ಯ ಸಮಿತಿಯನ್ನು ಅಭಿನಂದಿಸಿ ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್. ಕೆ ಸೋಮಶೇಖರ್ ಅವರು ಮಾತನಾಡಿ, "ಕಳೆದ 15 ವರ್ಷ ಹೋರಾಟದ ಪಯಣದಲ್ಲಿ ಪಿಎಚ್‌ಸಿ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಗಟ್ಟಿಯಾಗಿ ನಿಂತಿದ್ದೀರಿ, ಸಂಘಟನೆಗೆ ಬಲ ತುಂಬಿದ್ದೀರಿ. ಬಂಡವಾಳಶಾಹಿ ಪರ ಸರ್ಕಾರಗಳ ನೀತಿಗಳಿಂದ, ಮಾಲೀಕವರ್ಗದ ಕುಟುಂಬಗಳು ಜಗತ್ತಿನ ಅತೀ ಶ್ರೀಮಂತರ ಪಟ್ಟಿಯಲ್ಲಿ ಕಾಣಿಸಿಕೊಂಡರೆ, ಮತ್ತೊಂದೆಡೆ ಭೀಕರ ಬಡತನ, ಹಸಿವು, ನಿರುದ್ಯೋಗಗಳಿಂದ ಜರ್ಝರಿತವಾದ ದುಡಿಯುವ ಕಾರ್ಮಿಕ ವರ್ಗ ದಾರಿದ್ರ್ಯಕ್ಕೆ ತಳ್ಳಲ್ಪಡುತ್ತಿದೆ. ಈ ತಾರತಮ್ಯ ಆಧಾರಿತ ವ್ಯವಸ್ಥೆ ಕೊನೆಯೊಂದಿಗೆ ಮಾತ್ರ ಕಾರ್ಮಿಕ ವರ್ಗದ ಶೋಷಣೆ ಮುಕ್ತವಾಗುತ್ತದೆ ಎಂದು ಕಾರ್ಮಿಕ ವರ್ಗದ ಶಿಕ್ಷಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು ನಮಗೆಲ್ಲರಿಗೂ ಕಲಿಸಿದ್ದಾರೆ. ಹಾಗಾಗಿ ಕಾ.ಘೋಷ್ ಅವರ ಚಿಂತನೆಯ ಬಲದೊಂದಿಗೆ ಉನ್ನತ ನೀತಿ–ನೈತಿಕತೆ ಆಧಾರದ ಮೇಲೆ ಬಲಿಷ್ಠ ಹೋರಾಟಕ್ಕೆ ಸಜ್ಜಾಗೋಣ" ಎಂದು ಕರೆ ನೀಡಿದರು.




ಮಾತನಾಡುತ್ತಿರುವವರು, ಕಾ. ಕೆ. ಉಮಾ. ವೇದಿಕೆಯಲ್ಲಿ, ಎಡದಿಂದ: ಕಾ. ಸೋಮಶೇಖರ್ ಯಾದಗಿರಿ, ಕಾ. ಎಸ್ ಸೋಮಶೇಖರ್, ಕಾ. ಡಿ.ಎನ್. ನಾಗಲಕ್ಷ್ಮಿ, ಡಾ. ಸುಧಾ ಕಾಮತ್, ಕಾ. ಶೋಭಾ ಎಸ್, ಕಾ. ಟಿ.ಸಿ.ರಮಾ, ಕಾ. ಎಂ.ಉಮಾದೇವಿ, ಕಾ. ಶಾಂತಾ. ಹಿಂಬದಿಯಲ್ಲಿ ಇತರ ಆಶಾ ರಾಜ್ಯ ನಾಯಕರು



ಕಾ. ಡಿ.ಎನ್. ನಾಗಲಕ್ಷ್ಮಿ
ರಾಜ್ಯ ಕಾರ್ಯದರ್ಶಿ, ಆಶಾ ಸಂಘಟನೆ




ಕಾ. ಶೋಭಾ ಎಸ್.
ರಾಜ್ಯ ಕಾರ್ಯದರ್ಶಿ, ಎಐಎಂಎಸ್‌ಎಸ್

ಅತಿಥಿಗಳಾಗಿ ಆಗಮಿಸಿದ್ದ ಮೆಡಿಕಲ್ ಸರ್ವಿಸ್ ಸೆಂಟರ್‌ನ ರಾಜ್ಯಾಧ್ಯಕ್ಷರಾದ ಡಾ.ಸುಧಾ ಕಾಮತ್ ಮಾತನಾಡುತ್ತಾ, "ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣ ನೀತಿಗಳನ್ನು ಜಾರಿಗೊಳಿಸಿ, ಆರೋಗ್ಯ ಕ್ಷೇತ್ರವನ್ನು ಯಾವುದೇ ಅಡೆ ತಡೆಯಿಲ್ಲದೆ ಖಾಸಗೀಕರಣಗೊಳಿಸಲಾಗುತ್ತಿದೆ. ಇದರ ಪರಿಣಾಮ ಆರೋಗ್ಯ ಸೌಲಭ್ಯವು ಸಂಪೂರ್ಣವಾಗಿ ವ್ಯಾಪಾರೀಕರಣಗೊಂಡಿದ್ದು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ತೀವ್ರವಾದ ಕುಸಿತ ಕಂಡಿದೆ. ಆರೋಗ್ಯ ಕ್ಷೇತ್ರಕ್ಕೆ ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಕೇವಲ 2.5% ಹಾಗೂ ರಾಜ್ಯ ಸರ್ಕಾರ ಕೇವಲ 4% ಅನುದಾನ ನೀಡುತ್ತಿವೆ. ಇದನ್ನು ಹೆಚ್ಚಳಗೊಳಿಸಿ ದುಡಿಯುವ ಎಲ್ಲರಿಗೂ ಆರ್ಥಿಕ–ಸಾಮಾಜಿಕ ಭದ್ರತೆ ಜೊತೆಗೆ ಜೀವದ ಭದ್ರತೆ ಒದಗಿಸಲು ಸರ್ಕಾರಗಳು ಕ್ರಮ ಕೈಗೊಳ್ಳಬೇಕು" ಎಂದು ಆಗ್ರಹಿಸಿದರು.

ನಂತರ ಭಾಷಣಕಾರರಾಗಿ ಎಐಯುಟಿಯುಸಿ ರಾಜ್ಯ ಅಧ್ಯಕ್ಷ ಕಾಮ್ರೇಡ್ ಕೆ.ಸೋಮಶೇಖರ್, ಸಂಘದ ರಾಜ್ಯಾಧ್ಯಕ್ಷ ಕಾ. ಕೆ.ಸೋಮಶೇಖರ್ ಯಾದಗಿರಿ, ಸಂಘದ ರಾಜ್ಯ ಉಪಾಧ್ಯಕ್ಷೆ ಕಾ. ರಮಾ ಟಿ.ಸಿ. ಮಾತನಾಡಿದರು. ಸಂಘದ ರಾಜ್ಯ ಕಾರ್ಯದರ್ಶಿಗಳಾದ ಕಾ. ಡಿ. ನಾಗಲಕ್ಷ್ಮಿ ಅವರು ಅಧ್ಯಕ್ಷತೆ ವಹಿಸಿಕೊಂಡು ಮಾತನಾಡುತ್ತಾ, ರಾಜ್ಯದ 31 ಜಿಲ್ಲೆಗಳಲ್ಲಿ ವಿವಿಧ ತಾಲೂಕು ಜಿಲ್ಲಾ ಮಟ್ಟದ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಭಾಗಿಯಾದ ಆಶಾ ಕಾರ್ಯಕರ್ತೆರಿಗೆ ಅಭಿನಂದಿಸಿದರು. ವೇದಿಕೆಯ ಮೇಲೆ ಎಐಎಂಎಸ್‌ಎಸ್ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕಾ. ಶೋಭಾ ಎಸ್. ಹಾಗೂ ಸಂಘದ ರಾಜ್ಯ ಸಮಿತಿಯ ಇತರೆ ಸದಸ್ಯರು ಉಪಸ್ಥಿತರಿದ್ದರು.

### ನೂತನ ಸಮಿತಿಯಿಂದ ಕಾರ್ಯಕ್ರಮ ಘೋಷಣೆ:

ಅಂಗೀಕರಿಸಿದ ಎಲ್ಲಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಲ್ಬುರ್ಗಿಗೆ ಆಗಮಿಸುತ್ತಿರುವ ಮುಖ್ಯಮಂತ್ರಿಗಳಿಗೆ ಬೇಡಿಕೆಗಳ ಮನವಿ ಪತ್ರ ಸಲ್ಲಿಸುವುದು; ಬೇಡಿಕೆ ಈಡೇರದಿದ್ದರೆ ನವೆಂಬರ್ 2ನೇ ವಾರದಲ್ಲಿ ವಿಧಾನಸೌಧ ಮುತ್ತಿಗೆ ಚಳುವಳಿಯನ್ನು ಹಮ್ಮಿಕೊಳ್ಳುವುದಾಗಿ ಘೋಷಿಸಲಾಯಿತು.

### ಸಮಾರೋಪ ಕಾರ್ಯಕ್ರಮ

ಸಮಾರೋಪ ಕಾರ್ಯಕ್ರಮದಲ್ಲಿ ಚುನಾಯಿತ ನೂತನ ರಾಜ್ಯ ಸಮಿತಿಯನ್ನು ... 

ಪ್ರತಿನಿಧಿ ಅಧಿವೇಶನದ ಪ್ರಾರಂಭಕ್ಕೂ ಮುನ್ನ ಸಂಘದ ರಾಜ್ಯ ಅಧ್ಯಕ್ಷರಾದ ಕಾ.ಕೆ.ಸೋಮಶೇಖರ ಯಾದಗಿರಿ ಅವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಹುತಾತ್ಮ ಸ್ತಂಭಕ್ಕೆ ಗೌರವ ಸಲ್ಲಿಸಲಾಯಿತು. ಕೊನೆಯದಾಗಿ, ಆಶಾ ಹೋರಾಟ ಚಿರಾಯುವಾಗಲಿ ಎಂಬ ಘೋಷಣೆಗಳೊಂದಿಗೆ ಸಮ್ಮೇಳನ ಪರಿಸಮಾಪ್ತಿಯಾಯಿತು.



ಪ್ರತಿನಿಧಿ ಅಧಿವೇಶನದ ಕಾರ್ಯಕಲಾಪಗಳಲ್ಲಿ ಮಗ್ನರಾಗಿರುವ ಪ್ರತಿನಿಧಿಗಳು

# “ಬಿಕ್ಕಟ್ಟಿನ ಘಟ್ಟದಲ್ಲಿ ಪಶ್ಚಿಮ ಘಟ್ಟ”

## ಪರಿಸರ ಸಮತೋಲನ ಕಾಪಾಡಲು ಸರ್ಕಾರ ಜನರೊಂದಿಗೆ ಪ್ರಜಾತಾಂತ್ರಿಕವಾಗಿ ವ್ಯವಹರಿಸಬೇಕು

**- ನಾಗೇಶ್ ಹೆಗಡೆ**


ಆಗಸ್ಟ್ 31 ರಂದು ‘ಬಿಕ್ಕಟ್ಟಿನ ಘಟ್ಟದಲ್ಲಿ ಪಶ್ಚಿಮ ಘಟ್ಟ’ ಎಂಬ ವಿಷಯದ ಕುರಿತು ಆನ್‌ಲೈನ್ ಚರ್ಚೆ ನಡೆಯಿತು. ಈ ಕಾರ್ಯಕ್ರಮವನ್ನು ನಮ್ಮ ಪಕ್ಷದ ಮುಂದಳವಾದ, ಯುವಜನ ಸಂಘಟನೆ, ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್(ಎಐಡಿವೈಓ) ರಾಜ್ಯ ಸಮಿತಿ ಆಯೋಜಿಸಿತ್ತು. ನಾಡಿನ ಹೆಸರಾಂತ ಪರಿಸರವಾದಿಗಳು ಮತ್ತು ವಿಜ್ಞಾನ ಅಂಕಣಕಾರರಾದ ಶ್ರೀ. ನಾಗೇಶ್ ಹೆಗಡೆ ಅವರು ಬಹಳ ಅದ್ಭುತವಾಗಿ ಚರ್ಚೆಯನ್ನು ನಡೆಸಿಕೊಟ್ಟರು.

‘ಪಶ್ಚಿಮ ಘಟ್ಟ ನಿನ್ನೆ–ಇಂದು–ನಾಳೆ’ ಎಂಬ ಅದರ ಭೂತ–ವರ್ತಮಾನ–ಭವಿಷ್ಯದ ಕುರಿತು ಆತಂಕ ವ್ಯಕ್ತಪಡಿಸುತ್ತಾ ಅವರು ಬಹುಮುಖ್ಯವಾದ ಅಂಶಗಳ ಕಡೆ ಗಮನ ಸೆಳೆದರು: “ಇಂದು ಅಭಿವೃದ್ಧಿಯ ಹೆಸರಿನಲ್ಲಿ ಪಶ್ಚಿಮ ಘಟ್ಟದ ಮೇಲೆ ಆಗುತ್ತಿರುವ ಆಕ್ರಮಣಗಳಿಂದ ಕೇವಲ ಮತ ನೀಡುವ ಮತ್ತು ಮಾತನಾಡುವ ಜೀವಿಗಳಿಗಲ್ಲದೇ, ಮತ ನೀಡದ, ಮಾತನ್ನೂ ಆಡದ ಅಸಂಖ್ಯಾತ ಜೀವ ಸಂಕುಲಕ್ಕೆ ದೊಡ್ಡ ಆಪತ್ತು ಬಂದೊದಗಿದೆ. ಈಗ ಪಶ್ಚಿಮ ಘಟ್ಟವನ್ನು ರಕ್ಷಿಸಲು ಪ್ರತಿಯೊಬ್ಬರೂ ಉತ್ತಮ ಸಂವಹನಕಾರರಾಗಬೇಕು. ನಾಡಿನ ಜನತೆಗೆ ಪಶ್ಚಿಮ ಘಟ್ಟವನ್ನು ರಕ್ಷಿಸಲು ಮುಂದಾಗುವಂತೆ ಪ್ರೇರೇಪಿಸಬೇಕು.”

“ಪಶ್ಚಿಮ ಘಟ್ಟದ ಸಂರಕ್ಷಣೆಯ ಬಗ್ಗೆ ನಾವು ಬಹಳ ಹಿಂದಿನಿಂದಲೂ ಮಾತನಾಡುತ್ತಿದ್ದೇವೆ, ಆದರೆ ಈಗ ಭೂಮಿಯೇ ಮಾತನಾಡಲು ಪ್ರಾರಂಭಿಸಿದೆ. ಇತ್ತೀಚೆಗೆ ವಯನಾಡ್, ಶಿರೂರು, ಶಿರಾಡಿಘಾಟ್‌ನಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದ ಸಂಭವಿಸಿದ ಅನಾಹುತಗಳು ಭೂಮಿಯೇ ತನ್ನ ಒಡಲ ಆಕ್ರೋಶವನ್ನು ಹೊರಹಾಕುವಂತಿದೆ. ಸಾವಿರಾರು ಜನರು ಸಾವು ನೋವುಗಳಿಗೆ ಒಳಗಾಗಿದ್ದಾರೆ, ಅಪಾರ ಆಸ್ತಿ–ಪಾಸ್ತಿ ನಾಶವಾಗಿದೆ.”

“ಈ ಭಾಗ ಬಹಳ ಸೂಕ್ಷ್ಮವಾಗಿದೆ. ಅದನ್ನು ಬಹಳ ಸೂಕ್ಷ್ಮವಾಗಿ ನಾವು ಕಾಪಾಡಿಕೊಳ್ಳಬೇಕಾಗಿದೆ. ಪಶ್ಚಿಮ ಘಟ್ಟವು ಕೇವಲ ಕರ್ನಾಟಕ ಮಾತ್ರವಲ್ಲದೆ, ಗುಜರಾತ್, ಮಹಾರಾಷ್ಟ್ರ, ಒಡಿಶಾ, ತೆಲಂಗಾಣ, ಆಂಧ್ರ ಪ್ರದೇಶ, ಗೋವಾ, ಕೇರಳ, ತಮಿಳುನಾಡು ರಾಜ್ಯಗಳ ಪ್ರಾಕೃತಿಕ ಸಮತೋಲನವನ್ನು ಕಾಪಾಡುವಲ್ಲಿ ಬಹು ಮಹತ್ತರವಾದ ಪಾತ್ರ ನಿರ್ವಹಿಸುತ್ತಿದೆ. ಅಂತಹ ಪಶ್ಚಿಮ ಘಟ್ಟದ ಸೃಷ್ಟಿಗೆ 150 ಕೋಟಿ ವರ್ಷಗಳ ಇತಿಹಾಸವಿದೆ. 150 ಕೋಟಿ ವರ್ಷಗಳ ಹಿಂದೆ ಭಾರತ ಮತ್ತು ವಿಶ್ವದ ನಕಾಶೆ ಬಹಳ ಭಿನ್ನವಾಗಿತ್ತು ಮತ್ತು ಈಗಿರುವ ಸ್ಥಿತಿಯಲ್ಲಿ ಇರಲಿಲ್ಲ. ಇಂದಿನ ಭಾರತದ ಭೂಪ್ರದೇಶವು ಅಂದು ಆಫ್ರಿಕಾದ ಖಂಡದೊಂದಿಗೆ ಸೇರಿಕೊಂಡಿತ್ತು. ನಂತರ ಕಾಲಘಟ್ಟದಲ್ಲಿ ಅಂದರೆ ಸುಮಾರು 15 ಕೋಟಿ ವರ್ಷಗಳ ಹಿಂದೆ ಅದು ಆಫ್ರಿಕಾ ಖಂಡದಿಂದ ಬೇರ್ಪಟ್ಟು, ಈಗಿರುವ ರೀತಿಯಲ್ಲಿ ರೂಪಗೊಂಡಿತು” ಎಂದು ಅವರು ಐತಿಹಾಸಿಕವಾಗಿ ವಿವರಿಸಿದರು. “ಪರಿಸರಕ್ಕೆ ನಾವು ಯಾವುದೇ ರಾಜಕೀಯ ಗಡಿಗಳ ಗೆರೆಯನ್ನು ಎಳೆಯಲು ಆಗುವುದಿಲ್ಲ. ಇದು ಪಾಕಿಸ್ತಾನ, ಇದು ಭಾರತ, ಇದು ಬಾಂಗ್ಲಾದೇಶ ಎಂದು ನೋಡದೆ, ಒಟ್ಟಾರೆ ಜಾಗತಿಕ ಪರಿಸರದ ಮೇಲೆ ಯಾವ ರೀತಿಯ ಪರಿಣಾಮಗಳು ಉಂಟಾಗುತ್ತಿದೆ ಎಂದು ನೋಡಬೇಕು.” ಎಂದವರು ಹೇಳಿದರು.

“ಭಾರತದ ಒಟ್ಟು ಭೂ ವಿಸ್ತೀರ್ಣದಲ್ಲಿ ಕೇವಲ ಶೇ. 6ರಷ್ಟು ಇರುವ ಪಶ್ಚಿಮ ಘಟ್ಟದ ಭೂಭಾಗದಲ್ಲಿಯೇ ಶೇ.30ರಷ್ಟು ಜೀವವೈವಿಧ್ಯತೆ, ಅಂದರೆ ಪ್ರಾಣಿ ಮತ್ತು ಸಸ್ಯ ಸಂಕುಲ ಇದೆ. 140 ಸಸ್ತನಿಗಳು, 260 ಸರಿಸೃಪಗಳು, 510 ಪಕ್ಷಿಗಳು, 180 ದ್ವಿಚರಿ ಪ್ರಭೇದಗಳು ಇಲ್ಲಿವೆ. ವಿವಿಧ ಖನಿಜಗಳು, ಅಪರೂಪದ ಸ್ಫಟಿಕಗಳು, ಕಣ್ಮನ ತಣಿಸುವ ಸಸ್ಯಲೋಕ, ಪ್ರಾಣಿ ಲೋಕ, ಹಣ್ಣು ಹಂಪಲು, ಔಷಧಿ ಸಸ್ಯಗಳು, ಜೇನು, ಚಿರತೆ, ಬ್ಲಾಕ್ ಪ್ಯಾಂಥರ್ಸ್, ಜಿಂಕೆ, ಅಳಿಲುಗಳಂತಹ ವಿವಿಧ ಜಾತಿಯ ಕಾಡು ಪ್ರಾಣಿಗಳು, ಕಾಳಿಂಗ ಸರ್ಪಗಳು – ವಿವಿಧ ಜಾತಿಯ ಹಾವುಗಳು ಎಲ್ಲ ಸೇರಿ ಒಟ್ಟಾರೆಯಾಗಿ



ಶ್ರೀ ನಾಗೇಶ ಹೆಗಡೆ

450 ಬಗೆಯ ಪ್ರಾಣಿ –ಸಸ್ಯ ಲೋಕವೇ ಪಶ್ಚಿಮ ಘಟ್ಟದಲ್ಲಿ ಹಾಸುಹೊಕ್ಕಾಗಿದೆ. ಒಂದು ವಿಶಿಷ್ಟ ಮರದ ಬೇರುಗಳು ಕನ್ನಡದ ‘೧’ (ಒಂದು) ಅಂಕಿಯ ರೀತಿಯಲ್ಲಿ ಭೂಮಿಯ ಒಳಗಡೆಯಿಂದ ಬಂದು ಮತ್ತೆ ಒಳಗೆ ಸೇರಿಕೊಂಡಿದ್ದು, ಆರು ನೂರು ಕೋಟಿ ವರ್ಷಗಳಿಂದ ಅದೇ ರೀತಿಯಲ್ಲಿ ಉಳಿದುಕೊಂಡು ಸಾಕಷ್ಟು ತೇವಾಂಶವನ್ನು ತನ್ನಲ್ಲಿ ಹಿಡಿದಿಟ್ಟುಕೊಂಡಿವೆ! ದಕ್ಷಿಣ ಭಾರತದಲ್ಲಿಯೇ ಇರುವ ಏಕೈಕ ಜಲಪಾತ್ರೆ ಪಶ್ಚಿಮ ಘಟ್ಟವಾಗಿದೆ. ವಿವಿಧ 58ನದಿಗಳು, ಹಳ್ಳ ಕೊಳ್ಳಗಳು ಇಲ್ಲಿ ಹುಟ್ಟುತ್ತವೆ. ನಮಗೆ ಬೇಕಾದ ನೀರು ಮತ್ತು ಆಮ್ಲಜನಕವನ್ನು ಅದು ಒದಗಿಸುತ್ತಿದೆ. ಜಗತ್ತಿನ ಅತ್ಯಂತ ಮಹತ್ವದ ಬಯೋ ಡೈವರ್ಸಿಟಿ ಎಂದು ಹೇಳಲಾಗುವ ಶೋಲೆ ಕಾಡುಗಳು ಇಲ್ಲಿವೆ.” ಎಂದು ನಾಗೇಶ್ ಹೆಗಡೆ ಅವರು ವಿವರಿಸಿದರು.

“ಆದರೆ ಇಂತಹ ಅತ್ಯಮೂಲ್ಯವಾದ ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಜನಪರ ಕಾಳಜಿ ಇಲ್ಲದ, ಜನರಿಗೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವ ಕಡೆ ಆದ್ಯತೆ ಇಲ್ಲದ, ಕೇವಲ ಕಾರ್ಪೋರೇಟ್ ಮನೆತನಗಳಿಗೆ, ಕಾಂಟ್ರ್ಯಾಕ್ಟ್ ಕುಳಗಳಿಗೆ ನೆರವಾಗುವ ಕಾರಿಡಾರ್ ರಸ್ತೆಗಳು, ರೆಸಾರ್ಟುಗಳು, ಅಣೆಕಟ್ಟು ಮತ್ತು ಮೇಲ್ಸೇತುವೆಗಳು, ಅಪಾಯಕಾರಿ ಕಾರ್ಖಾನೆಗಳ ನಿರ್ಮಾಣಕ್ಕಾಗಿ ಸಾವಿರಾರು ಎಕರೆ ಅರಣ್ಯ ನಾಶ ಮಾಡಿ ಪ್ರಾಕೃತಿಕ ಸಮತೋಲನವನ್ನು ಹಾಳು ಮಾಡಲಾಗಿದೆ. ಕಾಳಿ ನದಿಗೆ ಆರು ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಅಷ್ಟೇ ಅಲ್ಲದೆ, ಒಂದು ನ್ಯೂಕ್ಲಿಯರ್ ರಿಯಾಕ್ಟರ್ ಅನ್ನು ಅಲ್ಲಿ ಸ್ಥಾಪಿಸಲಾಗಿದೆ. ಇದರಿಂದಾಗಿ ವಿವಿಧ ಬಗೆಯ ಜಲಚರಗಳು ನಾಶವಾಗುತ್ತಿವೆ. ಕುಡಿಯುವ ನೀರು ಕಲುಷಿತವಾಗಿ ಪರಿಸರದಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಮಹದಾಯಿ, ಬೇಡ್ತಿ, ಶರಾವತಿ, ನೇತ್ರಾವತಿ, ಪೆರಿಯಾರ್ ಮುಂತಾದ ನದಿಗಳಲ್ಲೂ ಕೂಡ ಅಣೆಕಟ್ಟುಗಳನ್ನು ಕಟ್ಟಿ ಸಮಸ್ಯೆಗಳನ್ನು ತಂದೊಡ್ಡಲಾಗಿದೆ. ಈಗ ದೇಶದ ಏಕೈಕ ಪರಿಶುದ್ಧ ನದಿ ಎಂದರೆ ಅಘನಾಶಿನಿ ಮಾತ್ರ. ಅಲ್ಲಿ ಅಣೆಕಟ್ಟುಗಳನ್ನು ಕಟ್ಟಿಲ್ಲ. ನೀರಾವರಿ ಮಾಡಿಲ್ಲ. ದೊಡ್ಡ ನಗರಗಳು ಇಲ್ಲ. ರಾಸಾಯನಿಕಗಳನ್ನು ನದಿಗೆ ಬಿಟ್ಟಿಲ್ಲ. ಪರಿಸರದ ದೃಷ್ಟಿಯಿಂದ ದೊಡ್ಡ ಪ್ರಮಾಣದ ಮಾಲಿನ್ಯ ಉಂಟುಮಾಡಿಲ್ಲ. ಆದ್ದರಿಂದ ಇದೊಂದು ಮಾತ್ರ ಸಮೃದ್ಧ ನದಿಯಾಗಿ ಉಳಿದಿದೆ” ಎಂದು ಅವರು ವಿವರಿಸಿದರು.

“ಪಶ್ಚಿಮ ಘಟ್ಟದಲ್ಲಿ ಮ್ಯಾಂಗನೀಸ್, ಬಾಕ್ಸೈಟ್, ಕಬ್ಬಿಣದ ಅದಿರು ಹೇರಳವಾಗಿ ದೊರೆಯುತ್ತದೆ. ಅಲ್ಲದೇ ಮರಳು, ಗ್ರಾನೈಟ್ ಮುಂತಾದವುಗಳ ಮೇಲೆ ವ್ಯಾಪಾರಿಗಳ ಕಣ್ಣು ಬಿದ್ದಿದೆ. ಪಶ್ಚಿಮ ಘಟ್ಟದಲ್ಲಿ ದೊರೆಯುವ, ಲಾಭ ಮಾಡುವ ಯಥೇಚ್ಛ ಸಂಪನ್ಮೂಲದಿಂದ ಕಾಂಟ್ರ್ಯಾಕ್ಟರ್‌ಗಳು, ಮರಮುಟ್ಟುಗಳ ವ್ಯಾಪಾರಿಗಳು, ಸಾರಿಗೆ ವ್ಯಾಪಾರಿಗಳು, ಗಣಿಕೋರರು, ಮಿನಿ ಹೈಡಲ್ ಮಾಫಿಯಾ, ರೆಸಾರ್ಟ್ ಮಾಫಿಯಾ, ಒತ್ತುವರಿದಾರರು, ಇವರೆಲ್ಲರ ಜೊತೆಗೆ ರಾಜಕಾರಣಿಗಳು ಸಹ ಅತ್ಯಂತ ಸಂತೋಷದಿಂದಿದ್ದಾರೆ. ಪಶ್ಚಿಮ ಘಟ್ಟದಿಂದ ಎಲ್ಲವನ್ನು ಪಡೆದು, ಆದರೆ ಅದಕ್ಕೆ ವ್ಯತಿರಿಕ್ತವಾಗಿ ಪ್ಲಾಸ್ಟಿಕ್ ಬಾಟಲ್‌ಗಳನ್ನು ಎಸೆಯಲಾಗುತ್ತಿದೆ. ಗಣಿಗಳನ್ನು ಸ್ಫೋಟಗೊಳಿಸಲಾಗುತ್ತಿದೆ. ರಾಸಾಯನಿಕ ವಿಷವುಣಿಸಲಾಗುತ್ತಿದೆ. ಬೃಹತ್ ಹೆದ್ದಾರಿಗಳು, ನೀರು ಸರಬರಾಜು ಮಾಡಲು ಬೃಹತ್ ಗಾತ್ರದ ಪೈಪ್ ಲೈನ್ ಹಾಕುವುದು, ವಿದ್ಯುತ್ ಸರಬರಾಜು ಮಾಡಲು ಬೃಹತ್ ವಿದ್ಯುತ್ ಲೈನ್‌ಗಳನ್ನು ನಿರ್ಮಿಸುವುದರಿಂದ ಅರಣ್ಯವೇ ಇಬ್ಭಾಗವಾಗುತ್ತಿದೆ. ಇದರಿಂದ ಹೇಳಲಾರದಷ್ಟು ಅನಾಹುತ ಪರಿಸರದ ಮೇಲಾಗುತ್ತಿದೆ. ಎಲ್ಲರೂ ಭಕ್ಷಕರಾದರೆ ರಕ್ಷಣೆ ಮಾಡುವವರು ಯಾರು?” ಎಂದು ಪ್ರಶ್ನಿಸಿದರು.

“ನೈಸರ್ಗಿಕ ಆವಾಸ ಸ್ಥಾನ ನಾಶವಾಗುತ್ತಿದೆ. ಅಂದರೆ ಆದಿವಾಸಿಗಳ ಬದುಕು ಸಂಕಷ್ಟಕ್ಕೆ ಈಡಾಗಿದೆ. 2000 ವರ್ಷಗಳಿಂದ ವಿವಿಧ ಬಗೆಯ ಸಸ್ಯ ಪ್ರಭೇದಗಳನ್ನು ರಕ್ಷಣೆ ಮಾಡಿಕೊಳ್ಳುತ್ತ ಬಂದ ರೈತರನ್ನು ಎತ್ತಂಗಡಿ ಮಾಡಲಾಗುತ್ತಿದೆ. ಗಿಡ ಮೂಲಿಕೆಗಳ ನಾಶವಾಗಿದೆ. ಯುಪಿಟೋರಿಯಂ ಸಸ್ಯ, ಲಂಟಾನಾ, ಪಾರ್ಥೆನಿಯಂನಂತಹ ಸಸ್ಯಗಳು ಬೆಳೆಯುತ್ತಿವೆ. ನದಿ ಬತ್ತಿದಾಗ ಅದು ಹಸಿರು ನದಿ ತರ ಕಾಣುತ್ತದೆ. ಬೇಸಿಗೆಯಲ್ಲಿ ಲಂಟಾನಕ್ಕೆ ಬೆಂಕಿ ಬಿದ್ದು ಮತ್ತೊಂದು ಅನಾಹುತ ಜರುಗುತ್ತಿದೆ. ಜನರ ಪ್ರವಾಸದ ಹೆಸರಿನಲ್ಲಿ ಪಶ್ಚಿಮ ಘಟ್ಟ ತೊಂದರೆಗೆ ಒಳಗಾಗುತ್ತಿದೆ. ಸೂಕ್ಷ್ಮ ಜೀವಿಗಳು, ಗಿಡ ಮೂಲಿಕೆಗಳು ನಾಶವಾಗಿ ಮನುಷ್ಯನಿಗೆ ಮಾರಕವಾದ ಜೀವಿಗಳು ಹುಟ್ಟುತ್ತಿವೆ. ಬಾವಲಿಗಳಿಂದ ಮಾರಕ ರೋಗಗಳು, ಮಂಗನ ಖಾಯಿಲೆಗಳು ಹುಟ್ಟಿಕೊಳ್ಳುತ್ತಿವೆ” ಎಂದವರು ಆತಂಕಪಟ್ಟರು.

“2011ರಲ್ಲಿ ಪಶ್ಚಿಮ ಘಟ್ಟಗಳ ರಕ್ಷಣೆಗಾಗಿ ರಚನೆಯಾದ ಮಾಧವ ಗಾಡ್ಗೀಳ್ ವರದಿಯನ್ನು ಮೂಲೆಗುಂಪು ಮಾಡಿ ಉದ್ಯಮಪತಿಗಳಿಗೆ ಅನುಕೂಲವಾಗುವ ವರದಿಯನ್ನು ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ತುದಿಗಾಲಿನಲ್ಲಿ ನಿಂತಿವೆ. ಗಾಡ್ಗೀಳ್ ಅವರು ಪಶ್ಚಿಮಘಟ್ಟ ಪ್ರದೇಶವನ್ನು ಮೂರು ಭಾಗವಾಗಿ ವಿಂಗಡಣೆ ಮಾಡಿ, ಅತೀ ಸೂಕ್ಷ್ಮ, ಸೂಕ್ಷ್ಮ ಹಾಗೂ ಸೂಕ್ಷ್ಮವಲ್ಲದ ಪ್ರದೇಶ ಎಂದು ಪಟ್ಟಿ ಮಾಡಿದ್ದಾರೆ. ಶೇ. 80 ಪ್ರದೇಶದಲ್ಲಿ (ಇದು ಅತೀ ಸೂಕ್ಷ್ಮ, ಸೂಕ್ಷ್ಮ ಪ್ರದೇಶದ ಕೆಳಗೆ ಬರುತ್ತದೆ) ಅಭಿವೃದ್ಧಿ ಹೆಸರಿನಲ್ಲಿ ಯಾವುದೇ ಗಣಿಗಾರಿಕೆ, ಕಾರ್ಖಾನೆಗಳು, ಕಟ್ಟಡಗಳು ಇತ್ಯಾದಿಗಳನ್ನು ಮಾಡಬಾರದು ಎಂದು ಶಿಫಾರಸ್ಸು ಮಾಡಿದ್ದರು. ಇನ್ನುಳಿದ ಶೇ.20ರಷ್ಟು ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳು, ಜನರು, ಪಂಚಾಯತ್ ಮಟ್ಟದಲ್ಲಿ ಅಭಿಪ್ರಾಯ ಸಂಗ್ರಹ ಮಾಡಿ ಅವರ ಅಭಿಪ್ರಾಯದಂತೆ ಮುಂದುವರೆಯಬೇಕು ಎಂದಿದ್ದರು. ಆದರೆ ಕಸ್ತೂರಿ ರಂಗನ್ ಸಮಿತಿಯ ವರದಿಯು ಇದಕ್ಕೆ ವಿರುದ್ಧವಾಗಿ ಜನರ ಅಭಿಪ್ರಾಯಕ್ಕೆ ಯಾವುದೇ ಮನ್ನಣೆ ನೀಡಿಲ್ಲ. ಗಾಡ್ಗೀಳ್ ವರದಿ ಮೂರು ಭಾಗ ಮಾಡಿದ್ದರೆ, ಕಸ್ತೂರಿ ರಂಗನ್ ವರದಿ ಕೇವಲ ಎರಡು ಭಾಗ ಮಾಡಿದ್ದು, ಶೇ.50ಕ್ಕೂ ಹೆಚ್ಚು ಪ್ರದೇಶದಲ್ಲಿ ಏನಾದರೂ ಮಾಡಬಹುದು ಎಂದು ಹೇಳುತ್ತದೆ. ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ಅತಿ ಹೆಚ್ಚು ಅಧಿಕಾರ ನೀಡಿದೆ. ಕಸ್ತೂರಿ ರಂಗನ್ ಸಮಿತಿಯ ವರದಿಯನ್ನು ಜಾರಿಗೆ ತರಲು ಸರ್ಕಾರ ಮುಂದಾಗಿದೆ. ಆದ್ದರಿಂದ ರಾಜ್ಯದ ಜನತೆ, ಜನಪರ ಸಂಘಟನೆಗಳು ಇನ್ನಾದರೂ ಪರಿಸರ ರಕ್ಷಣೆಗೆ ಮುಂದಾಗದಿದ್ದರೆ ನಮ್ಮ ಮುಂದಿನ ಪೀಳಿಗೆಗೆ ನಾವು ಭಾರಿ ಅಪಾಯವನ್ನು ತರಲಿದ್ದೇವೆ.” ಎಂದು ನಾಗೇಶ್ ಹೆಗಡೆ ಬಹಳ ನೋವನ್ನು ವ್ಯಕ್ತ ಪಡಿಸಿದರು.

“ನಾವೇ ಏಕೆ ಸಂರಕ್ಷಣೆಗೆ ಮುಂದಾಗಬೇಕು? ಏಕೆಂದರೆ, ಈ ಹವಾಮಾನ ವೈಪರೀತ್ಯದ ಬಿಸಿಯನ್ನು ಕಾಣುತ್ತಿರುವ ಮೊದಲ ಪೀಳಿಗೆ ನಾವಾಗಿದ್ದೇವೆ. ಈ ಕುರಿತು ಏನಾದರೂ ಮಾಡಲು ಸಾಧ್ಯವಿರುವ ಏಕೈಕ ಪೀಳಿಗೆಯವರೂ ನಾವೇ ಆಗಿದ್ದೇವೆ. ಈಗ ನಾವು ಎಚ್ಚರಗೊಳ್ಳದಿದ್ದರೆ ಮುಂದಿನ ಅಪಾಯಗಳನ್ನು ಊಹಿಸಲು ಅಸಾಧ್ಯವಾಗಿದೆ. ಆದ್ದರಿಂದ ಪ್ರಜ್ಞಾವಂತ, ಪರಿಸರ ಕಾಳಜಿಯುಳ್ಳ ಪ್ರತಿಯೊಬ್ಬರು ಒಬ್ಬ ಉತ್ತಮ, ಪರಿಣಾಮಕಾರಿ ಸಂವಹನಕಾರರಾಗಿ ನಾಡಿನ ಜನತೆಗೆ ಪಶ್ಚಿಮ ಘಟ್ಟಗಳ ರಕ್ಷಣೆಯ ಮಹತ್ವವನ್ನು ತಿಳಿಸಿ, ಕಾರ್ಯೋನ್ಮುಖರಾಗುವಂತೆ ಮಾಡಬೇಕು.” ಎಂದು ಕರೆ ನೀಡಿದರು.

ಎಐಡಿವೈಓ ರಾಜ್ಯ ಕಾರ್ಯದರ್ಶಿ ಕಾ. ಸಿದ್ದಲಿಂಗ ಬಾಗೇವಾಡಿ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಸ್ತವಿಕವಾಗಿ ಮಾತನಾಡಿದರು: “ಅತಿ ಹೆಚ್ಚು ಮಳೆ, ಭೂಕುಸಿತ ಅಥವಾ ಬಿರುಬೇಸಿಗೆ ಇದಕ್ಕೆಲ್ಲ ಏನು ಕಾರಣ ಎನ್ನುವುದು ಪ್ರತಿಯೊಬ್ಬರೂ ತಿಳಿಯಬೇಕು. ಇತ್ತೀಚೆಗೆ ವಯನಾಡ್ ಮತ್ತು ಶಿರೂರಿಲ್ಲಿ ನಡೆದ ಭೂಕುಸಿತದಿಂದ ಆದ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಲು ಈ ಚರ್ಚೆ ಹಮ್ಮಿಕೊಳ್ಳಲಾಗಿದೆ.” ಎಂದ ಬಾಗೇವಾಡಿ ಅವರು, “ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಸಾವಿರಾರು ವರ್ಷಗಳಿಂದ ಕಾಡುಗಳಲ್ಲಿ ಬದುಕುವ ಆದಿವಾಸಿಗಳನ್ನು ಎತ್ತಂಗಡಿ ಮಾಡಲು ಸರ್ಕಾರಗಳು ನಿರಂತರ ಪ್ರಯತ್ನ ನಡೆಸಿವೆ. ಪರಿಸರಕ್ಕೆ ಯಾವುದೇ ತೊಂದರೆ ಮಾಡದೆ ಬದುಕುತ್ತಿರುವ ಅವರ ಹಕ್ಕುಗಳನ್ನು ರಕ್ಷಿಸಬೇಕಾಗಿದೆ. ಈ ಹವಾಮಾನ ಬದಲಾವಣೆಗೆ ಕಾರಣವಾಗುವ ಅಂಶಗಳನ್ನು ತಿಳಿದುಕೊಂಡು ಪರಿಸರ ರಕ್ಷಣೆಗೆ ತೊಡಗಬೇಕಿದೆ” ಎಂದರು.

ಪ್ರಶ್ನೋತ್ತರಗಳ ಮೂಲಕ ಸಂವಾದ ನಡೆಯಿತು. ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಎಲ್ಲರೂ ಕಾರ್ಯಪ್ರವೃತ್ತರಾಗುವ ಸಂಕಲ್ಪದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಪದಕಗಳಾಚೆ: ನಿಜವಾದ ಕ್ರೀಡಾಪಟುವಿನ ರಾಜಿಯಿಲ್ಲದ ಹೋರಾಟದ ಸ್ಫೂರ್ತಿ

ದೇಶದ ಪ್ರಖ್ಯಾತ ಕುಸ್ತಿಪಟು ವಿನೇಶ್ ಫೋಗಟ್ ಅವರು ತಾವು ಬರೀ ಕುಸ್ತಿ ಅಂಗಳದಲ್ಲಿ ತಮ್ಮ ಎದುರಾಳಿ ವಿರುದ್ಧ ಹೋರಾಟ ಮಾಡುವುದಿಲ್ಲ. ಅದರಾಚೆಯೂ ಅನ್ಯಾಯದ ವಿರುದ್ಧ ಸಿಡಿದೇಳಲು ಸಿದ್ಧ ಎಂಬುದನ್ನು ತೋರಿಸುವ ಮೂಲಕ ನಿಜವಾದ ಚಾಂಪಿಯನ್ ಎನಿಸಿಕೊಂಡಿದ್ದಾರೆ.

ಈಚೆಗೆ ಒಲಿಂಪಿಕ್ಸ್ ಮುಕ್ತಾಯವಾದ ಬಳಿಕ ಪ್ಯಾರಿಸ್‌ನಿಂದ ಹಿಂದಿರುಗಿದ ವಿನೇಶ್ ಅವರನ್ನು ಜನಸಾಮಾನ್ಯರು ಅತ್ಯಂತ ಆದರದಿಂದ, ಅದ್ದೂರಿಯಾಗಿ ಗೌರವಿಸಿದ್ದು, ಅಲ್ಲಿ ಕುಸ್ತಿ ಪಂದ್ಯದ ಫೈನಲ್ಸ್‌ನಲ್ಲಿ ಕುತಂತ್ರದಿಂದ ಮಾಡಲಾದ ಅವರ ಅನರ್ಹತೆಯ ತೀರ್ಮಾನವನ್ನು ಬದಿಗೆ ಸರಿಸುವಂತೆ ಕಾಣಿಸಿದೆ. ವಿನೇಶ್ ಅವರ ಸ್ವಾಗತಕ್ಕೆ ಬಂದಿದ್ದ ಬೆಂಬಲಿಗರನ್ನು ಗಮನಿಸಿದರೆ ಅವರಿಗೆ ಯಾವ ಬಗೆಯ ಗೌರವ ಸಲ್ಲಬೇಕಿತ್ತೋ ಅದನ್ನು ವೀರೋಚಿತವಾಗಿ ನೀಡಿದಂತಾಗಿತ್ತು. ಆದರೆ, ಅವರ ಕಥೆ ಬರೀ ಅಥ್ಲೆಟಿಕ್ ಕೌಶಲಕ್ಕಷ್ಟೇ ಸೀಮಿತವಲ್ಲ, ಬದಲಾಗಿ ಅವರನ್ನು ಹಾಗೂ ಅವರಂತೆ ಇರುವ ಇತರೆ ಕುಸ್ತಿಪಟುಗಳನ್ನು ಏಕಾಏಕಿ ಸುಮ್ಮನಿರಿಸಲು ಮುಂದಾದ ಯತ್ನಗಳ ವಿರುದ್ಧ ನಡೆದಂತಹ ಹೋರಾಟವೇ ಆಗಿದೆ.

ವಿನೇಶ್ ಫೋಗಟ್ ಅವರು 2023ರ ಜನವರಿಯಲ್ಲಿ ನವದೆಹಲಿಯ ರಸ್ತೆಗಳಲ್ಲಿ ತಮ್ಮ ಸಹ ಆಟಗಾರ ಒಲಿಂಪಿಯನ್‌ಗಳಾದ ಸಾಕ್ಷಿ ಮಲಿಕ್ ಹಾಗೂ ಬಜರಂಗ್ ಪುನಿಯಾರನ್ನು ಸೇರಿಸಿಕೊಂಡು ತಮ್ಮ ಮೇಲೆ ನಡೆದ ದೌರ್ಜನ್ಯ, ಅನ್ಯಾಯಗಳ ವಿರುದ್ಧ ಸಮರಶೀಲ ಹೋರಾಟವನ್ನು ನಡೆಸುವ ಮೂಲಕ ಆಡಳಿತಗಾರರಿಗೆ ತಕ್ಕ ಉತ್ತರವನ್ನು ನೀಡಿದ್ದರು. ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರೆಲ್ಲ ದೇಶದ ಮಹಾನ್ ಪರಂಪರೆಯನ್ನು ಎತ್ತಿ ಹಿಡಿದವರೇ ಆಗಿದ್ದರು. ಭಾರತ ಕುಸ್ತಿ ಫೆಡರೇಶನ್ ಮಾಜಿ ಅಧ್ಯಕ್ಷ, ಬಿಜೆಪಿಯಿಂದ ಐದು ಬಾರಿ ಸಂಸದರಾಗಿದ್ದ ಬ್ರಿಜ್ ಭೂಷನ್ ಶರಣ್ ಸಿಂಗ್‌ರ ಲೈಂಗಿಕ ದೌರ್ಜನ್ಯವನ್ನು ವಿರೋಧಿಸಿ ಈ ಪ್ರತಿಭಟನೆ ನಡೆದಿತ್ತು. 2012ರಿಂದ 2022ರ ಅವಧಿಯಲ್ಲಿ ಮಹಿಳಾ ಕುಸ್ತಿಪಟುಗಳು ಸೇರಿದಂತೆ ಒಟ್ಟಾರೆ ಕುಸ್ತಿಯಲ್ಲಿ ಸಾಧನೆ ಮಾಡಲು ಬಂದಿದ್ದ ಕ್ರೀಡಾಪಟುಗಳು ಬ್ರಿಜ್ ಭೂಷಣ್ ಶರಣ್ ಅವರನ್ನು ತಮ್ಮ ಗುರು ಎಂದೇ ಭಾವಿಸಿದ್ದರು. ಆದರೆ, ಆತ ಮಹಿಳಾ ಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು ಕುಸ್ತಿಪಟುಗಳಲ್ಲಿ ಆಕ್ರೋಶವನ್ನು ಮೂಡಿಸಿತ್ತು. ಅಂದಿನಿಂದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಕುಸ್ತಿ ಫೆಡರೇಶನ್ ಅಧ್ಯಕ್ಷ ಹುದ್ದೆಯಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿ ಪ್ರಮುಖ ಕುಸ್ತಿ ಪಟುಗಳು ಬೀದಿಗಿಳಿದು ಹೋರಾಟ ನಡೆಸಲಾರಂಭಿಸಿದ್ದರು.

ಬ್ರಿಜ್ ಭೂಷಣ್ ವಿರುದ್ಧ ತಳ್ಳಿಹಾಕಲಾಗದಂತಹ ಗಂಭೀರ ಆರೋಪಗಳು ಕೇಳಿ ಬಂದರೂ ಕೇಂದ್ರ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೇ ಸುಮ್ಮನೇ ಕುಳಿತಿತ್ತು. 2023ರ ಏಪ್ರಿಲ್‌ನಲ್ಲಿ ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದ ಕುಸ್ತಿಪಟುಗಳು ಬ್ರಿಜ್ ಭೂಷಣ್‌ರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು. ಸುಪ್ರೀಂಕೋರ್ಟ್ ಮಧ್ಯಪ್ರವೇಶಿಸಿದ ಬಳಿಕವಷ್ಟೇ ದೆಹಲಿ ಪೊಲೀಸರು ಅವರ ವಿರುದ್ಧ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದರು. ಅದರಲ್ಲಿ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರಿಂದ ಪೋಕ್ಸೊ ಕಾಯ್ದೆಯಡಿ ದಾಖಲಾದ ಎಫ್‌ಐಆರ್ ಸಹ ಸೇರಿತ್ತು.

ಆನಂತರ ಹೊರಬಿದ್ದ ಮಾಹಿತಿಗಳು ಅತ್ಯಂತ ಭೀಕರವಾಗಿದ್ದವು. ಮಹಿಳಾ ಕುಸ್ತಿಪಟುಗಳ ದೇಹದ ಅಂಗಾಂಗಳನ್ನು ಸ್ಪರ್ಶಿಸುವುದು, ಲೈಂಗಿಕ ಚಟುವಟಿಕೆಗೆ ಆಹ್ವಾನಿಸಿರುವುದು, ಬೆದರಿಕೆ ಹಾಕುವುದು ಮುಂತಾದ ಆರೋಪಗಳನ್ನು ಮಾಡಲಾಗಿತ್ತು. ಇಂತಹ ಕೃತ್ಯಗಳನ್ನು ಎಸಗಿದ್ದ ಬ್ರಿಜ್ ಭೂಷಣ್‌ರನ್ನು ಟೀಕಿಸುವಲ್ಲಿ ವಿನೇಶ್ ಫೋಗಟ್ ಸದಾ ಮುಂದಿದ್ದರು. ಆತ ಮಹಿಳಾ ಕುಸ್ತಿಪಟುಗಳ ಮೇಲೆ ನಡೆಸುತ್ತಿದ್ದ ಲೈಂಗಿಕ ದೌರ್ಜನ್ಯಗಳನ್ನು ಬಹಿರಂಗಪಡಿಸುವುದರ ಜೊತೆಗೆ 2021ರಲ್ಲಿ ಟೋಕಿಯೊದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ತಮಗೆ ಪದಕ ತಪ್ಪಿದ್ದಕ್ಕೆ ನೀಡಿದ ಮಾನಸಿಕ ಕಿರುಕುಳದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದರು. ಅವರಿಗೆ ಆತ ಕಿರುಕುಳ ನೀಡಿದ್ದಲ್ಲದೇ ಬೆದರಿಕೆ ಹಾಕಿದ್ದ, ಅವರ ಮನೋಬಲ ಕುಗ್ಗಿಸಲು ಯತ್ನಿಸಿದ್ದ. ಆದರೂ, ವಿನೇಶ್ ತಲೆಬಾಗಿರಲಿಲ್ಲ. ಈ ಕುಕೃತ್ಯವನ್ನು ಖಂಡಿಸಲು ಇದ್ದ ಏಕೈಕ ಸರಿದಾರಿಯೆಂದರೆ ಪ್ರತಿಭಟನೆಗೆ ಕರೆ ನೀಡುವುದು. ವಿನೇಶ್ ತಮಗಷ್ಟೇ ಅಲ್ಲದೇ, ಭಾರತದ ಇತರೆ ಮಹಿಳಾ ಅಥ್ಲೀಟ್‌ಗಳ ಮೇಲಾದ ದೌರ್ಜನ್ಯವನ್ನು ಖಂಡಿಸಲು ಹೋರಾಟದ ದಾರಿಯನ್ನು ಆಯ್ದುಕೊಂಡರು.

ಪ್ರತಿಭಟನೆ ತೀವ್ರತೆ ಪಡೆಯುತ್ತಿದ್ದಂತೆಯೇ ಅಧಿಕಾರ ಚುಕ್ಕಾಣಿ ಹಿಡಿದವರು ವಿಚಿತ್ರ ಮೌನಕ್ಕೆ ಜಾರಿದರು. ಅಥ್ಲೀಟ್‌ಗಳು, ಕ್ರೀಡಾಪಟುಗಳು ಮಾಡಿದ ಸಾಧನೆಗಳಿಗೆ ಅಭಿನಂದನೆ ಹೇಳುವ ಯಾವುದೇ ಸಣ್ಣ ಅವಕಾಶವನ್ನೂ ಕಳೆದುಕೊಳ್ಳದ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮದೇ ಪಕ್ಷದ ಸಂಸದನ ವಿರುದ್ಧ ತೀವ್ರ ಹೋರಾಟ ನಡೆದರೂ ಯಾವುದೇ ಪ್ರತಿಕ್ರಿಯೆ ನೀಡುವ ಗೋಜಿಗೆ ಹೋಗಲಿಲ್ಲ. ಪ್ರತಿಭಟನೆಯ ಹಿನ್ನೆಲೆಯಲ್ಲಿ ಆರೋಪಿ ಸಂಸದನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವ ಸರ್ಕಾರದ ನಡೆ ಇಡೀ ದೇಶಕ್ಕೆ ಸಂದೇಶವೊಂದನ್ನು ಸಾರಿತು. ಏನೆಂದರೆ, ಅಧಿಕಾರಸ್ಥರು ತಮ್ಮ ಮೇಲೆ ಎಸಗಿದ ದೌರ್ಜನ್ಯದ ವಿರುದ್ಧ, ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಮಹಿಳೆಯರ ಘನತೆಗೆ ಕುಂದು ತಂದುದರ ವಿರುದ್ಧ ಹಾಗೂ ಸ್ವಜನ ಪಕ್ಷಪಾತದ ವಿರುದ್ಧ ಗಟ್ಟಿ ಧ್ವನಿಯಲ್ಲಿ ಮಾತನಾಡಿದವರನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲಾಗುತ್ತಿದೆ ಎಂದು.

ಆದರೆ, ವಿನೇಶ್ ಫೋಗಟ್ ಅವರ ಕಥೆ ಬರೀ ಪ್ರತಿಭಟನೆಗೆ ಮಾತ್ರ ಅಂತ್ಯಗೊಳ್ಳಲಿಲ್ಲ. ನಿಜವಾಗಿಯೂ ದೌರ್ಜನ್ಯಕ್ಕೆ ಒಳಗಾದ ಕ್ರೀಡಾಪಟುಗಳು ಎದೆಗುಂದದೇ ಹೇಗೆ ಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂಬುದನ್ನು ತಿಳಿಸಲು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದರು. ನಿಗದಿತ ತೂಕಕ್ಕಿಂತ 100 ಗ್ರಾಂ ತೂಕ ಹೆಚ್ಚಿದೆ ಎಂಬ ವಿವಾದಾತ್ಮಕ ತೀರ್ಪಿಗೆ ಬಲಿಯಾಗಿ ವಿನೇಶ್ ಅವರು ಕೂದಲೆಳೆ ಅಂತರದಿಂದ ಪದಕದಿಂದ ವಂಚಿತರಾದರು. ಅವರ ಪ್ರದರ್ಶನ ಯಾವ ಶೂರರಿಗಿಂತಲೂ ಕಡಿಮೆ ಇರಲಿಲ್ಲ. ಒಲಿಂಪಿಕ್ಸ್ ಮುಗಿಸಿಕೊಂಡು ಭಾರತಕ್ಕೆ ಬಂದಾಗ ಅವರಿಗೆ ಕೇಂದ್ರ ಸರ್ಕಾರವೇ ನಾಚುವಂತೆ ಅದ್ದೂರಿ ಸ್ವಾಗತ ದೊರೆಯಿತು. ಈ ಸ್ವಾಗತ ಅವರಿಗೆ ದೊರೆತಿದ್ದು ಅಥ್ಲೆಟಿಕ್ಸ್‌ನ ಸಾಧನೆಗಲ್ಲ. ಬದಲಾಗಿ, ಅಧಿಕಾರಸ್ಥರ ವಿರುದ್ಧ ಅವರ ಎಣೆಇಲ್ಲದ ಹೋರಾಟಕ್ಕೆ.

ಫೋಗಟ್ ಅವರ ಈ ಪ್ರಯಾಣವು ಅಡೆತಡೆಗಳನ್ನು ಮೀರಿ ಬರುವ ಹಾಗೂ ಅಧಿಕಾರಸ್ಥರ ದೌರ್ಜನ್ಯಗಳನ್ನು ಸಹಿಸಿಕೊಳ್ಳದೇ ಹೋರಾಟಗಳನ್ನು ಮುಂದುವರೆಸುವವರಿಗೆ ಸ್ಫೂರ್ತಿಯಾಗಿದೆ. ಅವರು ಭಾರತ ಹಾಗೂ ಇಡೀ ವಿಶ್ವದ ಮಹಿಳಾ ಕ್ರೀಡಾಪಟುಗಳಿಗೆ ಮಾದರಿಯಾಗಿದ್ದಾರೆ. ಬರೀ ಪದಕಗಳನ್ನು ಗೆಲ್ಲುವವರಷ್ಟೇ ಚಾಂಪಿಯನ್ ಆಗುವುದಿಲ್ಲ, ಅನ್ಯಾಯವನ್ನು ವಿರೋಧಿಸಿ ಹೋರಾಟ ಮಾಡುವವರು ನಿಜವಾದ ಚಾಂಪಿಯನ್ ಎಂದು ವಿನೇಶ್ ಅವರು ತೋರಿಸಿಕೊಟ್ಟಿದ್ದಾರೆ. ಪ್ಯಾರಿಸ್‌ನಿಂದ ಹೊರಟು ಬಂದ ವಿನೇಶ್ ಅವರು ಬರೀ ಒಲಿಂಪಿಯನ್ ಆಗಿ ಅಷ್ಟೇ ತೋರಿಸಿಕೊಳ್ಳುವ ಬದಲು ಆಳ್ವಿಕರ ಎದುರು ನಡು ಬಗ್ಗಿಸದೇ ಹೋರಾಟವನ್ನು ಮುಂದುವರೆಸುವ ಮೂಲಕ ಒಂದು ಅಪೂರ್ವ ಪರಂಪರೆಯನ್ನು ಹಾಕಿಕೊಟ್ಟಿರುವುದನ್ನು ಯಾರೂ ಮರೆಯುವುದಿಲ್ಲ. ಬಹಳ ದಿಟ್ಟವಾಗಿ ಭ್ರಷ್ಟಾಚಾರ, ಕ್ರೀಡೆಯಲ್ಲಿ ಅನಗತ್ಯ ಹಸ್ತಕ್ಷೇಪ ಹಾಗೂ ಕ್ರೀಡಾ ಮನೋಭಾವಕ್ಕೆ ಧಕ್ಕೆ ತರುತ್ತಿರುವುದನ್ನು ವಿರೋಧಿಸಿ ವಿನೇಶ್ ಅವರು ನಡೆಸುತ್ತಿರುವ ಹೋರಾಟವನ್ನು ಅಭಿನಂದಿಸಲೇಬೇಕಾಗುತ್ತದೆ. ಅವರ ಈ ಸಾಹಸಗಾಥೆಯು ಹಲವು ತಲೆಮಾರುಗಳ ಕ್ರೀಡಾಪಟುಗಳಿಗೆ ಸ್ಫೂರ್ತಿಯಾಗಲಿದೆ. ಅತ್ಯಂತ ಪ್ರಬಲ ಗೆಲುವುಗಳು ಕ್ರೀಡಾಂಗಣದಾಚೆ ಲಭಿಸುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.




**ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಿರಿ! ಬಳ್ಳಾರಿ ಜೆಸಿಟಿಯು ಪ್ರತಿಭಟನೆ**

ಈ ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ವಿರೋಧಿ ಸಂಹಿತೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಜೆಸಿಟಿಯು(ಕಾರ್ಮಿಕ ಸಂಘಟನೆಗಳ ಒಕ್ಕೂಟ ಸಮಿತಿ) ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ಅದರ ಮೇರೆಗೆ 23.09.2024ರಂದು ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ, ನಮ್ಮ ಕಾರ್ಮಿಕ ಸಂಘಟನೆಯಾದ ಎಐಯುಟಿಯುಸಿ ಜೊತೆಗೆ ಸಿಐಟಿಯು, ಎಲ್.ಐ.ಸಿ. ಯೂನಿಯನ್, ಬಿಸಿಯೂಟ ಯೂನಿಯನ್ ಸಂಘಟನೆಗಳು ಜೊತೆಗೂಡಿದ್ದವು. ಎಐಯುಟಿಯುಸಿ ಜಿಲ್ಲಾಧ್ಯಕ್ಷರಾದ ಕಾ. ಎ.ದೇವದಾಸ್ ಪ್ರತಿಭಟನೆಯ ಅಧ್ಯಕ್ಷತೆ ವಹಿಸಿದ್ದರು.



**ಬಳ್ಳಾರಿ:** ಹರಗಿನಡೋಣಿಯ ಟಿಬಿಎ (ಟಿಫಿನ್ಸ್ ಬ್ಯಾರಿಟೆಸ್ ಅಸ್‌ಬೆಸ್ಟಾಸ್) ಗಣಿ ಕಾರ್ಮಿಕರಿಗಾಗಿರುವ ಸಂಕಷ್ಟಗಳನ್ನು ಪರಿಹರಿಸಬೇಕು ಹಾಗೂ ಅವರಿಗೆ ದೊರೆಯಬೇಕಾದ ಕಾನೂನಾತ್ಮಕ ಸೌಲಭ್ಯಗಳನ್ನು ನೀಡಬೇಕು ಮತ್ತು ಹೊಸ ಗಣಿ ಕಂಪೆನಿಯಲ್ಲಿ ಕಾರ್ಮಿಕರನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿ ಗಣಿ ಹಾಗೂ ಭೂವಿಜ್ಞಾನ ಉಪನಿರ್ದೇಶಕರಾದ ಶ್ರೀ ದ್ವಿತೀಯ ಅವರಿಗೆ ಮತ್ತು ಪ್ರಾದೇಶಿಕ ಕಾರ್ಮಿಕ ಆಯುಕ್ತರಾದ ಶ್ರೀ. ಬಸವರಾಜ ಅವರಿಗೆ ಎಐಯುಟಿಯುಸಿಗೆ ಸಂಯೋಜನೆಗೊಂಡಿರುವ ಸಂಯುಕ್ತ ಗಣಿ ಕಾರ್ಮಿಕರ ಸಂಘದಿಂದ ಮನವಿ ಸಲ್ಲಿಸಲಾಯಿತು.




**30.09.2024:** ಶಹಾಬಾದ ತಾಲೂಕಿನ ಗ್ರಾಮ ಪಂಚಾಯಿತಿ ಕೇಂದ್ರ, ತೋನಸನಹಳ್ಳಿಯಲ್ಲಿ, ಸಂಪೂರ್ಣ ಹದಗೆಟ್ಟ ರಾಜ್ಯ ಹೆದ್ದಾರಿಯನ್ನು ಪುನರ್ ನಿರ್ಮಿಸಲು ಒತ್ತಾಯಿಸಿ ಎಸ್‌ಯುಸಿಐ(ಸಿ) ನೇತೃತ್ವದಲ್ಲಿ ರಸ್ತಾರೋಕೋ ಪ್ರತಿಭಟನೆ




**ಯಾದಗಿರಿ:** ಸಮಾಜ ಕಲ್ಯಾಣ ಇಲಾಖೆಯಲ್ಲಿ 10-12 ವರ್ಷಗಳಿಂದ ಸೇವೆಯಲ್ಲಿ ಇರುವ ಹಾಸ್ಟೆಲ್ ಹೊರಗುತ್ತಿಗೆ ಕಾರ್ಮಿಕರಿಗೆ ಯಾವುದೇ ನೋಟಿಸ್ ನೀಡದೆ, ಕಾರ್ಮಿಕ ನಿಯಮಗಳನ್ನು ಉಲ್ಲಂಘನೆ ಮಾಡಿ ಕೆಲಸದಿಂದ ವಜಾ ಮಾಡಿರುವ ಕ್ರಮವನ್ನು ಖಂಡಿಸಿ ಎಐಯುಟಿಯುಸಿಗೆ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ

## ಶಹಾಬಾದಿಗೆ ಮೂಲಭೂತ ಸೌಲಭ್ಯ ಒದಗಿಸಿ-ಎಸ್‌ಯುಸಿಐ(ಸಿ) ಒತ್ತಾಯ




ಎಸ್‌ಯುಸಿಐ(ಸಿ) ಶಹಾಬಾದ ಸ್ಥಳೀಯ ಸಮಿತಿ ಕಾರ್ಯದರ್ಶಿ ಕಾ. ಗಣಪತರಾವ ಕೆ. ಮಾನೆ ನೇತೃತ್ವದ ನಿಯೋಗವು, ನಗರದಲ್ಲ ಜನ ಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿ 26.09.2024 ರಂದು, ನಗರಸಭೆಯ ನೂತನ ಅಧ್ಯಕ್ಷರಿಗೆ ಮನವಿಪತ್ರ ಸಲ್ಲಿಸಿತು.

## ಸರ್ಕಾರಗಳಿಂದ ಅನ್ನಭಾಗ್ಯಕ್ಕೆ ಕನ್ನ: ಎಸ್‌ಯುಸಿಐ(ಸಿ) ಪ್ರತಿಭಟನೆ




ಕೇವಲ ರೂ.120000 ವಾರ್ಷಿಕ ಆದಾಯದವರನ್ನು ಶ್ರೀಮಂತರೆಂದು ಪರಿಗಣಿಸಿ ಅವರ ಪಡಿತರ ಚೀಟಿಯನ್ನು ಶಾಶ್ವತವಾಗಿ ರದ್ದು ಪಡಿಸುವ ಸರ್ಕಾರದ ಅವೈಜ್ಞಾನಿಕ, ಜನ-ವಿರೋಧಿ ಯೋಜನೆಯನ್ನು ವಿರೋಧಿಸಿ ಎಸ್‌ಯುಸಿಐ (ಸಿ) ಪಕ್ಷದ ಶಹಾಬಾದ ಸ್ಥಳೀಯ ಸಮಿತಿಯ ನೇತೃತ್ವದಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಸಂಘಟಿಸಲಾದ ಪ್ರತಿಭಟನೆ

# ರೈಲ್ವೆ ಸೌಲಭ್ಯಗಳ ಸಮಗ್ರ ಬಲವರ್ಧನೆ ಮತ್ತು ಅಭಿವೃದ್ಧಿಗಾಗಿ ಅಗತ್ಯ ಕ್ರಮ ಕೈಗೊಳ್ಳಿ

## – ಎಐಡಿವೈಓ ಆಗ್ರಹ

ದೇಶದ ಅತಿದೊಡ್ಡ ಸಾರ್ವಜನಿಕ ವಲಯದ ಉದ್ಯಮವಾಗಿರುವ ಭಾರತೀಯ ರೈಲ್ವೆಯನ್ನು ಹಲವಾರು ದಶಕಗಳಿಂದ ಜನಸಾಮಾನ್ಯರ ಬೃಹತ್ ಪ್ರಮಾಣದ ತೆರಿಗೆ ಹಣದಿಂದ ಕಟ್ಟಿ ಬೆಳೆಸಿ, ಪ್ರತೀ ಬಜೆಟ್‌ನಲ್ಲಿಯೂ ವಿಸ್ತರಿಸುತ್ತಾ ಬರಲಾಗಿತ್ತು. ಆದರೀಗ ಅದನ್ನು ಕ್ರಮೇಣವಾಗಿ ದುರ್ಬಲಗೊಳಿಸಲಾಗುತ್ತಿದೆ. ಖಾಸಗೀಕರಣ ಮತ್ತು ವ್ಯಾಪಾರೀಕರಣದ ಕ್ರಮಗಳು ರೈಲ್ವೆ ಪ್ರಯಾಣಿಕರನ್ನು ಬಾಣಲೆಯಿಂದ ಬೆಂಕಿಗೆ ತಳ್ಳಿವೆ. ದೂರಯಾನದ ರೈಲುಗಳಲ್ಲಿನ ಪ್ರಯಾಣವು ದುಸ್ಸಾಧ್ಯವಾಗಿದೆ ಮತ್ತು ಸಾಮಾನ್ಯ ಜನರು ಅಸಹನೀಯ ಪರಿಸ್ಥಿತಿಗಳಲ್ಲಿ ಪ್ರಯಾಣಿಸುವಂತಾಗಿದೆ. ಅಲ್ಲದೆ, ಇತ್ತೀಚಿನ ದಿನಗಳಲ್ಲಿ ಪ್ರಯಾಣಿಕರ ಸುರಕ್ಷತೆಗೆ ಯಾವುದೇ ಖಾತರಿ ಇಲ್ಲದಂತಾಗಿದೆ.

ರೈಲ್ವೆಯಲ್ಲಿ 3.5 ಲಕ್ಷ ಸಿಬ್ಬಂದಿ ಕೊರತೆ ಇದೆ. ಗ್ರೂಪ್ ಸಿ ಮತ್ತು ಲೆವೆಲ್ 1 ವರ್ಗಗಳಲ್ಲಿ ಸುಮಾರು 2.74 ಲಕ್ಷ ಹುದ್ದೆಗಳು ಖಾಲಿ ಇವೆ. ಜೂನ್ 2023ರ ಅಂಕಿಅಂಶಗಳ ಪ್ರಕಾರ ಸುರಕ್ಷತಾ ವಿಭಾಗಗಳಲ್ಲೇ 1.7 ಲಕ್ಷ ಹುದ್ದೆಗಳು ಖಾಲಿ ಇವೆ. ಮೆಕಾನಿಕ್ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ 1.57 ಲಕ್ಷ ಹುದ್ದೆಗಳು ಖಾಲಿ ಇವೆ. ಶುಚಿತ್ವ, ನಿರ್ವಹಣೆ ಮತ್ತು ಕೆಲವು ಭದ್ರತೆಗೆ ಸಂಬಂಧಿಸಿದ ವಿಭಾಗಗಳನ್ನು ಈಗಾಗಲೇ ಖಾಸಗಿಯವರಿಗೆ ಹೊರಗುತ್ತಿಗೆ ನೀಡಲಾಗಿದೆ. ಇನ್ನು, ಲೋಕೋ ಪೈಲಟ್‌ಗಳ ಕೊರತೆಯೂ ಇದೆ. 2019ರಿಂದ 2023 ರವರೆಗೆ ಒಟ್ಟು 162 ರೈಲು ಅಪಘಾತಗಳು ಸಂಭವಿಸಿವೆ. ಇವುಗಳಲ್ಲಿ 118 ಹಳಿತಪ್ಪುವಿಕೆಗಳು ಮತ್ತು 16 ಒಂದಕ್ಕೊಂದು ಡಿಕ್ಕಿಯಾದಂತಹ ಅಪಘಾತಗಳು ಸೇರಿವೆ. ಖಾಲಿ ಹುದ್ದೆಗಳು ಭರ್ತಿಯಾಗದಿರುವುದರಿಂದಲೇ, 2ನೇ ಜೂನ್ 2023ರಂದು, ಒರಿಸ್ಸಾದ ಬಾಲಸೋರ್‌ನಲ್ಲಿ ಈ ಶತಮಾನದಲ್ಲಿಯೇ ಅತ್ಯಂತ ಭೀಕರವಾದ ಅಪಘಾತ ಸಂಭವಿಸಿದೆ. ಈ ತೀವ್ರವಾದ ಸಿಬ್ಬಂದಿ ಕೊರತೆ ಕುರಿತು ಅಖಿಲ ಭಾರತ ಲೋಕೋ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್ ಹಲವು ಬಾರಿ ಪ್ರತಿಭಟನೆ ನಡೆಸಿ ಅಧಿಕಾರಿಗಳಿಗೆ ದೂರು ನೀಡಿದೆ. ದೇಶದಲ್ಲಿ ಕೋಟ್ಯಂತರ ವಿದ್ಯಾವಂತ ನಿರುದ್ಯೋಗಿ ಯುವಕರಿದ್ದಾರೆ. ಕೇಂದ್ರ ಸರ್ಕಾರವು ಖಾಲಿ ಇರುವ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಲು ಮತ್ತು ಸೇವೆಗಳ ವಿಸ್ತರಣೆಗೆ ಅನುಗುಣವಾಗಿ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಲು ಶೀಘ್ರ ಕ್ರಮ ಕೈಗೊಳ್ಳಬೇಕಾಗುತ್ತದೆ.

ಉಲ್ಬಣಗೊಳ್ಳುತ್ತಿರುವ ನಿರುದ್ಯೋಗದಿಂದಾಗಿ, ದೇಶದ ಮೂಲೆ ಮೂಲೆಗಳಲ್ಲಿ ವಲಸೆ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಲೇ ಇದೆ. ಇಂದು ದೂರ ಪ್ರಯಾಣದ ರೈಲುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿರುವುದು ಇವರೇ. ತತ್ಪರಿಣಾಮವಾಗಿ, ಪ್ರತಿ ರೈಲುಗಳೂ ಜನದಟ್ಟಣೆಯಿಂದ ಓಡುತ್ತಿವೆ, ಇದರ ನಿವಾರಣೆಗೆ ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಕಾಯ್ದಿರಿಸದ ಮತ್ತು ಸ್ಲೀಪರ್ ಕೋಚುಗಳು ಕೂಡ ಜನದಟ್ಟಣೆಯಿಂದ ಕೂಡಿದ್ದು, ತಮ್ಮ ಸ್ಥಳಗಳನ್ನು ತಲುಪಲು ಶೌಚಾಲಯಗಳ ಒಳಗೂ ಸಹ 8 ರಿಂದ 10 ಜನರು ಹೇಗಾದರೂ ಜಾಗ ಮಾಡಿಕೊಂಡು ಉಸಿರುಗಟ್ಟುವ ಪರಿಸ್ಥಿತಿಯಲ್ಲಿ ಪ್ರಯಾಣಿಸುತ್ತಿದ್ದಾರೆ. ರೈಲ್ವೆ ಅಧಿಕಾರಿಗಳು ಕಾಯ್ದಿರಿಸದ ಬೋಗಿಗಳು ಮತ್ತು ಸ್ಲೀಪರ್ ಕ್ಲಾಸ್ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸುವ ಬದಲು ಅವುಗಳ ಸಂಖ್ಯೆಯನ್ನು ಮೊಟಕುಗೊಳಿಸಿ, ಎಸಿ ಬೋಗಿಗಳನ್ನು ಹೆಚ್ಚಿಸುತ್ತಿದ್ದಾರೆ.

ಇಂತಹ ಸನ್ನಿವೇಶದಲ್ಲಿ ನಾಗರಿಕ ಪ್ರಯಾಣಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಜರೂರು ಕ್ರಮಗಳನ್ನು ಕೈಗೊಳ್ಳಬೇಕಿದೆ. ಅಲ್ಲದೆ, ಕೋವಿಡ್ 19ರ ಸಾಂಕ್ರಾಮಿಕದ ಕಾಲದಲ್ಲಿ ರದ್ದುಗೊಳಿಸಲಾದ ವಿವಿಧ ವರ್ಗದ ಪ್ರಯಾಣಿಕರಿಗೆ ನೀಡಲಾಗಿದ್ದ ರಿಯಾಯಿತಿಗಳು, ಶುಲ್ಕಗಳಲ್ಲಿ ವಿನಾಯಿತಿ, ರಿಯಾಯಿತಿ ದರ ಮೊದಲಾದ ಅನೇಕ ಕಲ್ಯಾಣ ಕ್ರಮಗಳನ್ನು ತಕ್ಷಣವೇ ಮರು ಜಾರಿಗೊಳಿಸಬೇಕಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಭಾರತೀಯ ರೈಲ್ವೆಯ ಸಾರ್ವಜನಿಕ ಸೇವೆಗಳನ್ನು ಒಂದೊಂದಾಗಿ ಖಾಸಗೀಕರಣ ಮತ್ತು ವ್ಯಾಪಾರೀಕರಣಗೊಳಿಸಲಾಗುತ್ತಿದೆ. ಕಲ್ಯಾಣ ರಾಜ್ಯದ ಪರಿಕಲ್ಪನೆಯಲ್ಲಿ ಕಟ್ಟಲಾದ ರೈಲ್ವೆ ವ್ಯವಸ್ಥೆಯನ್ನು ಕೇವಲ ಗರಿಷ್ಠ ಲಾಭಕ್ಕಾಗಿಯ ಉದ್ಯಮವನ್ನಾಗಿಸಲಾಗುತ್ತಿದೆ.

ಆದ್ದರಿಂದ, ರೈಲ್ವೆಯನ್ನು ಜನಸ್ನೇಹಿಯನ್ನಾಗಿಸಲು ರೈಲ್ವೆ ಸೌಲಭ್ಯಗಳ ಸಮಗ್ರ ಬಲವರ್ಧನೆ ಮತ್ತು ಅಭಿವೃದ್ಧಿಗಾಗಿ ತುರ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್ (ಎಐಡಿವೈಓ) ಇಡೀ ದೇಶದಾದ್ಯಂತ ಸಹಿ ಸಂಗ್ರಹ ಅಭಿಯಾನವನ್ನು ಕಳೆದ ಒಂದು ತಿಂಗಳಿನಿಂದ ಕೈಗೊಂಡಿತ್ತು. ಅದರ ಅಂಗವಾಗಿ ಸಂಘಟನೆಯ ಅಖಿಲ ಭಾರತ ಸಮಿತಿಯ ಕರೆಯ ಮೇರೆಗೆ ಸೆಪ್ಟೆಂಬರ್ 13ರಂದು ದೇಶವ್ಯಾಪಿ ಪ್ರತಿಭಟನಾ ದಿನವನ್ನು ಸಂಘಟಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಡಿವಿಜನಲ್ ರೈಲ್ವೇ ಮ್ಯಾನೇಜರ್‌ಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

### ಹಕ್ಕೊತ್ತಾಯಗಳು:

- ಎಲ್ಲಾ ಖಾಲಿ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಿ ಮತ್ತು ರೈಲ್ವೆ ಸೇವೆಗಳ ವಿಸ್ತರಣೆಗೆ ಅನುಗುಣವಾಗಿ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಿ.
- ರೈಲುಗಳಲ್ಲಿ ಕಾಯ್ದಿರಿಸದ ಮತ್ತು ಸ್ಲೀಪರ್ ಕೋಚ್‌ಗಳನ್ನು ಹೆಚ್ಚಿಸಿ.
- ವಲಸೆ ಕಾರ್ಮಿಕರಿಗಾಗಿ ಸಂಪೂರ್ಣ ಕಾಯ್ದಿರಿಸದ ರೈಲುಗಳನ್ನು ಓಡಿಸಿ.
- ಹಿರಿಯ ನಾಗರಿಕರ ರಿಯಾಯಿತಿಗಳನ್ನು ಮರುಸ್ಥಾಪಿಸಿ. ತತ್ಕಾಲ್ ಪ್ರೀಮಿಯಂ ಸುಲಿಗೆಯನ್ನು ಕೊನೆಗೊಳಿಸಿ.
- ಬುಕ್ ಮಾಡಿದ ಟಿಕೆಟ್‌ಗಳ ಮೇಲಿನ ರದ್ದತಿ ಶುಲ್ಕಗಳನ್ನು ತೆಗೆದುಹಾಕಿ.
- ಭಾರತೀಯ ರೈಲ್ವೆಯ ಖಾಸಗೀಕರಣ ಮತ್ತು ವ್ಯಾಪಾರೀಕರಣವನ್ನು ನಿಲ್ಲಿಸಿ.
- ಬಹುಕಾಲದಿಂದ ರಾಜ್ಯದಾದ್ಯಂತ ನನೆಗುದಿಗೆ ಬಿದ್ದಿರುವ ಬಹು ನಿರೀಕ್ಷಿತ 14 ರೈಲ್ವೆ ಮಾರ್ಗಗಳ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ.

# ಪದವಿ ಅತಿಥಿ ಉಪನ್ಯಾಸಕರ ನೇಮಕ ಮಾಡಲು ಸರ್ಕಾರದ ಆದೇಶ–ವಿದ್ಯಾರ್ಥಿಗಳ ಹೋರಾಟಕ್ಕೆ ಸಂದ ಜಯ!

ಸರ್ಕಾರಿ ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಗೊಂದಲ ನಿವಾರಿಸುವಂತೆ ಎಐಡಿಎಸ್‌ಓ ನೇತೃತ್ವದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಕ್ಟೋಬರ್ 1ರಂದು ಪ್ರತಿಭಟನೆ ನಡೆಸಿದರು.

“ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಆಗಸ್ಟ್ 1 ರಿಂದ ಪದವಿ ತರಗತಿಗಳು ಪ್ರಾರಂಭವಾಗಿದ್ದು, ಎರಡು ತಿಂಗಳು ಕಳೆದರೂ ಇಲ್ಲಿಯವರೆಗೂ ತರಗತಿಗಳು ಸರಿಯಾಗಿ ನಡೆದಿಲ್ಲ. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿದ್ದು, ಕೇವಲ 5 ರಿಂದ 8 ಖಾಯಂ ಉಪನ್ಯಾಸಕರನ್ನು ಮಾತ್ರ ನೇಮಕ ಮಾಡಲಾಗಿದೆ. ಈಗಾಗಲೇ ಪ್ರಕಟಿಸಿರುವ ವೇಳಾಪಟ್ಟಿಯ ಪ್ರಕಾರ, ಡಿಸೆಂಬರ್ 9 ರಿಂದ ಸೆಮಿಸ್ಟರ್ ಪರೀಕ್ಷೆ ಆರಂಭವಾಗಬೇಕಿದೆ. ಅತಿಥಿ ಉಪನ್ಯಾಸಕರ ಕೌನ್ಸಿಲಿಂಗ್ ಅಕ್ಟೋಬರ್‌ನಲ್ಲಿ ನಡೆಯಲಿದ್ದು, ನವೆಂಬರ್‌ನಲ್ಲಿ ನೇಮಕಾತಿ ಆಗುವ ಸೂಚನೆಗಳಿವೆ. ಹಾಗಾದಲ್ಲಿ, ಕೇವಲ ಒಂದೇ ತಿಂಗಳ ಬೋಧನೆ ಪಡೆದು ವಿದ್ಯಾರ್ಥಿಗಳು ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಬಡತನ, ಮನೆಯಲ್ಲಿನ ಆರ್ಥಿಕ ಬಿಕ್ಕಟ್ಟು ಇವೆಲ್ಲವನ್ನೂ ಎದುರಿಸಿ ಬರುತ್ತಿರುವ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಏನನ್ನೂ ಕಲಿಯಲಾಗದಂತಿರುವ ಈ ಪರಿಸ್ಥಿತಿಗೆ ಸರ್ಕಾರದ ನಿರ್ಲಕ್ಷವೇ ಕಾರಣವಾಗಿದೆ. ಇನ್ನಾದರೂ ವಿದ್ಯಾರ್ಥಿಗಳ ಕೂಗು ಕೇಳಿ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಹಾಗೂ ಈ ಕೂಡಲೇ ರಾಜ್ಯದ ಎಲ್ಲಾ ಪದವಿ ಕಾಲೇಜುಗಳಿಗೆ ಉಪನ್ಯಾಸಕರನ್ನು ನೇಮಕಮಾಡಿಕೊಂಡು ತರಗತಿಗಳನ್ನು ಪ್ರಾರಂಭ ಮಾಡಬೇಕು.” ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಬೆಂಗಳೂರಿನ ಜಿಲ್ಲಾ ಸಮಿತಿಯ ನಾಯಕರು ಹಾಗೂ ವಿವಿಧ ಕಾಲೇಜಿನ ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿ ಹೋರಾಟದ ಒತ್ತಡಕ್ಕೆ ಮಣಿದ ರಾಜ್ಯ ಸರ್ಕಾರವು ಹೋರಾಟ ನಡೆದ ಮರುದಿನವೇ ಪದವಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವಂತೆ ಆದೇಶ ನೀಡಿರುವುದು ವಿದ್ಯಾರ್ಥಿ ಹೋರಾಟಕ್ಕೆ ಸಂದ ಜಯವಾಗಿದೆ.

ಕಾರ್ಮಿಕ ದೃಷ್ಟಿಕೋನ
Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಹುತಾತ್ಮ ಭಗತ್ ಸಿಂಗ್ ಚಿರಾಯುವಾಗಲಿ! ರಾಜ್ಯದಾದ್ಯಂತ ಮೊಳಗಿದ ಘೋಷ!!

28.09.2024: ಒಂದು ಶೋಷಣಾರಹಿತ, ಸಮಾನತೆಯ ಕನಸು ಕಂಡಿದ್ದ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ರಾಜಿರಹಿತ ಕ್ರಾಂತಿಕಾರಿ ಸೇನಾನಿ ಭಗತ್‌ಸಿಂಗ್‌ರವರ 117ನೇ ಜನ್ಮ ವಾರ್ಷಿಕ. ಅವರ ವಿಚಾರಧಾರೆಯನ್ನು ಜನರತ್ತ, ವಿಶೇಷವಾಗಿ ಯುವ ಜನರ ಬಳಿ ಕೊಂಡೊಯ್ಯುವ ಉದಾತ್ತ ಕಾರ್ಯಕ್ಕೆ ಪೂರಕವಾಗಿ, ನಮ್ಮ ಪಕ್ಷದ ವಿವಿಧ ಮುಂದಳಗಳು ಒಂದು ವಾರದಿಂದಲೇ ಅನೇಕಾನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು. ಅದರಲ್ಲಿ ಕೆಲವು ಇಲ್ಲಿವೆ.




ಬಳ್ಳಾರಿ: ಮೆಡಿಕಲ್ ಸರ್ವಿಸ್ ಸೆಂಟರ್‌ನ ಜಿಲ್ಲಾ ಸಲಹೆಗಾರರಾದ ಡಾ. ಎನ್. ಪ್ರಮೋದ್ ಪೂಜಾ ನರ್ಸಿಂಗ್ ಕಾಲೇಜಿನಲ್ಲಿ ಮಾತನಾಡಿದರು




ಬೆಂಗಳೂರು: ವಿದ್ಯಾರ್ಥಿಗಳನ್ನುದ್ದೇಶಿಸಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್ ಮಾತನಾಡಿದರು




ಬೆಂಗಳೂರು: ಬಡಾವಣೆಯೊಂದರಲ್ಲಿ ಕಾರ್ಮಿಕ ನಾಯಕರಾದ ಕಾ. ಷಣ್ಮುಗಂ ಮಾತನಾಡುತ್ತಿರುವುದು




ಧಾರವಾಡ : ಎಐಯುಟಿಯುಸಿ ಸಂಯೋಜಿತ, ಕರ್ನಾಟಕ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘದ ಅಮ್ಮಿನಭಾವಿ ಸ್ಥಳೀಯ ಸಮಿತಿಯಿಂದ ಸಂಘಟಿತ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಗಂಗಾಧರ್ ಬಡಿಗೇರ್ ಮಾತನಾಡಿದರು.






ತುಮಕೂರು: ಪಂಜಿನ ಮೆರವಣಿಗೆ

## ಸೆಪ್ಟೆಂಬರ್ 28 – ಭಗತ್ ಸಿಂಗ್ ಜನ್ಮದಿನ




ಜಿಲ್ಲಾ ಕ್ರೀಡಾಂಗಣ - ಚಿತ್ರದುರ್ಗ




ಕೊಪ್ಪಳ



ರಾಮನಗರ: ಕಾಲೇಜಿನಲ್ಲಿ ಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಕಾ. ಶೋಭಾ ನೇತೃತ್ವದಲ್ಲಿ




ಧಾರವಾಡ

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA